ಸಂಪುಟ : 13 Volume 13 | ಸಂಚಿಕೆ : 200 Issue 200 | ಪುಟಗಳು : 08 Pages 08 | ಭಾನುವಾರ 21 ಸೆಪ್ಟೆಂಬರ್ 2025 | ₹2 | RNINO:KARKAN/2011/48371 | BDR/054/2026-20274 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

" ಇತರರಿಗೆ ಕೇಡು ಬಗೆಯಬೇಡಿ , ಇತರರ ಮೇಲೆ ಕಾಲು ಇಡಬೇಡಿ . ನಿಮ್ಮ ಕೈಲಾದಷ್ಟು ಇತರರಿಗೆ ಹಿತವನ್ನೇ ಮಾಡಿರಿ, ಸಾಧ್ಯವಾದಷ್ಟು ಒಳ್ಳೆಯ ಕೆಲಸಗಳಲ್ಲಿ ತೊಡಗಿ "

- ಸ್ವಾಮಿ ವಿವೇಕಾನಂದ

ರೈತರ ಅಭಿವೃದ್ಧಿಯೇ ನನ್ನ ಗುರಿ: 2
ಬೀದರ್ ಕಲಾವಿದರ ಪ್ರದರ್ಶನ 4
ಕ್ರೀಡೆಗಳು ಸದೃಢ ಆರೋಗ್ಯಕ್ಕೆ ಅವಶ್ಯಕ 8

# ಮತಗಳ್ಳತನ ಪ್ರಕರಣಗಳ ತನಿಖೆಗೆ ಎಸ್ಐಟಿ ರಚನೆ

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:ಸೆ.20: ಕಲಬುರಗಿಯ ಆಳಂದ ವಿಧಾನಸಭಾ ಕ್ಷೇತ್ರ ಹಾಗೂ ಬೆಂಗಳೂರಿನ ಮಹದೇವಪುರ ಕ್ಷೇತ್ರ ಸೇರಿದಂತೆ ರಾಜ್ಯದ ಎಲ್ಲಾ ಮತಗಳ್ಳತನ ಪ್ರಕರಣಗಳನ್ನ ತನಿಖೆ ನಡೆಸಲು ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ ರಚನೆ ಮಾಡಿ ಆದೇಶ ಹೊರಡಿಸಿದೆ.

ಸಿಐಡಿ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಬಿ.ಕೆ ಸಿಂಗ್ ಅವರ ನೇತೃತ್ವದಲ್ಲಿ ಸರ್ಕಾರ ಎಸ್ಐಟಿ ರಚನೆ ಮಾಡಿದೆ. ಬಿಕೆ ಸಿಂಗ್ ವಿಶೇಷ ತನಿಖಾ ತಂಡದ ಮುಖ್ಯಸ್ಥರಾಗಿರಲಿದ್ದು, ಸಿಸಿಡಿ, ಸಿಐಡಿ ಅಧೀಕ್ಷಕ ಸೈದುಲು ಅದಾವತ್ ಹಾಗೂ ಎಸ್ಇಡಿ, ಸಿಐಡಿ ಅಧೀಕ್ಷಕಿ ಶುಭಾನ್ವಿತ ಅವರು ತಂಡದಲ್ಲಿ ಇರಲಿದ್ದಾರೆ. 2023 ರಲ್ಲಿ ಕಲಬುರಗಿ ಜಿಲ್ಲೆಯ ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಮತಗಳನ್ನು ಅಳಿಸಲು ಕೆಲವು ವಿಫಲ ಪ್ರಯತ್ನಗಳನ್ನು ಮಾಡಲಾಗಿತ್ತು. ಈ ವಿಷಯದ ಬಗ್ಗೆ ತನಿಖೆ ನಡೆಸಲು ಚುನಾವಣಾ ಆಯೋಗದಿಂದಲೇ ಎಫ್ಐಆರ್ ದಾಖಲಿಸಲಾಗಿದೆ. 2023ರ ಫೆಬ್ರವರಿ 21ರಂದು ನೀಡಿದ ದೂರಿನ ಮೇರೆಗೆ ಆಳಂದ ಪೊಲೀಸ್ ಠಾಣೆಯಲ್ಲಿ ಐಪಿಸಿ ಸೆಕ್ಷನ್ 182, 419, 464, 465 ರಂತೆ ಪ್ರಕರಣ (ಮೊಕದ್ದಮೆ ಸಂಖ್ಯೆ: 26/2023) ದಾಖಲಾಗಿದೆ. ಈ



ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಗೂ ರಾಜ್ಯದ ಇತರೇ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಹಾಗೂ ದಾಖಲಾಗಬಹುದಾದ ಇತರೇ ಪ್ರಕರಣಗಳ ಸಮಗ್ರ ತನಿಖೆ ನಡೆಸಲು ರಾಜ್ಯ ಸರ್ಕಾರ ಈ ಕ್ರಮ ಕೈಗೊಂಡಿದೆ.

ಅದಕ್ಕಾಗಿ ಸಿಐಡಿ ಪೊಲೀಸ್ ಮಹಾ ನಿರ್ದೇಶಕರಾದ ಬಿ.ಕೆ ಸಿಂಗ್ ಅವರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನ ರಚಿಸಲಾಗಿದೆ. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ – 2023 ರ ಕಲಂ 2 (ಯು) ಅಡಿಯಲ್ಲಿ ತನಿಖಾ ತಂಡಕ್ಕೆ ಪೊಲೀಸ್ ಠಾಣಾಧಿಕಾರ ನೀಡಲಾಗಿದೆ. ಈ ಎಸ್ಐಟಿ ತಂಡಕ್ಕೆ ಆಳಂದ ಪ್ರಕರಣ ಸೇರಿದಂತೆ ರಾಜ್ಯದ ಇತರೇ ಪೊಲೀಸ್ ಠಾಣೆಗಳಲ್ಲೂ ದಾಖಲಾಗಿರುವ ಹಾಗೂ ದಾಖಲಾಗುವ ಎಲ್ಲಾ ಕ್ರಿಮಿನಲ್ ಪ್ರಕರಣಗಳನ್ನು ತನಿಖೆ ನಡೆಸುವ ಜವಾಬ್ದಾರಿ ನೀಡಲಾಗಿದೆ. ಆದ್ದರಿಂದ ಡಿಜಿ ಐಜಿಪಿ ಈ ವಿಶೇಷ ತನಿಖಾ ತಂಡಕ್ಕೆ ಅವಶ್ಯಕವಿರುವ ಇತರೇ ಅಧಿಕಾರಿ ಅಥವಾ ಸಿಬ್ಬಂದಿಗಳನ್ನು ಒಸಗಿಸುವಂತೆ ಆದೇಶದಲ್ಲಿ ತಿಳಿಸಿದೆ. ಅದರಂತೆ ತನಿಖಾ ತಂಡವು ಎಲ್ಲಾ ಆಮಾಯಗಳಲ್ಲಿ ಪ್ರಕರಣಗಳ ಸಮಗ್ರ ತನಿಖೆ ಕೈಗೊಂಡು, ಶೀಘ್ರದಲ್ಲೇ ತನಿಖೆಯನ್ನು ಪೂರ್ಣಗೊಳಿಸಬೇಕು. ಬಳಿಕ ತನಿಖಾ ವರದಿಯನ್ನು ಸಕ್ಷಮ ನ್ಯಾಯಾಲಯಗಳಿಗೆ ಸಲ್ಲಿಸಬೇಕು ಎಂದು ಸೂಚನೆ ನೀಡಿದೆ.

## ಎಸ್ಎಸ್ಎಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿ ಪ್ರಕಟ

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿಯು 2025–26ನೇ ಸಾಲಿನ ದ್ವಿತೀಯ ಪಿಯುಸಿ ಮತ್ತು ಎಸ್ಎಸ್ಎಲ್ಸಿ ವಾರ್ಷಿಕ ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿಯನ್ನು ಶನಿವಾರ ಬಿಡುಗಡೆ ಮಾಡಿದೆ.ತಾತ್ಕಾಲಿಕ ವೇಳಾಪಟ್ಟಿಯ ಪ್ರಕಾರ, ದ್ವಿತೀಯ ಪಿಯುಸಿ ಪರೀಕ್ಷೆಗಳು 2026ರ ಫೆಬ್ರವರಿ 28 ರಂದು ಪ್ರಾರಂಭವಾಗಲಿದ್ದು, ಮಾರ್ಚ್ 17 ರಂದು ಪರೀಕ್ಷೆಗಳು ಮುಕ್ತಾಯಗೊಳ್ಳಲಿವೆ. ದ್ವಿತೀಯ ಪಿಯುಸಿ ಪರೀಕ್ಷೆ – 2ರ ತಾತ್ಕಾಲಿಕ ವೇಳಾಪಟ್ಟಿ ಪ್ರಕಾರ, 2026ರ ಏಪ್ರಿಲ್ 25 ರಂದು ಪರೀಕ್ಷೆ ಶುರುವಾಗಿ, ಮೇ 9 ರಂದು ಕೊನೆಗೊಳ್ಳಲಿದೆ.ದ್ವಿತೀಯ ಪಿಯುಸಿ ಪರೀಕ್ಷೆಯ ನಂತರ ಎಸ್ಎಸ್ಎಲ್ಸಿ ಪರೀಕ್ಷೆ 2026ರ ಮಾರ್ಚ್ 18 ರಂದು ಆರಂಭವಾಗಿ ಏಪ್ರಿಲ್ 1 ರಂದು ಕೊನೆಗೊಳ್ಳಲಿದೆ.ಎಸ್ಎಸ್ಎಲ್ಸಿ ಪರೀಕ್ಷೆ – 2ರ ತಾತ್ಕಾಲಿಕ ವೇಳಾಪಟ್ಟಿಯಂತೆ ಮೇ 18ರಂದು ಪರೀಕ್ಷೆ ಆರಂಭವಾಗಿಮೇ 25 ರಂದು ಕೊನೆಗೊಳ್ಳಲಿದೆ.ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಜಾಲತಾಣ £££.mb.mbwqb|bmb..q ವೇಳಾಪಟ್ಟಿಯನ್ನು ಪ್ರಕಟಿಸಿದ್ದು, ಈ ತಾತ್ಕಾಲಿಕ ವೇಳಾಪಟ್ಟಿಗೆ ವಿದ್ಯಾರ್ಥಿಗಳು, ಪೋಷಕರು ಮತ್ತು ಸಾರ್ವಜನಿಕರಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಸೆಪ್ಟೆಂಬರ್ 20 ರಿಂದ ಅಕ್ಟೋಬರ್ 9 ರ ವರೆಗೆ ಕಾಲಾವಕಾಶವನ್ನು ನೀಡಿದೆ. ಅಕ್ಷೇಪಣೆಗಳನ್ನು ಇ-ಮೇಲ್ ಮೂಲಕ ebwtwqmbo.e ಗೆ ಸಲ್ಲಿಸಬಹುದು.

## ರಷ್ಯಾ ಮೇಲೆ ಉಕ್ರೇನ್ ಡ್ರೋನ್ ದಾಳಿ; ನಾಲ್ವರು ಸಾವು

ಮಾಸ್ಕೋ:ಸೆ.20: ರಷ್ಯಾದ ನೈಋತ್ಯ ಸಮಾರಾ ಪ್ರದೇಶದ ಮೇಲೆ ಉಕ್ರೇನ್ ಡ್ರೋನ್ ದಾಳಿ ನಡೆಸಿದ್ದು, ದಾಳಿಯಲ್ಲಿ ನಾಲ್ವರು ಸಾವನ್ನಪ್ಪಿದ್ದಾರೆ ಎಂದು ಸ್ಥಳೀಯ ಗವರ್ನರ್ ಶನಿವಾರ ಹೇಳಿದ್ದಾರೆ. ಉಕ್ರೇನ್ ನಿನ್ನೆ ರಾತ್ರಿ ರಷ್ಯಾ ಮೇಲೆ ನೂರಾರು ಡ್ರೋನ್‌ಗಳನ್ನು ಹಾರಿಸಿದ್ದು, ದಾಳಿಯಲ್ಲಿ ಮೂವರು ಸಾವನ್ನಪ್ಪಿದ್ದಾರೆ

## ಬೆತ್ತಲೆ ಮಾಡಿ ಕಟ್ಟಿಗೆಯಿಂದ ಹೊಡೆದು ಬರ್ಬರ ಹತ್ಯೆ




ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:ಸೆ.20: ಬೆತ್ತಲೆ ಮಾಡಿ ಕಟ್ಟಿಗೆಯಿಂದ ಹೊಡೆದು ವ್ಯಕ್ತಿಯನ್ನ ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಕಲಬುರಗಿ ನಗರದ ಕುಷ್ಟರೋಗಿಗಳ ಕಾಲೋನಿಯಲ್ಲಿ ಶುಕ್ರವಾರ ರಾತ್ರಿ ನಡೆದಿದೆ. ಚಾಂದ್‌ಸಾಬ್ ಕೊಲೆಯಾದ ದುರ್ದೈವಿ. ಶುಕ್ರವಾರ ರಾತ್ರಿ ಚಾಂದ್‌ಸಾಬ್ ಮನೆಯಲ್ಲೇ ಪರಿಚಿತರೊಂದಿಗೆ ಎಣ್ಣೆ ಪಾರ್ಟಿ ನಡೆಸಿದ್ದರು. ಈ ವೇಳೆ ಗಲಾಟೆ ನಡೆದು ಚಾಂದ್‌ಸಾಬ್‌ನನ್ನು ಬೆತ್ತಲೆ ಮಾಡಿ ಕಟ್ಟಿಗೆಯಿಂದ ಹೊಡೆದು ಬರ್ಬರವಾಗಿ ಹತ್ಯೆ ಮಾಡಲಾಗಿದೆ. ಮೃತರ ಪತ್ನಿ ದೆಹಲಿಯಲ್ಲಿ ವಾಸವಿದ್ದು, ಪತಿಯ ಸಾವಿನ ಬಗ್ಗೆ ತಿಳಿದು ಕಲಬುರಗಿಯತ್ತ ಆಗಮಿಸುತ್ತಿದ್ದಾರೆ. ಘಟನಾ ಸ್ಥಳಕ್ಕೆ ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ರಾಘವೇಂದ್ರ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಾಲುಜಾರಿ ಭೀಮಾನದಿ ಪಾಲಾದ ಯುವಕ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ,ಸೆ 20: ಬೆಡ್ ಶೀಟ್ ಒಗೆಯುತ್ತಿದ್ದ ವೇಳೆ ಕಾಲುಜಾರಿ ಬಿದ್ದು ಯುವಕನೊಬ್ಬ ಭೀಮಾನದಿ ಪಾಲಾದ ಹೃದಯವಿದ್ರಾವಕ ಘಟನೆಯೊಂದು ಅಫಜಲಪುರ ತಾಲೂಕಿನ ಮಣೂರ ಗ್ರಾಮದಲ್ಲಿ ನಡೆದಿದೆ.ಭೋಗೇಶ್ ರೇವಣಪ್ಪ ಬುರುಡ (20) ಮೃತಪಟ್ಟ ಯುವಕ. ನವರಾತ್ರಿ ಹಬ್ಬದ ಹಿನ್ನೆಲೆಯಲ್ಲಿ ಮಣ್ಣೂರು ಗ್ರಾಮದ ಶ್ರೀ ಯಲ್ಲಮ್ಮದೇವಿ ದೇವಸ್ಥಾನ ಬಳಿ ಭೀಮಾ ನದಿಯಲ್ಲಿ ಬೆಡ್‌ಶೀಟ್‌ಗಳನ್ನು ತೊಳೆಯುತ್ತಿದ್ದ ವೇಳೆ ಭಾಗೇಶ್ ಕಾಲುಜಾರಿ ನದಿಗೆ ಬಿದ್ದಿದ್ದಾನೆ. ನದಿ ನೀರಿನ ಸೆಳೆವು ಹೆಚ್ಚಾಗಿರುವಕಾರಣಕ್ಕಾಗಿ ಆತ ದಡಕ್ಕೆ ತಲುಪಲಾಗದೆ ನೀರುಪಾಲಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.ಸ್ಥಳಕ್ಕೆ ಅಗ್ನಿಶಾಮಕ ದಳ ಸಿಬ್ಬಂದಿ ಆಗಮಿಸಿದ್ದು ನೀರುಪಾಲಾದ ಯುವಕನಿಗಾಗಿ ಶೋಧ ಕಾರ್ಯಆರಂಭಿಸಿದ್ದಾರೆ. ಅಫಜಲಪುರ ಠಾಣೆ ಪೊಲೀಸರು ಸ್ಥಳದಲ್ಲಿ ಬೀಡು ಬಿಟ್ಟಿದ್ದಾರೆ.

## ಪಂ. ಕೆ .ವೆಂಕಟೇಶ್ ಕುಮಾರ್‌ಗೆ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು, ಸೆ 20 :ಪ್ರತಿ ವರ್ಷ ನಾಡ ಹಬ್ಬ ದಸರಾ ಸಂದರ್ಭದಲ್ಲಿ ಮೈಸೂರಿನ ಅರಮನೆಯ ಮುಂಭಾಗದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನೀಡಲಾಗುವ ಪ್ರತಿಷ್ಠಿತ ಸಂಗೀತ ವಿದ್ವಾನ್ ಪ್ರಶಸ್ತಿಗೆ ಪ್ರಸಕ್ತ ಸಾಲಿನಲ್ಲಿ ಪಂ. ಕೆ ವೆಂಕಟೇಶ್ ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದ್ದಾರೆ. ದೇಶ ವಿದೇಶಗಳಲ್ಲಿ ತಮ್ಮ ಅದ್ಭುತ ಗಾಯನದ ಮೂಲಕ ಖ್ಯಾತರಾಗಿರುವ ಹಿಂದುಸ್ತಾನಿ ಸಂಗೀತ ದಿಗ್ಗಜರಲ್ಲಿ ಒಬ್ಬರೆನಿಸಿದ ಪಂ. ವೆಂಕಟೇಶ್ ಕುಮಾರ್ ಅವರ ಆಯ್ಕೆ ಅತ್ಯಂತ ಸಂತೋಷ ತಂದಿದೆ.ಸೆಪ್ಟೆಂಬರ್ 22ರಂದು ಮೈಸೂರಿನ ಅರಮನೆಯ ಮುಂಭಾಗದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಈ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.ಡಾ. ವೈ.ಕೆ. ಮುದ್ದುಕೃಷ್ಣ ಅವರ ಆಯ್ಕೆ ಸಲಹಾ ಸಮಿತಿ ಪಂ. ವೆಂಕಟೇಶ್ ಕುಮಾರ್ ಅವರನ್ನು ಆಯ್ಕೆ ಮಾಡಿದೆ ಎಂದು ಅವರು ತಿಳಿಸಿದರು.ಈ ಪ್ರಶಸ್ತಿಯು ಐದು ಲಕ್ಷ ರೂಪಾಯಿ ನಗದು, ಸ್ಮರಣಿಕೆ ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ.



## ಪ್ರಧಾನಿಗೆ ತಾನು ಬಿಡಿಸಿದ ಚಿತ್ರ ಕೊಟ್ಟು ಭಾವುಕನಾದ ಬಾಲಕ



ಮಲ್ಲಮ್ಮ ನುಡಿ ವಾರ್ತೆ ಗಾಂಧಿನಗರ:ಸೆ.20: ಭಾವನಗರದ ರ್ಯಾಲಿಯಲ್ಲಿ ಪ್ರಧಾನಿ ಮೋದಿ ಭಾಷಣ ಮಾಡುತ್ತಿದ್ದ ವೇಳೆ ಬಾಲಕನೋರ್ವ ತಾನು ಬಿಡಿಸಿದ ಚಿತ್ರವನ್ನು ಮೋದಿಗೆ ನೀಡಿ ಭಾವುಕನಾಗಿ ಕಣ್ಣೀರು ಹಾಕಿದ್ದಾನೆ.

ಭಾಷಣದ ವೇಳೆ ಬಾಲಕ ತನ್ನ ಚಿತ್ರವನ್ನು ಹಿಡಿದುಕೊಂಡು ನಿಂತಿರುವುದನ್ನು ಗಮನಿಸಿದ ಮೋದಿ ಅದನ್ನು ತೆಗೆದುಕೊಂಡು ಬರುವಂತೆ ಸೂಚಿಸಿದರು. ತಾನು ಬಿಡಿಸಿದ ಚಿತ್ರವನ್ನು ಮೋದಿ ಸ್ವೀಕರಿಸಿದ ವೇಳೆ ಬಾಲಕ ಭಾವುಕನಾಗಿ ಕಣ್ಣೀರು ಹಾಕಿದ್ದಾನೆ. ಈ ವೇಳೆ ವೇದಿಕೆಯಿಂದಲೇ ಮಾತನಾಡಿದ ಮೋದಿ, ನೀನು ಬಿಡಿಸಿದ ಚಿತ್ರ ನನಗೆ ತಲುಪಿದೆ, ಅಳಬೇಡ ಎಂದು ಬಾಲಕನಿಗೆ ಸಮಾಧಾನ ಮಾಡಿದ್ದಾರೆ. ಅಲ್ಲದೇ ನಿನ್ನ ಮನೆಯ ಅಡ್ರೆಸ್ ಅದರಲ್ಲಿ ಬರೆದರೆ ಆದಷ್ಟು ಬೇಗ ನಿನಗೆ ಪತ್ರ ಬರೆಯುತ್ತೇನೆ ಎಂದು ಭರವಸೆ ನೀಡಿದರು. ಚಿಕ್ಕಚಿಕ್ಕ ಮಕ್ಕಳ ಪ್ರೀತಿಗಿಂತ ದೊಡ್ಡದು ಜೀವನದಲ್ಲಿ ಏನಿದೆ ಎಂದು ಮೋದಿ ಸಂತಸಪಟ್ಟರು.

## ಬೇರೆ ದೇಶದ ಮೇಲಿನ ಅವಲಂಬನೆಯೇ ನಮ್ಮ ದೊಡ್ಡ ಶತ್ರು : ಮೋದಿ

ಮಲ್ಲಮ್ಮ ನುಡಿ ವಾರ್ತೆ ಗಾಂಧಿನಗರ: ಸೆ.20:ಭಾರತ ವಿಶ್ವಬಂಧು ಭಾವನೆಯಲ್ಲಿ ಮುಂದೆ ಸಾಗುತ್ತಿದೆ. ನಮಗೆ ವಿಶ್ವದಲ್ಲಿ ಯಾರೂ ಶತ್ರುಗಳಿಲ್ಲ . ಆದ್ರೆ ಬೇರೆ ದೇಶದ ಮೇಲಿನ ಅವಲಂಬನೆಯೇ ನಮ್ಮ ದೊಡ್ಡ ಶತ್ರು ಎಂದು ಪ್ರಧಾನಿ ನರೇಂದ್ರ ಮೋದಿ ಎಚ್ಚರಿಸಿದರು.ಗುಜರಾತ್‌ನ ಭಾವನಗರದಲ್ಲಿ ನಡೆದ 'ಸಮುದ್ರ ಸೆ ಸಮೃದ್ಧಿ' ಕಾರ್ಯಕ್ರಮದಲ್ಲಿ ಪಾಲ್ಗೊಂಡು 34,200 ಕೋಟಿ ರೂಪಾಯಿಗಳ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ, ಉದ್ಘಾಟನೆ ನೆರವೇರಿಸಿದರು. ಬಳಿಕ ಸಾರ್ವಜನಿಕ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, ಟ್ರಂಪ್ 50% ಸುಂಕ ನೀತಿಗೆ ಗುದ್ದು ನೀಡಿದರು. ಆತ್ಮನಿರ್ಭರ ಭಾರತದ ಮಹತ್ವವನ್ನು ಪ್ರತಿಪಾದಿಸುತ್ತಾ, ಭಾರತದಲ್ಲೇ ತಯಾರಾದ ಉತ್ಪನ್ನ ಗಳನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ವಿದೇಶಗಳ ಮೇಲಿನ ಅವಲಂಬನೆ ಕಡಿಮೆ ಮಾಡಬೇಕು ಎಂದು ದೇಶದ ಜನತೆಗೆ ಕರೆ ನೀಡಿದರು.ಇಂದು ಭಾರತ ವಿಶ್ವಬಂಧು ಭಾವನೆಯಿಂದ ಮುಂದುವರಿಯುತ್ತಿದೆ. ಹಾಗಾಗಿ ಜಗತ್ತಿನಲ್ಲಿ ನಮಗೆ ಯಾವುದೇ ದೊಡ್ಡ ಶತ್ರು ಇಲ್ಲ. ಆದ್ರೆ ಇತರರ ಮೇಲಿನ ಅವಲಂಬನೆಯೇ ನಮಗೆ ದೊಡ್ಡ ಶತ್ರು. ಆದ್ದರಿಂದ ನಾವು ಒಟ್ಟಾಗಿ ಈ ಅವಲಂಬನೆಯ ಶತ್ರುವನ್ನು ಸೋಲಿಸಬೇಕು ಎಂದು ಕರೆ ನೀಡಿದರು.ವಿದೇಶಿ ಅವಲಂಬನೆ ಹೆಚ್ಚಾದಷ್ಟು ದೇಶದ ವೈಫಲ್ಯ ಹೆಚ್ಚಾಗುತ್ತದೆ. ಹಾಗಾಗಿ ವಿಶ್ವದಲ್ಲೇ ಅತಿಹೆಚ್ಚು ಜನಸಂಖ್ಯೆಯನ್ನ ಹೊಂದಿರುವ ನಾವು ದೇಶದ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಗಾಗಿ ಆತ್ಮನಿರ್ಭರವಾಗಬೇಕು. ಇತರರ ಮೇಲೆ ಅವಲಂಬಿತರಾಗಿದ್ದರೆ, ನಮ್ಮ ಸ್ವಾಭಿಮಾನಕ್ಕೆ ಧಕ್ಕೆಯಾಗುತ್ತದೆ. ಭಾರತದ ಅಭಿವೃದ್ಧಿಯನ್ನು ಇತರ ದೇಶಗಳ ಮೇಲೆ ಬಿಡಬಾರದು. ಭವಿಷ್ಯದ ಪೀಳಿಗೆಯನ್ನು ಪಣಕ್ಕಿಡಬಾರದು. 140 ಕೋಟಿ ದೇಶವಾಸಿಗಳ ಭವಿಷ್ಯವನ್ನ ನಾವು ಇತರರಿಗೆ ಬಿಡಲು ಸಾಧ್ಯವಿಲ್ಲವೆಂದೂ ಪ್ರಧಾನಿ ಹೇಳಿದರು. ಇದೇ ವೇಳೆ ಭಾರತೀಯ ಪೋರ್ಟ್ (ಬಂದರು) ಗಳ ದಾಖಲಾತಿಗೆ ಸಂಬಂಧಿಸಿದ ಸುಧಾರಣೆಗಳನ್ನು ಪರಿಚಯಿಸುವುದಾಗಿ ಹೇಳಿದ ಅವರು, ಶೀಘ್ರದಲ್ಲೇ ಭಾರತೀಯ ಬಂಧರುಗಳಿಗೆ ಒಂದು ರಾಷ್ಟ್ರ – ಒಂದು ದಾಖಲಾತಿ' ಎಂಬ ಹೊಸ ಸುಧಾರಣೆ ತರಲಿದ್ದೇವೆ.



## ಹುಮನಾಬಾದ್ ಪಟ್ಟಣದ ಸಮಗ್ರ ಅಭಿವೃದ್ಧಿಗೆ ಪಕ್ಷಾತೀತವಾಗಿ ಶ್ರಮಿಸುವದು ಅವಶ್ಯಕ



ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್:ಸೆ.20: ನಗರದ ಜನತೆಗೆ ಕುಡಿಯುವ ನೀರು, ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು, ತಪಿತಸ್ಥ ಅಧಿಕಾರಿಗಳ ವಿರುದ್ಧ ಲೋಕಾಯುಕ್ತರಿಗೆ ದೂರು ನೀಡಬೇಕು ಪಕ್ಷಾತೀತವಾಗಿ ನಗರವನ್ನು ಅಭಿವೃದ್ಧಿ ಪಡಿಸೋಣ ಎಂದು ಶಾಸಕ ಸಿದ್ದು ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ ಪಾಟೀಲ, ಭೀಮರಾವ ಪಾಟೀಲ ಒಮ್ಮತದ ನಿರ್ಣಯ ತೆಗೆದುಕೊಂಡರು.ಶಾಸಕರು ಮಾತನಾಡಿ. ಕೆಕೆಆರ್ ಡಿಬಿಯಿಂದ ನಗರದ ಅಭಿವೃದ್ಧಿ ಗೆ ರೂ,10 ಕೋಟಿ ಅನುದಾನ ನೀಡಲಾಗುತ್ತದೆ. ಸದಸ್ಯರು ಪಕ್ಷಾತೀತವಾಗಿ ತಮ್ಮ ವಾರ್ಡಗಳ ಸಮಸ್ಯೆಗಳ ಕುರಿತು ಮುಖ್ಯಾಧಿಕಾರಿ ಗಳಿಗೆ ಅರ್ಜಿ ಸಲ್ಲಿಸಬೇಕು ಎಂದರು. ಕಾರಂಜಾ ಜಲಾಶಯದಿಂದ ನೀರು ಸರಬರಾಜು ಸರಿಯಾದ ರೀತಿ ಆಗಬೇಕು ಎಂದ ಅವರು. ನಗರದಲ್ಲಿ ನಡೆಯುತ್ತಿರುವ ನೀರಿನ ಪೈಪಲೈನ್ ಕಾಮಗಾರಿ ಸರಿಯಾದ ರೀತಿಯಿಂದ ಆಗುತ್ತಿಲ್ಲ. ತಕ್ಷಣ ಕಾಮಗಾರಿ ನಿಲ್ಲಿಸಬೇಕು. ಎಂದು ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ ಸೂಚಿಸಿದರು, ಈಗಾಗಲೆ ಕುಡಿಯುವ ನೀರಿನ ಮೋಟಾರು ರಿಪೇರಿಗಾಗಿ ಕಲಬುರ್ಗಿ, ಯಾದಗಿರಿ, ಮೆಕ್ಯಾನಿಕರಿಂದ ಕೊಟೆಶನ್ ಕರೆಯಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ ಮಾತನಾಡಿ, ಹಿಂದಿನ ಸಭೆಯ ನಿರ್ಣಯಗಳು ಓದಿ ತಿಳಿಸಿ. ಅದರಲ್ಲಿ ಎಷ್ಟು ಅನುಷ್ಠಾನ ಆಗಿವೆ. ಶಾಸಕರು, ಎಂಎಲ್ ಸಿಗಳು ಬಂದು ಸಲಹೆ ಸೂಚನೆಗಳನ್ನು ನೀಡಿದರೂ ಅವುಗಳು ಯಾಕೆ ಪಾಲನೆ ಆಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತ ಪಡಿಸಿದರು. ಸದಸ್ಯರಾದ ಅಫ್ಸರ್ ಮಿಯಾ, ಎಂ.ಎ ಬಾಸಿದ್, ರಮೇಶ ಕಲ್ಲೂರ, ವಿರೇಶ ಸೀಗಿ, ವಿಜುಕುಮಾರ ದುರ್ಗದ, ಮಾತನಾಡಿ ಕಳೆದ 9 ತಿಂಗಳಿಂದ ಸಭೆ ಜರುಗಿಲ್ಲ, ಸಭೆಗಳು ನಡೆಯಬೇಕು ಆವಾಗಮಾತ್ರ ಸಾರ್ವಜನಿಕರ ಸಮಸ್ಯೆಗಳ ಮೇಲೆ ಬೆಳಕು ಚಲ್ಲಲು ಸಾಧ್ಯವಾಗುತ್ತದೆ ಎಂದರು. ಶಾಸಕ ಸಿದ್ದು ಪಾಟೀಲ ಮಾತನಾಡಿ ಸಭೆಗಳು ಕಾಲ ಕಾಲಕ್ಕೆ ನಡೆಸಬೇಕು ಎಂದರು. ಸಭೆಯು 11:30ಕ್ಕೆ ನಿಗದಿಯಾಗಿತ್ತು. ಆದರೆ 12:45 ಕ್ಕೆ ಆರಂಭವಾಯಿತು. ಮುಖ್ಯಾಧಿಕಾರಿ ವನಿತಾಬಾಯಿ ರವರು ಸ್ವಾಗತಿಸಿ, ಶಾಸಕರುಗಳಿಗೆ ಸನ್ಮಾನಿಸಿದರು, ಪುರಸಭೆ ಅಧ್ಯಕ್ಷ ಪಾರ್ವತಿ ಶೇರಿಕಾರ, ಉಪಾಧ್ಯಕ್ಷ ಮುಕ್ರಂ ವೇದಿಕೆಯ ಮೆಲಿದ್ದರು

> ಹುಮನಾಬಾದ್ ಪುರಸಭೆಯಲ್ಲಿರುವ ಸಿಬ್ಬಂದಿಗಳ ಕೊರತೆಯನ್ನು ಬಗೆಹರಿಸಬೇಕು, ಈ ಕ್ಷೇತ್ರದಲ್ಲಿ ಮೂರು ಪುರಸಭೆಗಳು ಬರುತ್ತಿದ್ದು. ಹುಮನಾಬಾದ್ ನಗರಸಭೆಯಾಗಿದೆ. ಯಾಕೆ ನಮ್ಮ ಕ್ಷೇತ್ರದ ಕಡೆ ಜಿಲ್ಲಾ ಉಸ್ತುವಾರಿ ಸಚಿವರು, ಪೌರಾಡಳಿತ ಸಚಿವರು ಗಮನಹರಿಸುತ್ತಿಲ್ಲ. ಈ ಬಗ್ಗೆ ಶಾಸಕರು, ಪುರಸಭೆಯ ಅಧ್ಯಕ್ಷ, ಉಪಾಧ್ಯಕ್ಷ ಸರ್ವ ಸದಸ್ಯರ ನಿಯೋಗವನ್ನು ತೆಗೆದುಕೊಂಡು ಹೋಗೋಣ.
>
> ಭೀಮರಾವ ಪಾಟೀಲ. ಎಂಎಲ್ ಸಿ

> ಸಚಿವರುಗಳು ಜಿಲ್ಲೆಯವರೆ ಇದ್ದಾರೆ. ದಿನಾಂಕ ನಿಗದಿ ಮಾಡಿದ ತಕ್ಷಣ ಎಲ್ಲರು ಸೇರಿ ಹೋಗೋಣ. ವಿಶೇಷ ಅನುದಾನ ಯಾಕೆ ನೀಡುತ್ತಿಲ್ಲ. ಎರಡು ವರೆ ವರ್ಷ ಕಳೆಯುತ್ತಿದೆ. ಸಚಿವರಿಗೆ ಕೇಳೋಣ.
>
> ಶಾಸಕ ಸಿದ್ದು ಪಾಟೀಲ.

> ಪುರಸಭೆಯ ಆಡಳಿತ ಮಂಡಳಿಯವರು ಒಂಬತ್ತು ತಿಂಗಳಿಂದ ಸಭೆ ಕರೆದಿಲ್ಲ ಎಂಬನೆಪ ಹೇಳುವ ಬದಲು. ಶಾಸಕ ಸಿದ್ದು ಪಾಟೀಲ ರವರೇ ಅಧಿಕಾರಿಗಳ ಸಭೆ ಕರೆಯಬಹುದಿತ್ತಲ್ಲವೆ. ಜನರ ಸಮಸ್ಯೆಗಳಿಗೆ ಸ್ಪಂದಿಸಬಹುದಿತ್ತು ಯಾಕೆ ಸಭೆ ಕರೆದಿಲ್ಲ.
>
> ಡಾ.ಚಂದ್ರಶೇಖರ್ ಪಾಟೀಲ

## ಸಿಎಂ–ಡಿಸಿಎಂ ಜೊತೆ ಸುರ್ಜೆವಾಲಾ ಮೀಟಿಂಗ್: ನಿಗಮ–ಮಂಡಳಿ ಅಧ್ಯಕ್ಷರ ನೇಮಕ ಚರ್ಚೆ

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:ಸೆ.20: ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಬೆಂಗಳೂರಿನಲ್ಲಿ ರಾಜ್ಯ ಖಾತರಿ ಸಮಿತಿಯ ಅಧ್ಯಕ್ಷರು ಮತ್ತು ಐವರು ಉಪಾಧ್ಯಕ್ಷರೊಂದಿಗೆ ಸಭೆ ನಡೆಸಿದ್ದರು. ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಪ್ರಯೋಜನಗಳು ಸಾಮಾನ್ಯ ಜನರಿಗೆ ತಲುಪುವಂತೆ ನೋಡಿಕೊಳ್ಳಲು ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚಿಸಿದರು. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪ್ರತಿ ನಿಗಮದ ಉಸ್ತುವಾರಿ ವಹಿಸಲಾಗಿರುವ ಐವರು ಅಧ್ಯಕ್ಷರು, ಖಾತರಿಗಳ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುವಂತೆ ಸೂಚಿಸಿದರು. ಜಿಬಿಎಗೆ ಮುಂಬರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು, ಸುರ್ಜೇವಾಲಾ ರಾಜ್ಯ ಖಾತರಿ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ ಮತ್ತು ಐವರು ಅಧ್ಯಕ್ಷರಿಗೆ ಖಾತರಿಗಳ ಕುರಿತು ಫಲಾನುಭವಿಗಳಿಂದ ಪ್ರತಿಕ್ರಿಯೆ ಪಡೆದು ತಮಗೆ ವರದಿ ಸಲ್ಲಿಸುವಂತೆ ಹೇಳಿದರು ಎಂದು ಮೂಲಗಳು ತಿಳಿಸಿವೆ.ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಸಹ ಮಾತುಕತೆ ನಡೆಸಿದ ಸುರ್ಜೇವಾಲಾ ಅವರು, ನಿಗಮ–ಮಂಡಳಿಗಳಿಗೆ ಅಧ್ಯಕ್ಷರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸುವಂತೆ ತಿಳಿಸಿದರು.

## ಹೈಮಾಸ್ಕ್ ದೀಪಕ್ಕೆ ಚಾಲನೆ ಕ್ಷೇತ್ರದ ಅಭಿವೃದ್ಧಿ ಶ್ರಮಿಸುತ್ತಿರುವ ಭೀಮರಾವ ಪಾಟೀಲ್ : ಬಗ್ದಲಕರ್

ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:ಸೆ.20: ಪಟ್ಟಣದ ಅಭಿವೃದ್ಧಿಗೆ ಪಾಟೀಲ ಪರಿವಾರದವರು ಲಿಂಗೈಕ್ಯ ಬಸವರಾಜ ಪಾಟೀಲ ಹಾಗೂ ಮಾಜಿ ಸಚಿವ ರಾಜಶೇಖರ ಪಾಟೀಲ್ ಅವರ ಮಾದರಿಯಲ್ಲಿಯೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ ಎಂದು ಪುರಸಭೆ ಅಧ್ಯಕ್ಷ ದಿಲೀಪಕುಮಾರ್ ಬಗ್ದಲಕರ್ ತಿಳಿಸಿದರು. ಪಟ್ಟಣದ ಚಿಟಗುಪ್ಪ ಬಸ್ ನಿಲ್ದಾಣದ ಹತ್ತಿರ ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ ಅವರು ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಮಂಡಳಿಯ ಅನುದಾನದಲ್ಲಿ ಮಂಜೂರಾದ 3.06 ಲಕ್ಷ ರೂಪಾಯಿ ವೆಚ್ಚದ ಹೈಮಾಸ್ಕ್ ದೀಪಕ್ಕೆ ಚಾಲನೆ ನೀಡಿ ಮಾತನಾಡುತ್ತ ತಿಳಿಸಿದರು. ಅದೇ ತರಹ ಮನ್ನಾಎಖೇಳ್ಳಿ, ಉಡಬಾಳ, ಬನ್ನಳ್ಳಿ, ಮಂಗಲಗಿ, ಮುತ್ತಂಗಿ, ವಳಖಿಂಡಿ, ರಾಂಪೂರ, ಮುಸ್ತರಿ, ಶಾಮತಬಾದ, ನಿರ್ಣಾ ಇವು ಎಲ್ಲಾ ಗ್ರಾಮಗಳಿಗೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಯಿಂದ ಒಟ್ಟು 33.66 ಲಕ್ಷ ರೂಪಾಯಿ ಹೈಮಾಸ್ಕ್ ದೀಪ ಮಂಜೂರಿ ಮಾಡಿದ್ದಾರೆ ಎಂದು ತಿಳಿಸಿದರು. ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್ ಅವರಿಗೆ ವಿಶೇಷ ಧನ್ಯವಾದಗಳು ಸಲ್ಲಿಸಿದರು. ಈ ಸಂದರ್ಭದಲ್ಲಿ ಪುರಸಭೆ ಉಪಾಧ್ಯಕ್ಷ ನಸೀರ್ ಖಾನ್, ಪುರಸಭೆ ಸದಸ್ಯರಾದ ಬಾಬಾ ಆರ್.ಸಿ.ಸಿ., ವಿಶಾಲ ಬೋರಳೆ, ಪ್ರಮುಖರಾದ ಅಶೋಕ ಸ್ವಾಮಿ ಫಾತ್ಮಪುರ್, ಷರೀಫ್, ಮೊಯಿಜೋದ್ದಿನ ಬಾರುದವಾಲೇ, ಕಿರಣ ಹಮ್ಮಿಲಪುರಕರ್, ಮನೋಜ ಟಿಕೆಕರ್, ಇರ್ಫಾನ್, ವಿಜಯಕುಮಾರ್ ಕಲ್ಲೂರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಮಹಿಳಾ ಕ್ರಿಕೇಟ್:ವೇಗದ ಶತಕ ಸಿಡಿಸುವ ಮೂಲಕ ವಿರಾಟ್ ಕೊಹ್ಲಿ ದಾಖಲೆ ಮುರಿದ ಸ್ಮೃತಿ ಮಂಧಾನ

# ಪಿಕೆಪಿಎಸ್ ರೈತರ ಸರ್ವಾಂಗಿಣ ಅಭಿವೃದ್ಧಿಯೇ ನನ್ನ ಗುರಿ: ಸಿದ್ದಾರೂಢ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:ಸೆ.20: ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಜಿಲ್ಲೆಯಲ್ಲಿಯೇ ಮಾದರಿ ಸಹಕಾರಿ ಸಂಘ ಮಾಡಲು ಸಂಘದ ಸರ್ವ ಸದಸ್ಯರ ಮತ್ತು ರೈತರ ಸಹಕಾರ ಅಗತ್ಯವಾಗಿದೆ ಎಂದು ಸಂಘದ ಅಧ್ಯಕ್ಷ ಸಿದ್ದರೊಡ ಒಂಟೆನೂರ್ ಪಟ್ಟಣದಲ್ಲಿ ಶನಿವಾರ ಜರುಗಿದ ಕೃಷಿ ಪತ್ತಿನ ಸಹಕಾರ ಸಂಘದ 68ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತ ತಿಳಿಸಿದರು.

ರೈತರಿಗೆ ಯಾವುದೇ ಸಮಸ್ಯೆ ಆಗದಂತೆ ಸರಿಯಾದ ಸಮಯಕ್ಕೆ ರೈತರಿಗೆ ರಸಗೊಬ್ಬರ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಪ್ರಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು. ಸಹಕಾರಿ ಸಂಘದ ಷೇರುದಾರ ಮರಣ ಹೊಂದಿದ್ದರೆ ನಮ್ಮ ಸಂಘದ ವತಿಯಿಂದ 10,000 ರೂಪಾಯಿ ನೀಡುವುದಾಗಿ ಈ ವಾರ್ಷಿಕ ಮಹಾಸಭೆಯಲ್ಲಿ ಘೋಷಿಸಿದರು. 2024– 25ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರವನ್ನು ಸಂಕ್ಷಿಪ್ತವಾಗಿ ಮುಖ್ಯಕಾರ್ಯನಿರ್ವಾಕ ಅಧಿಕಾರಿ ಸಂಗ್ರಾಮ ಬಿ. ಪಡಗಿ ವಿವರಿಸಿದರು. 2024–25ನೇ ಸಾಲಿನ ಒಟ್ಟು ನಿವ್ವಳ ಲಾಭ 10, 27, 445.99 ರೂಪಾಯಿ ಹೊಂದಿದ್ದೆ ಎಂದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಅಂಬಾದಾಸ್, ನಿರ್ದೇಶಕರಾದ ಮಹಾರುದ್ರಯ್ಯಾ ಆರ್. ಸ್ವಾಮಿ, ಎಂಡಿ ಇಸ್ಮಾಯಿಲ್ ಲಾಘೋಡಿ, ರಾಶೀದ್ ಅಲಿಪಟೇಲ್, ಪಾಂಡುರಂಗ ಸಿರ್ಕೆ, ಎಂಡಿ. ಮೊಯಿಜೋದ್ದಿನ ಬಾರುದವಾಲೇ, ಸುನೀಲಕುಮಾರ್ ಗಡಮಿ, ಅಮೃತರಾವ ಭುತ್ತಾಳೆ, ಪ್ರಕಾಶ ಗೌಳಿ, ಈರಮ್ಮ ರಾಂಪುರ ಘಾತ್ಮಪುರ್, ಜ್ಯೋತಿ ಹಿಬಾರೆ, ಕ್ಷೇತ್ರ ಸಹಾಯಕ ಬೀರಪ್ಪ ನಿಂಗದಳ್ಳಿ, ಸಿಬ್ಬಂದಿಗಳಾದ ಶ್ರೀಶೈಲ ಸಾದಾ, ಕೈಲಾಶ, ರಮೇಶ್ ಬಿರಾದಾರ್, ರಾಚಪ್ಪ, ಎಂಡಿ. ಮಧರ್, ಪಿಕೆಪಿಎಸ್ ಮಾಜಿ ಅಧ್ಯಕ್ಷರಾದ ವಿಜಯಕುಮಾರ್ ಆರ್. ಮಂಕಾಲ, ಮನೋಜಕುಮಾರ್ ಶರ್ಮಾ, ಪುರಸಭೆ ಅಧ್ಯಕ್ಷ ದಿಲೀಪಕುಮಾರ್ ಬಗ್ದಲಕರ ಉಪಾಧ್ಯಕ್ಷ ನಸಿರ್ ಖಾನ, ಪ್ರಮುಖರಾದ ಅಶೋಕ ಸ್ವಾಮಿ ಘಾತ್ಮಪುರ್, ಮಲ್ಲಿಕಾರ್ಜುನ ಪಾಟೀಲ್, ಮುಜಾಫರ್ ಪಟೇಲ್, ವಿಠಲರಾವ ಪಟ್ಟಣಕರ್, ವಿಶಾಲ ಬೋರಳೆ, ಕಲ್ಯಾಣರಾವ ಜಾಬಾ, ರೇವಣ್ಣಪ್ಪ ಹೂಗಾರ್, ಸೂರ್ಯಕಾಂತ ಮಠಪತಿ, ರವೀಂದ್ರರೆಡ್ಡಿ ರಾಂಪುರ, ಕರೇಪ್ಪ ಗಡಮಿ, ವೆಂಕಟ್ ಪೂಜಾರಿ, ಸಂಜೀವರೆಡ್ಡಿ ಮುಡಬಿ, ವಿಜಯಕುಮಾರ್ ಸ್ವಾಮಿ, ಶಿವರಾಜರೆಡ್ಡಿ ಘಾತ್ಮಪುರ್, ಸೇರಿದಂತೆ ರೈತರು ಗ್ರಾಮಸ್ಥರು ಉಪಸ್ಥಿತರಿದ್ದರು.

# ದೇಶದ ಏಕತೆಗೆ ಹಿಂದಿ ಭಾಷೆ ಪ್ರೇರಣಾ ಶಕ್ತಿ : ಅಸ್ಲಾಂಮಿಯಾ



"ಶಾಲೆಗೆ ಪ್ರಥಮ ಬಂದಿರುವುದು ತುಂಬಾ ಖುಷಿ ತಂದಿದೆ. ಈ ಸಾಧನೆಗೆ ನನ್ನ ಪೋಷಕರು ಮತ್ತು ಗುರುಗಳೆ ಮುಖ್ಯ ಕಾರಣ ಶಾಲೆಯಲ್ಲಿ ಕಲಿಕೆಗೆ ಪೂರಕ ವಾತಾವರಣವಿತ್ತು. ಶಿಕ್ಷಕರು ಉತ್ತಮವಾಗಿ ಬೋಧಿಸುತ್ತಿದ್ದರು. ಶೈಕ್ಷಣಿಕ ಗೊಂದಲವಿದ್ದರೆ ಬಗೆ ಹರಿಸುತ್ತಿದರು. ಮುಂದೆ ನೀವು ಒಳ್ಳೆಯ ರೀತಿಯ ಅಭ್ಯಾಸ ಮಾಡಿ ನೀವು ಈ ವೇದಿಕೆಯಲ್ಲಿ ಸನ್ಮಾನ ಮಾಡಿಕೊಳಬೇಕು ಎಂದು ಕನಿಕಾ ಸ್ವಾಮಿ ವಿದ್ಯಾರ್ಥಿಗಳಿಗೆ ತಿಳಿಸಿದರು.

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:ಸೆ.20:ವೈವಿದ್ಯದಲ್ಲಿ ಏಕತೆ ಹೊಂದಿರುವ ಭಾರದಲ್ಲಿ ಹಿಂದಿ ಭಾಷೆ ತನ್ನ ಪ್ರಾಚೀನತೆ ಉಳಿಸಿಕೊಂಡು ಬಂದಿದೆ. ಸರಳತೆಯಿಂದ ಕೂಡಿದ ಮಧುರವಾದ ಭಾಷೆಯಾಗಿದೆ ಎಂದು ಸಮಾಜ ಕಾರ್ಯಕರ್ತ ಮಹ್ಮದ್ ಅಸ್ಲಾಂಮಿಯಾ ತಿಳಿಸಿದರು. ಶುಕ್ರವಾರ ಪಟ್ಟಣದ ಸರಕಾರಿ ಕನ್ಯಾ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಹಿಂದಿ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಹಿಂದಿ ಭಾಷೆ ತನ್ನದೇ ಆದ ವಿಶಿಷ್ಟ ರೂಪ ಹೊಂದಿದೆ, ದೇಶದ ಮೂಲೆ ಮೂಲೆಗು ಹಿಂದಿ ಭಾಷೆ ಹರಡಿಕೊಂಡಿದೆ ಎಂಬುದಕ್ಕೆ ಅನೇಕ ಉದಾಹರಣೆಗಳಿವೆ, ಹೀಗಾಗಿ ಪ್ರತಿಯೊಬ್ಬರೂ ಹಿಂದಿ ಭಾಷವನ್ನು ಗೌರವಿಸಬೇಕು. ಸಂವಿಧಾನದ ರಚನಾ ಸಮಿತಿಯೂ 1949ರ ಸೆಪ್ಟೆಂಬರ್ 14ರಂದು ಹಿಂದಿ ರಾಜ್ಯಭಾಷೆಯನ್ನಾಗಿ ಅಂಗೀಕರಿಸಿದರಿಂದ ಈ ದಿನವನ್ನು 1953ರಿಂದ ಪ್ರತಿ ವರ್ಷ ಹಿಂದಿ ದಿನವನ್ನಾಗಿ ಆಚರಿಸುತ್ತಾ ಬರಲಾಗಿದೆ. ಹಿಂದಿ ಕಲಿಯುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ವಿದ್ಯಾರ್ಥಿಗಳು ಸೌಲಭ್ಯಗಳನ್ನು ಬಳಕೆ ಮಾಡಿಕೊಳ್ಳಬೇಕೆಂದು ತಿಳಿಸಿದರು. ಸರ್ಕಾರಿ ನೌಕರರ ಸಂಘದ ತಾಲೂಕಾಧ್ಯಕ್ಷ ರಾಜಶೇಖರ ಉಪ್ಪಿನ ಮಾತನಾಡಿ ಸ್ವಾತಂತ್ರ್ಯ ಸಂಗ್ರಾಮದ ದಿನಗಳಿಂದಲೂ ಹಿಂದಿ ಭಾಷೆಯು ತನ್ನ ಸೇವೆ ಹಾಗೂ ಕೊಡುಗೆ ನೀಡುತ್ತ ಬಂದಿದೆ. ವಂದೇ ಮಾತರಂ, ಭಾರತ ಮಾತಾ ಕೀ ಜೈ ನಾನಾ ಸಂದೇಶಗಳು ಹಿಂದಿ ಭಾಷೆಯ ಮೂಲಕವೇ ವ್ಯಕ್ತವಾಗಿವೆ ಎಂದರು. ಹಿಂದಿ ಭಾಷೆ ಕೇವಲ ಒಂದು ಭಾಷೆಯಲ್ಲ. ಅದು ದೇಶದ ಒಗ್ಗಟ್ಟು ಸಾರುವ ಭಾಷೆಯಾಗಿದೆ. ನಮ್ಮ ದೇಶದಲ್ಲಿ 130ಕ್ಕೂ ಹೆಚ್ಚು ವಿವಿಗಳಲ್ಲಿ 50 ದೇಶಗಳಲ್ಲಿ ಹಿಂದಿ ಭಾಷೆ ಕಾಣಬಹುದಾಗಿದೆ ಎಂದರು. ಕಸಾಪ ತಾಲೂಕಾಧ್ಯಕ್ಷ ಅನೀಲಕುಮಾರ್ ಸಿಂಧೆ ಮಾತನಾಡಿ, ಹಿಂದಿ ದಿವಸ್" ನಾವು ಯಾವುದೇ ರೀತಿಯಲ್ಲಿ ದೇವನಾಗರಿ ಹಿಂದಿಯನ್ನು ಪ್ರಚಾರ ಮಾಡಲು ಆಚರಿಸುವ ದಿನವಾಗಿದೆ. ಇಂಗ್ಲಿಷ್ ಭಾಷೆಯ ವೇಗವಾದ ಮತ್ತು ವ್ಯಾಪಕವಾದ ಸ್ವೀಕಾರಾರ್ಹತೆಯ ಬಗ್ಗೆ ನಾವೆಲ್ಲರೂ ಚೆನ್ನಾಗಿ ತಿಳಿದಿದ್ದೇವೆ. ಇಂದು ಎಲ್ಲಾ ಇತರ ಕೆಲಸಗಳನ್ನು ಇಂಗ್ಲಿಷ್‌ನಲ್ಲಿ ಮಾಡುವ ಶಾಲೆಗಳಲ್ಲಿ ಹಿಂದಿ ಮಾತ್ರ ಒಂದು ವಿಷಯವಾಗಿ ಉಳಿದಿದೆ. ಅತ್ಯಂತ ಸಾಮಾನ್ಯ ಸಂವಹನ ಭಾಷೆ ಕೂಡ ಇಂಗ್ಲಿಷ್ ಮಾತ್ರ. ಸರ್ಕಾರಿ ಅಥವಾ ಖಾಸಗಿ ಕಚೇರಿಗಳಲ್ಲಿ ಪರಿಸ್ಥಿತಿ ಭಿನ್ನವಾಗಿಲ್ಲ. ಹೀಗೆ–ಯೇ ಮುಂದುವರೆಯಲು ಬಿಟ್ಟರೆ ಮುಂದೊಂದು ದಿನ ಹಿಂದಿ ಓದುವ, ಮಾತನಾಡುವ, ಬರೆಯಬಲ್ಲವರು ಸಿಗುವುದು ಕಷ್ಟವಾಗುತ್ತದೆ. ಆದ್ದರಿಂದ ಹಿಂದಿ ದಿವಸ್‌ನಲ್ಲಿ ಹಿಂದಿಯನ್ನು ಉತ್ತೇಜಿಸಲು ನಾವು ಬದ್ಧರಾಗಿರಬೇಕೆಂದು ತಿಳಿಸಿದರು. ಶಾಲೆಯ ಮುಖ್ಯ ಗುರುಗಳಾದ ಬಸವರಾಜ ಮೇತ್ರೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ನಮ್ಮ ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಸಂರಕ್ಷಿಸಲು ಮತ್ತು ಹಿಂದಿ ಭಾಷೆಯ ಪ್ರಾಮುಖ್ಯತೆಯನ್ನು ಇನ್ನೂ ಉಳಿಸಿಕೊಳ್ಳಲು ಆಸಕ್ತಿ ಹೊಂದಿರುವ ಅನೇಕ ಜನರಿದ್ದಾರೆ. ದಿನ ನಿತ್ಯದ ಜೀವನದಲ್ಲಿ ಭಾಷೆಯನ್ನು ಬಳಸಬೇಕು, 2024–25ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಮ್ಮ ಶಾಲೆಯ ವಿದ್ಯಾರ್ಥಿನಿಯರು ಹಿಂದಿ ವಿಷಯದಲ್ಲಿ 100ಕ್ಕೆ 100% ಪ್ರತಿ ಶತ ಅಂಕ ಪಡೆದಿದ್ದಾರೆ ಮುಂದೆ ಎಲ್ಲಾ ವಿಷಯಗಳಲ್ಲಿ 100ಕ್ಕೆ 100 ಪ್ರತಿಶತ ಅಂಕಗಳು ತೆಗೆದುಕೊಳ್ಳಬೇಕೆಂದು ಮಕ್ಕಳಿಗೆ ತಿಳಿಸಿದರು. ರಮೇಶ ಬಿರಾದಾರ್ ವಿಶೇಷ ಉಪನ್ಯಾಸ ನೀಡಿದರು. ಪತ್ರಕರ್ತರಾದ ರಾಜಕುಮಾರ ಆರ್. ಹಡಪದ, ಸೈಯದ್ ಅಜೀಮ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಹಿಂದಿ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಮತ್ತು ಪಾಲಕರಿಗೆ ಹಿಂದಿ ವಿಷಯದ ಶಿಕ್ಷಕ ಸಂಜೀವನ ಭೋಸ್ಲೆ ಸನ್ಮಾನಿಸಿ ಬಹುಮಾನ ನೀಡಿ ಶುಭ ಹಾರೈಸಿದರು. ಕಾರ್ಯಕ್ರಮವನ್ನು ಸಂಜೀವನ ಭೋಸ್ಲೆ ನಿರೂಪಿಸಿದರು, ಗುಂಡಪ್ಪ ಕೋರಿ ಸ್ವಾಗತಿಸಿದರು, ಪಂಚಶೀಲಾ ಕಟ್ಟಿಮನಿ ವಂದಿಸಿದರು. ಈ ಸಂದರ್ಭದಲ್ಲಿ ಭೀಮಪ್ರಕಾಶ, ಸಿಬ್ಬಂದಿಗಳಾದ ಅಂಬಿಕಾ ಮಾಳಗೆ, ಸಾದಿಯಾ ಸುಲ್ತಾನಾ, ಹಸನ್ ಲಚ್ಚಿಕೆ, ಶಿಲ್ಪಾ, ಸುಮಾ ರೆಡ್ಡಿ, ಆಯಿಷ್ಯ ಸುಲ್ತಾನಾ, ಸೂಯೆಬ್ ಸೇರಿದಂತೆ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

# ಎಸ್‌ಎಸ್‌ಎಲ್ ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ಸೆ.20: ತಾಲೂಕಿನ ಮುಸ್ತರಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ 68ನೇ ವಾರ್ಷಿಕ ಮಹಾಸಭೆ ಶುಕ್ರವಾರ ಜರುಗಿತ್ತು. ಸಭೆಯಲ್ಲಿ 2024–2025ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಉದಯಕುಮಾರ ತಂಗಾ ಮಂಡಿಸಿದರು. 2024–25ನೇ ಸಾಲಿನಲ್ಲಿ 10,91,223 ರೂಪಾಯಿ ನಿವ್ವಳ ಲಾಭ ಹೊಂದಿದ್ದೆ ಎಂದರು. ಸಂಘದ ಅಧ್ಯಕ್ಷ ಈಶ್ವರ್ ಜಕ್ಕಾ ಮಾತನಾಡಿ, ಮುಸ್ತರಿ ಪಿಕೆಪಿಎಸ್ ಆಡಳಿತ ಮಂಡಳಿಯಿಂದ ಪ್ರತಿ ವರ್ಷ ಎಸ್ ಎಸ್ ಎಲ್ ಸಿ, ಮತ್ತು ಪಿಯುಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಪ್ರಥಮ, ದ್ವಿತೀಯ, ಬಹುಮಾನ ನೀಡುತ್ತಿದ್ದೇವೆ ಎಂದರು. ಗ್ರಾಮೀಣ ಭಾಗದ ರೈತ ಕುಟುಂಬದ ಮಕ್ಕಳು ಇಂತಹ ಸಾಧನೆ ಮಾಡಿರುವುದು ನಮ್ಮೆಲ್ಲರಿಗೂ ಹೆಮ್ಮೆ ಎನಿಸಿದೆ. ನಮ್ಮ ಆಡಳಿತ ಮಂಡಳಿಯಿಂದ ಸುಮರು 11 ವರ್ಷಗಳಿಂದ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸುವಂತ ಕಾರ್ಯ ನಮ್ಮ ಸಂಘ ಮಾಡುತ್ತಿದೆ ಎಂದು ತಿಳಿಸಿದರು. ಗ್ರಾಮೀಣ ಭಾಗದ ಮಕ್ಕಳು ಗುಣಮಟ್ಟದ ಶಿಕ್ಷಣ ಪಡೆದು ಗ್ರಾಮಗಳಿಗೆ ಹೆಸರು ತರುವಂತರಾಗಬೇಕೆಂದು ತಿಳಿಸಿದರು. ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ಸಂತೋಷ ವಿಜಯಕುಮಾರ್ ಕಾಂಚನಾಳ, ದ್ವಿತೀಯ ಸ್ಥಾನ ಪಡೆದ ಗಣೇಶ ಮಹಾಲಿಂಗಹಳ್ಳಿ, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ರಾಕೇಶ ಸಿದ್ದಯ್ಯ ಕಳ್ಳಿ, ದ್ವಿತೀಯ ಸ್ಥಾನ ಪಡೆದ ಭಾಗ್ಯಶ್ರೀ ಈಶ್ವರ ಹಿಪಳ್ಳಿ ಅವರಿಗೆ ಸಂಘದ ಅಧ್ಯಕ್ಷ ಈಶ್ವರ ಜಕ್ಕಾ ಬಹುಮಾನ ನೀಡಿ ಸನ್ಮಾನಿಸಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ಗೋಪಾಲ ರೆಡ್ಡಿ, ನಿರ್ದೇಶಕರಾದ ವೀರೇಶ ತೂಗಾಂವ, ನೂರಂದಪ್ಪಾ ಪಾಟೀಲ್, ಈರಪ್ಪ ತುಗಾಂವ, ಸತೀಷಕುಮಾರ್ ಕಂದಗುಳಕರ್, ಅನೀಲ ಹೈಬತ್ತಿ, ಮಹಮ್ಮದ್ ಅಯಸಸಾಬ್, ಗಂಗಾಧರ್ ಇಟಗಾ ಹಾಗೂ ಸಿಬ್ಬಂದಿಗಳಾದ ಬಸವರಾಜ ಕಾಮಣಿ, ನಾಗರಾಜ ಹಳ್ಳಿ, ಪ್ರಮುಖರಾದ ಭೀಮರಾವ ಬಿರಾದಾರ್, ವಿವೇಕಾನಂದ ರಾಜಗೀರಾ, ಶಾಮರಾವ ಜಕ್ಕಾ, ನಾಗಶೆಟ್ಟಿ ತಂಗಾ, ರವಿ ಬಿರಾದಾರ್, ದಿಲೀಪರೆಡ್ಡಿ ವಾಡಿ, ಜಯವಂತ ರೆಡ್ಡಿ, ರವಿ ಅಡಕಾಯಿ ಸೇರಿದಂತೆ ರೈತರು, ಗ್ರಾಮಸ್ಥರು ಇದ್ದರು.

# ಜೆಜೆಎಂ, ಅಭಿವೃದ್ಧಿ ಕಾಮಗಾರಿ ಪರಿಶೀಲನೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.20–ಜಿಲ್ಲೆಯ ಬೀಳಗಿ ತಾಲೂಕಿನ ಮನ್ನಿಕೇರಿ, ಹೊನ್ನಿಹಾಳ ಗ್ರಾಮಗಳಿಗೆ ಜಿಲ್ಲಾ ಪಂಚಾಯತ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಶನಿವಾರ ಭೇಟಿ ನೀಡಿ, ಜಲಜೀವನ್ ಮಿಷನ್ ಹಾಗೂ ಇತರ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು.

ಬೀಳಗಿ ತಾಲ್ಲೂಕಿನ ಮನ್ನಿಕೇರಿ ಗ್ರಾಮಕ್ಕೆ ಭೇಟಿ ನೀಡಿದ ಅವರು, ನಿರ್ಮಾಣ ಹಂತದಲ್ಲಿರುವ ಶುದ್ಧ ಕುಡಿಯುವ ನೀರಿನ ಸಂಸ್ಕರಣಾ ಘಟಕದ ಕಾಮಗಾರಿಯನ್ನು ಪರಿಶೀಲಿಸಿದರು. ಘಟಕ ನಿರ್ಮಾಣದ ವಿನ್ಯಾಸ, ಬಳಸುತ್ತಿರುವ ಸಾಮಗ್ರಿಗಳ ಗುಣಮಟ್ಟ ಮತ್ತು ಕಾಮಗಾರಿಯ ವೇಗದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆದು–ಕೊಂಡರು. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿ, ಗ್ರಾಮಸ್ಥರ ಬಳಕೆಗೆ ಲಭ್ಯವಾಗುವಂತೆ ಕ್ರಮಕೈಗೊಳ್ಳುವಂತೆ ಗುತ್ತಿಗೆದಾರರು ಮತ್ತು ಇಂಜಿನಿಯರ್‌ಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಲ ಜೀವನ್ ಮಿಷನ್ ಯೋಜನೆಯಡಿ ಗ್ರಾಮದ ಪ್ರತಿ ಮನೆಗೆ ನಲ್ಲಿ ಸಂಪರ್ಕ ಕಲ್ಪಿಸುವ ಪೈಪ್‌ಲೈನ್ ಅಳವಡಿಕೆ ಕಾಮಗಾರಿಯನ್ನು ವೀಕ್ಷಣೆ ಮಾಡಿ ಕಾಮಗಾರಿಯಲ್ಲಿ ಯಾವುದೇ ಲೋಪವಾಗದಂತೆ ನೋಡಿಕೊಂಡು ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ತಾಕೀತು ಮಾಡಿದರು. ನಂತರ ಹೊನ್ನಿಹಾಳ ಗ್ರಾಮಕ್ಕೆ ಭೇಟಿ ನೀಡಿದ ಅವರು, ಅಲ್ಲಿ ನಡೆಯುತ್ತಿರುವ ಜಲ ಜೀವನ್ ಮಿಷನ್ ಯೋಜನೆಯಡಿ ಮನೆ ಮನೆಗೆ ನಲ್ಲಿ ಸಂಪರ್ಕ ಕಲ್ಪಿಸುವ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿದರು. ಕೆಲವು ಮನೆಗಳಿಗೆ ಭೇಟಿ ನೀಡಿ, ಕಾಮಗಾರಿಯ ಬಗ್ಗೆ ಸ್ಥಳೀಯರೊಂದಿಗೆ ಚರ್ಚೆ ನಡೆಸಿದರು. ಪ್ರತಿಯೊಂದು ಮನೆಗೂ ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರನ್ನು ತಲುಪಿಸುವುದು ಸರ್ಕಾರದ ಮುಖ್ಯ ಗುರಿಯಾಗಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಕುರೇರ ಹೇಳಿದರು.

ಗ್ರಾಮ ಪಂಚಾಯತ ಕಚೇರಿಗೆ ಭೇಟಿ ನೀಡಿ, ಅಲ್ಲಿನ ಆಡಳಿತಾತ್ಮಕ ಕಾರ್ಯವೈಖರಿಯನ್ನು ಪರಿಶೀಲಿಸಿದರು. ಸಿಬ್ಬಂದಿಯ ಹಾಜರಾತಿ, ಸಾರ್ವಜನಿಕರಿಗೆ ನೀಡುತ್ತಿರುವ ಸೇವೆಗಳು, ನೈರ್ಮಲ್ಯ ನಿರ್ವಹಣೆ ಹಾಗೂ ಸರ್ಕಾರದ ಇತರ ಯೋಜನೆಗಳ ಅನುಷ್ಠಾನದ ಕುರಿತು ದಾಖಲೆಗಳನ್ನು ಪರಿಶೀಲಿಸಿ, ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಿದರು.

ಭೇಟಿ ಸಂದರ್ಭದಲ್ಲಿ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಶ್ರೀನಿವಾಸ ಪಾಟೀಲ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರ ಆಕಾಶ್ ವಂದೆ ಸೇರಿದಂತೆ ಇತರರು ಇದ್ದರು.

# ಆಯುರ್ವೇದ ಜಾಗೃತಿ ಜಾಥಾಕ್ಕೆ ಸಿಇಓ ಚಾಲನೆ





ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.20–ಧನ್ವಂತರಿ ದಿನಾಚರಣೆ ಹಾಗೂ 10ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ ಆಯುರ್ವೇದ ಜಾಗೃತಿ ಜಾಥಾಕ್ಕೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಶನಿವಾರ ಚಾಲನೆ ನೀಡಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಜಿಲ್ಲಾ ಆಯುಷ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಆಯುರ್ವೇದ ಜಾಗೃತಿ ಜಾಥಾ ಜಿಲ್ಲಾಡಳಿತ ಭವನದಿಂದ ಪ್ರಾರಂಭವಾಗಿ ನಗರದ ನಾನಾ ಕಡೆ ಸಂಚರಿಸಿ ಕೊನೆಗೆ ಸರ್ಕಾರಿ ಆಯುರ್ವೇದ ಆಸ್ಪತ್ರೆಗೆ ಮುಕ್ತಾಯಗೊಂಡಿತು.

ಜಾಥಾದುದ್ದಕ್ಕೂ ಸಾರ್ವಜನಿಕರ ಆರೋಗ್ಯಕ್ಕಾಗಿ ಆಯುರ್ವೇದ ಮದ್ದು, ಸಮತೋಲನ ಆಹಾರ ಆಯುರ್ವೇದ ಆಧಾರ, ಹತ್‌ಬುಕ್ ಮಿನಬುಕ್, ಜನರಿಗಾಗಿ ಜಗತ್ತಿಗಾಗಿ ಆಯುರ್ವೇದ ಸೇರಿದಂತೆ ಅನೇಕ ಘೋಷವಾಕ್ಯಗಳನ್ನು ಕೂಗಲಾಯಿತು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಂಜುನಾಥ ಡಿ, ಜಿಲ್ಲಾ ಆಯುಷ ಅಧಿಕಾರಿ ಎಸ್.ಜಿ.ಮಠ ಸೇರಿದಂತೆ ಇತರರು ಇದ್ದರು.

# ಕೆರೂಡಿ ಆಸ್ಪತ್ರೆಯಲ್ಲಿ ಕ್ಯಾನ್ಸರ್‌ಗೆ ಹೈಪೆಕ್ ಶಸ್ತ್ರಚಿಕಿತ್ಸೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.20–ನಗರದ ಹಾಲಮ್ಮ ಕೆರೂಡಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಜಿಲ್ಲೆಯಲ್ಲೇ ಮೊದಲ ಬಾರಿಗೆ ಹೈಪರ್ ಥರ್ಮಿಕ್ ಇಂಟ್ರಾ ಪೆರಿಟೋನಿಯಲ್ ಕಿಮೋಥೆರಪಿ (ಹೈಪೆಕ್) ವಿಧಾನದ ಮೂಲಕ ಕ್ಯಾನ್ಸರ್‌ಗೆ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

ಅಂಡಾಶಯ ಕ್ಯಾನ್ಸರ್‌ನಿಂದ ಬಳಲುತ್ತಿದ್ದ 61 ವರ್ಷದ ಮಹಿಳೆಯೊಬ್ಬರು ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದರು. ಆಸ್ಪತ್ರೆಯ ಕ್ಯಾನ್ಸರ್ ತಜ್ಞ ಡಾ.ಮಧು ವೈ.ಸಿ. ಹಾಗೂ ತಂಡದವರು ಸೂಕ್ತ ತಪಾಸಣೆ ನಡೆಸಿ ಹೈಪೆಕ್ ವಿಧಾನದ ಮೂಲಕ 7 ಗಂಟೆಗಳ ಕಾಲ ಶಸ್ತ್ರಚಿಕಿತ್ಸೆ ನಡೆಸಿದರು. ಸದ್ಯ ರೋಗಿ ಚೇತರಿಸಿಕೊಂಡಿದ್ದು, ಆಸ್ಪತ್ರೆಯಿಂದ ಬಿಡುಗಡೆ ಹೊಂದಲು ಸಿದ್ಧವಾಗಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ. ಶಸ್ತ್ರ ಚಿಕಿತ್ಸೆಯಲ್ಲಿ ಡಾ.ಲತಿಕಾ ಅರವಳಿಕೆ ತಜ್ಞರಾಗಿ ಕಾರ್ಯ ನಿರ್ವಹಿಸಿದರು. ಅಂಡಾಶಯದ ಕ್ಯಾನ್ಸರ್, ಕೊಲೊರೆಕ್ಟಲ್ ಮತ್ತು ಪ್ರಾಥಮಿಕ ಪೆರಿಟೋನಿಯಲ್ ಕ್ಯಾನ್ಸರ್‌ನ ಮೂರನೇ ಹಂತದ ರೋಗಿಗಳಿಗೆ ಹೊಟ್ಟೆ ಭಾಗದಲ್ಲಿ ಕ್ಯಾನ್ಸರ್ ಹರಡಿದಾಗ ಹೈಪೆಕ್ ವಿಧಾನದ ಚಿಕಿತ್ಸೆ ನೀಡಲಾಗುತ್ತದೆ.

ಇದೊಂದು ವಿಶಿಷ್ಟ ಚಿಕಿತ್ಸಾ ಕ್ರಮವಾಗಿದ್ದು, ಕಡಿಮೆ ಅಡ್ಡಪರಿಣಾಮಗಳೊಂದಿಗೆ ಹೆಚ್ಚು ಫಲಕಾರಿಯಾಗಿದೆ. ಮಹಾನಗರಗಳಿಗೆ ಸೀಮಿತವಾಗಿದ್ದ ಇಂಥ ಕ್ಲಿಷ್ಟಕರ ಶಸ್ತ್ರ ಚಿಕಿತ್ಸೆಗಳು ನಗರದಲ್ಲೂ ನಡೆಯುತ್ತಿರುವುದು ಕ್ಯಾನ್ಸರ್ ರೋಗಿಗಳಲ್ಲಿ ಹೊಸ ಭರವಸೆ ಮೂಡಿಸಿದೆ. ಇಂತಹ ಶಸ್ತ್ರಚಿಕಿತ್ಸೆ ನಡೆಸಲು ಅಗತ್ಯವಿರುವ ನುರಿತ ತಜ್ಞರು ಹಾಗೂ ಯಂತ್ರಗಳು ನಮ್ಮ ಆಸ್ಪತ್ರೆಯಲ್ಲಿವೆ. ಇದರೊಂದಿಗೆ ಜಾಗತಿಕ ಮಟ್ಟದ ಹೈಪರ್‌ಥರ್ಮಿಕ್ ಇಂಟ್ರಾಪೆರಿಟೋನಿಯಲ್ ಕಿಮೋಥೆರಪಿ, ಲಿವರ್‌ಕ್ಯಾನ್ಸರ್, ಇಸೋಫೆಜಿಯಲ್, ಶ್ವಾಸಕೋಶ, ಅನ್ನನಾಳಗಳಿಗೆ ಸಂಬಂಧಿಸಿದ ಸಂಕೀರ್ಣ ಕ್ಯಾನ್ಸರ್‌ಗಳಿಗೂ ನಮ್ಮ ಆಸ್ಪತ್ರೆಯಲ್ಲಿ ಗುಣಮಟ್ಟದ ಚಿಕಿತ್ಸೆ ಲಭಿಸುತ್ತಿದೆ ಎಂದು ಆಸ್ಪತ್ರೆ ಮುಖ್ಯ ವೈದ್ಯ ಡಾ.ಬಸವರಾಜ ಕೆರೂಡಿ ತಿಳಿಸಿದ್ದಾರೆ.

# ಸೀತಿಮನಿಯಲ್ಲಿ ನಾಳೆಯಿಂದ ನವರಾತ್ರಿ ಉತ್ಸವ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.20–ತಾಲೂಕಿನ ಸೀತಿಮನಿಯ ಆಲಮಟ್ಟಿ ಜಲಾಶಯದ ಬಳಿಯ ಬೆಟ್ಟದ ಮೇಲಿರುವ ಸೀತಾಚಲ ವೆಂಕಟೇಶ್ವರ ದೇವಸ್ಥಾನದಲ್ಲಿ ಸೆ.22 ರಿಂದ ಅ.2 ರವರೆಗೆ ನವರಾತ್ರಿ ಉತ್ಸವ ಸಂಭ್ರಮದಿಂದ ಜರುಗಲಿದೆ.

ಉತ್ಸವದ ನಿಮಿತ್ತ ದೇವಸ್ಥಾನದಲ್ಲಿ 9 ದಿನಗಳವರೆಗೆ ವಿಶೇಷ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಪ್ರತಿ ದಿನ ವೆಂಕಟೇಶ್ವರನಿಗೆ ಸುಪ್ರಭಾತ, ಕಕ್ಕಡಾರತಿ, ಪಂಚಾಮೃತ ಅಭಿಷೇಕ, ಪುಷ್ಪಾರ್ಚನೆ, ಲೋಕಕಲ್ಯಾಣಾರ್ಥವಾಗಿ ಸುದರ್ಶನ ಹೋಮ ಹಮ್ಮಿಕೊಳ್ಳಲಾಗಿದೆ.

ಅ.2 ವಿಜಯದಶಮಿ ನಿಮಿತ್ತ ಶಮಿ ವೃಕ್ಷದ ಪೂಜೆ, ಬನ್ನಿ ಮುಡಿಯುವ ಕಾರ್ಯಕ್ರಮ ನಡೆಯಲಿದ್ದು, ಪ್ರತಿ ದಿನ ರಾಯಚೂರಿನ ಸರ್ವೋತ್ತಮ ಆಚಾರ್ಯ ಜೋಶಿ ಅವರಿಂದ ವೆಂಕಟೇಶ ಮಹಾತ್ಮೆ ಪುರಾಣ ಪ್ರವಚನ ನಡೆಯಲಿದೆ. ಸೆ.30 ರಂದು ಲೋಕಕಲ್ಯಾಣಕ್ಕಾಗಿ ನಾರಾಯಣವರ್ಮ ಹೋಮ ಜರುಗಲಿದೆ.

ಸೆ.22 ರಂದು ಸಂಜೆ 7.30ಕ್ಕೆ ಕುಮಾರಿ ಅನಘಾ ಪಾಟೀಲ ಹಾಗೂ ಕರ್ನಾಟಕ ಕಲಾಶ್ರೀ ಪ್ರಶಸ್ತಿ ಪುರಸ್ಕೃತ ಶಾಮ ಆಲೂರ ಸಂಗೀತ ಕಾರ್ಯಕ್ರಮ, ಸೆ.23 ಸಂಜೆ 7 ಗಂಟೆಗೆ ಜಯತೀರ್ಥ ತಾಸಗಾಂವಿ, 8 ಗಂಟೆಗೆ ಶ್ರೀರಾಮ ಜೋಶಿ ಅಥಣಿ ಸಂಗೀತ ಕಾರ್ಯಕ್ರಮ, ಸೆ.24 ಸಂಜೆ 7 ಗಂಟೆಗೆ ಕೇಶವ ಜೋಶಿ ಅವರಿಂದ ತಬಲಾ ಸೋಲೋ, 7.30 ಗಂಟೆಗೆ ಸಂಗೀತ ಕಾರ್ಯಕ್ರಮ, ಸೆ.25 ಮೆಲೋಡಿಕಾ ಮತ್ತು ಕೊಳಲು ಜುಗಲ್ ಬಂದಿ, ಚಂದ್ರಶೇಖರ ಆಲೂರ, ಶಿವಕುಮಾರ ಪತ್ತಾರ ತಂಡದಿಂದ ದಾಸ ಲಹರಿ, 8 ಗಂಟೆಗೆ ಜಗನ್ನಾಥ ಮುತ್ತತ್ತಿ ತಂಡದಿಂದ ಭಜನಾ ಕಾರ್ಯಕ್ರಮ ನಡೆಯಲಿದೆ.

ಸೆ.26 ಸಾಯಂಕಾಲ 6 ಗಂಟೆಗೆ ಪರಿಮಳಾ ಗಿರಿಯಾಚಾರ್ಯ, 8 ಗಂಟೆಗೆ ಅನಂತ ಕುಲಕರ್ಣಿ ಅವರಿಂದ ಸಂಗೀತ ಕಾರ್ಯಕ್ರಮ, ಸೆ.27 ಸಂಜೆ 7 ಗಂಟೆಗೆ ಅಮೋಘ ಜೋಶಿ ಕೊಳಲು ವಾದನ, 7.30 ಗಂಟೆಗೆ ರಮೇಶ ಕುಲಕರ್ಣಿ ಅವರಿಂದ ಸಂಗೀತ ಕಾರ್ಯಕ್ರಮ, ಸೆ.28 ಹುಬ್ಬಳ್ಳಿಯ ಅರ್ಪಿತಾ ಜಾಗಿರದಾರ, ಕೃಷ್ಣೇಂದ್ರ ವಾಡಕರ ಅವರಿಂದ ಸಂಗೀತ ಕಾರ್ಯಕ್ರಮ ಜರುಗಲಿದೆ.

ಸೆ.29 ರಂದು ಶೇಷಗಿರಿದಾಸ ರಾಯಚೂರ ಅವರ ಸಂಗೀತ ಕಾರ್ಯಕ್ರಮ, ಸೆ.30 ನಾರಾಯಣ ತಾಸಗಾಂವಿ ಅವರಿಂದ ದಾಸ ಮಂಜರಿ ನಡೆಯಲಿದ್ದು, ಅ.1 ರಂದು ಸಂಜೆ 7 ಗಂಟೆಗೆ ಮೈಸೂರು ರಾಮಚಂದ್ರಚಾರ್ಯ ಅವರಿಂದ ವಿಶೇಷ ಭಜನಾ ಕಾರ್ಯಕ್ರಮ ಜರುಗಲಿದೆ ಎಂದು ದೇವಸ್ಥಾನ ಸೇವಾ ಸಮಿತಿಯ ಕಾರ್ಯದರ್ಶಿ ನರಸಿಂಹ ಆಲೂರ ತಿಳಿಸಿದ್ದಾರೆ.

# ಬೇವೂರಿನಲ್ಲಿ ನಾಳೆಯಿಂದ ಶರನ್ನವರಾತ್ರಿ ಉತ್ಸವ-ದೇವಿ ಪುರಾಣ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.20–ತಾಲೂಕಿನ ಬೇವೂರ ಗ್ರಾಮದ ಕಾಳಿಕಾಂಬಾ ದೇವಸ್ಥಾನದಲ್ಲಿ ದಸರಾ ಅಂಗವಾಗಿ ಸೆ.22 ರಿಂದ ಅ.5 ರವರೆಗೆ ಶರನ್ನವರಾತ್ರಿ ಉತ್ಸವ ಜರುಗಲಿದ್ದು, ದೇವಿ ಪುರಾಣ, ಚಂಡಿಕಾ ಹೋಮ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಸೆ.22 ಸೋಮವಾರ ಸಾಯಂಕಾಲ 5 ಗಂಟೆಗೆ ಶರನ್ನವರಾತ್ರಿ ಉತ್ಸವದ ಉದ್ಘಾಟನೆಯನ್ನು ಬಳ್ಳಾರಿಯ ಟಿ.ವೀರರಾಘವ ಶರ್ಮಾ ಅವರು ಉದ್ಘಾಟಿಸುವರು. ಇದಕ್ಕೂ ಮೊದಲು ಬೆಳಿಗ್ಗೆ ಕಾಳಿಕಾಪರಮೇಶ್ವರಿಗೆ ಪಂಚಾಮೃತ ಅಭಿಷೇಕ, ಅಲಂಕಾರ ಪೂಜೆ ಮತ್ತು ಘಟಸ್ಥಾಪನೆ ಜರುಗಲಿವೆ. ಅ.2 ರವರೆಗೂ ಉಡುಪಿ ಜಿಲ್ಲೆಯ ಕುಂಭಕಾಶಿಯ ಶ್ರೀಧರಕೃಪಾ ಆಯುರ್ವೇದಾಶ್ರಮದ ಕೆ.ಶ್ರೀಧರದಾಸ್ ಗುರೂಜಿ ಅವರಿಂದ ನಿತ್ಯ ಸಾಯಂಕಾಲ 6–30 ರಿಂದ ದೇವಿ ಪುರಾಣ ಪ್ರವಚನ ನಡೆಯಲಿದ್ದು, 5–30 ರಿಂದ 6–30 ರವರೆಗೆ ಬಾಗಲಕೋಟೆಯ ಶಾರದಾ ಭಜನಾ ಮಂಡಳಿಯಿಂದ ಲಲಿತಾ ಸಹಸ್ರನಾಮ ಪಾರಾಯಣ ಮತ್ತು ದೇವರನಾಮಗಳು ಜರುಗಲಿವೆ. ಅ.2 ರಂದು ಮುಂಜಾನೆ 10 ಗಂಟೆಗೆ ದೇವಿಯ ಪಲ್ಲಕ್ಕಿ ಉತ್ಸವ, ಪುರವಂತರ ಸೇವೆ ಮತ್ತು ಮಂಗಲ ವಾದ್ಯವೈಭವಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆಯಲಿದೆ. ಅ.4 ಶನಿವಾರ ಚಂಡಿಕಾ ಹೋಮ ಕಾರ್ಯಕ್ರಮ ಪ್ರಾರಂಭವಾಗಿ ಗಣಪತಿ ಪೂಜಾ, ಪುಣ್ಯಾಹವಾಚನ, ನಾಂದೀ, ಮಾತೃಕಾ ಪೂಜೆ, ಋತ್ವಿಗ್ವರ್ಣ, ಅಗ್ನಿಪ್ರತಿಷ್ಠಾ, ನವಗ್ರಹಾದಿ ಹೋಮ, ಮೃತ್ಯುಂಜಯ ಹೋಮ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಕಾರ್ಯಕ್ರಮಗಳು ನಡೆಯಲಿವೆ. ಅಂದೇ ಸಾಯಂಕಾಲ 4 ಗಂಟೆಗೆ ಚಂಡಿಕಾ ಹೋಮದ ಧಾರ್ಮಿಕ ಸಭೆ ಉಡುಪಿ ಜಿಲ್ಲೆಯ ಕಟಪಾಡಿಯ ಕಾಳಹಸ್ತೇಂದ್ರ ಸರಸ್ವತಿ ಸ್ವಾಮೀಜಿ ಹಾಗೂ ಹುಲಗೂರಿನ ಮೌನೇಶ್ವರ ಸ್ವಾಮೀಜಿಗಳ ಸಾನಿಧ್ಯದಲ್ಲಿ ಜರುಗಲಿದ್ದು, ಪೂಜ್ಯ ಗ್ಯಾನಪ್ಪಜ್ಜನವರು ಅಧ್ಯಕ್ಷತೆ ವಹಿಸುವರು. ಟಿ.ವೀರರಾಘವ ಶರ್ಮ, ಕೆ.ಶ್ರೀಧರದಾಸ ಗುರೂಜಿ, ಜಿ.ವಾಯ್.ಹೆರಕಲ್ಲ ಅತಿಥಿಗಳಾಗಿ ಪಾಲ್ಗೊಳ್ಳುವರು. ಸಮಾರಂಭದಲ್ಲಿ ಶಿಕ್ಷಣ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸೇವೆಗೈದ ಮಹನೀಯರನ್ನು ಸನ್ಮಾನಿಸಲಾಗುವುದು. ನಂತರ ಶಿರಸಿಯ ಕೀರ್ತನ ಕೇಸರಿ ನಾರಾಯಣದಾಸಜಿ ಅವರಿಂದ ಹರಿಕತೆ ನಡೆಯಲಿದೆ. ಅ.5 ರಂದು 12 ಗಂಟೆಗೆ ಚಂಡಿಕಾ ಹೋಮದ ಪೂರ್ಣಾಹುತಿ ನಡೆಯಲಿದೆ ಎಂದು ಬೇವೂರಿನ ವಿಶ್ವಬ್ರಾಹ್ಮಣ ಸೇವಾ ಸಮಿತಿ ಹಾಗೂ ಕಾಳಿಕಾಂಬಾ ಸದ್ಭಕ್ತ ಮಂಡಳಿ ತಿಳಿಸಿದೆ.

# ದೈಹಿಕ, ಮಾನಸಿಕ ಅಂಶಗಳು ಉತ್ತಮ ಆರೋಗ್ಯದಲ್ಲಿವೆ :ಚರಂತಿಮಠ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.20-ವ್ಯಕ್ತಿಯ ದೈಹಿಕ, ಮಾನಸಿಕ ಅಂಶಗಳು ಉತ್ತಮ ಆರೋಗ್ಯದಲ್ಲಿವೆ. ಹೀಗಾಗಿ ಆರೋಗ್ಯವನ್ನು ಕಾಪಾಡಿಕೊಳ್ಳುವ ಅಗತ್ಯತೆ ಇದೆ ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ಹೇಳಿದರು.

ಪ್ರಧಾನಿ ನರೇಂದ್ರಮೋದಿಯವರ 75ನೇ ಜನ್ಮದಿನದ ನಿಮಿತ್ಯ ಭಾರತೀಯ ಜನತಾ ಪಾರ್ಟಿ ನಗರ ಮಂಡಲ ವೈದ್ಯಕೀಯ ಪ್ರಕೋಷ್ಠ ಹಾಗೂ ಬಿವಿವಿಎಸ್ ಹೋಮಿಯೋಪಥಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಸಹಯೋಗದಲ್ಲಿ ಶನಿವಾರ ನವನಗರದ 21ನೇ ವಾರ್ಡನಲ್ಲಿನ ಆಂಜನೇಯ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡ ಹೋಮಿಯೋಪಥಿ ಉಚಿತ ಆರೋಗ್ಯ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ಪರಿಶುದ್ದ ಗಾಳಿ, ನೀರು, ಅಹಾರವನ್ನು ನಾವು ಸದ್ಭಳಕೆ ಮಾಡಿಕೊಂಡು ಆರೋಗ್ಯಕರ ಜೀವನ ನಡೆಸಬೇಕು ಅಂದರೆ ಜೀವನದಲ್ಲಿ ಸ್ವಚ್ಚತೆ ಹಾಗೂ ಶುದ್ಧತೆಯನ್ನು ಅಳವಡಿಸಿಕೊಳ್ಳಬೇಕು. ಇಂತಹ ಆರೋಗ್ಯ ತಪಾಸಣೆ ಶಿಬಿರಗಳು ಜನರಿಗೆ ಅನುಕೂಲವಾಗಿದ್ದು, ಹೋಮಿಯೋಪಥಿಕ ಔಷಧ ಬಳಸುವುದರಿಂದ ಜನರಿಗೆ ಆರ್ಥಿಕ ಉಳಿತಾಯ ಆಗಲಿದೆ, ನಮ್ಮ ಹೋಮಿಯೋಪಥಿಕ ಕಾಲೇಜಿನಲ್ಲಿಯೂ ಕೂಡಾ ಉಚಿತ ತಪಾಸಣೆಗಳು ಇವೆ ಅವುಗಳ ಸದುಪಯೋಗ ಪಡೆದುಕೊಳ್ಳಿ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ವೈದ್ಯಕೀಯ ಪ್ರಕೋಷ್ಠದ ಸಂಚಾಲಕ ಡಾ.ರವಿ ಕೋಟೆನ್ನವರ ಮಾತನಾಡಿ, ಎಲ್ಲರಿಗೂ ಆರೋಗ್ಯ ಎಲ್ಲಡೆಯೂ ಆರೋಗ್ಯ ಎಂಬ ಆಶಯದಲ್ಲಿ ಈ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಎಲ್ಲ ರೋಗಗಳಿಗೂ ಹೋಮಿಯೋಪಥಿಯಲ್ಲಿ ಪರಿಹಾರಗಳು ಇವೆ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ನಗರಸಭೆ ಅಧ್ಯಕ್ಷೆ ಸವಿತಾ ಲಂಕೆನ್ನವರ, ಉಪಾಧ್ಯಕ್ಷೆ ಶೋಭಾ ರಾವ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ರಾಜು ರೇವಣಕರ, ಶಿವಾನಂದ ಟವಳಿ, ಯಲ್ಲಪ್ಪ ನಾರಾಯಣಿ, ಬಸವರಾಜ ಅವರಾದಿ, ಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಉಮೇಶ ಹಂಚಿನಾಳ, ಶ್ರೀಧರ ನಾಗರಬೆಟ್ಟ ಮುದಕಪ್ಪ ಮಾದರ, ಹನಮಂತ ಹಳೆಮನಿ, ಪ್ರಿಯಾಜ ಮುದೆನ್ನವರ, ರಂಗಪ್ಪ ದಾಸರ, ಹನಮಂತ ರೆಡ್ಡಿ, ತಾರಾಸಿಂಗ ರಾಥೋಡ, ಅನಿಲ ಅಂಗಡಿ, ಶಿವು ಪಾದಗಟ್ಟಿ, ಶಿವು ಪಾಟೀಲ ಹಾಗೂ ಹೋಮಿಯೋಪಥಿ ವ್ಯದ್ಯರಾದ ಡಾ. ಪ್ರದೀಪ ಕೆ.ಎಸ್. ಡಾ.ಸಾಕ್ಷಿ. ಡಾ.ಸ್ಪೂರ್ತಿ ಹಾಗೂ ಕಲಿಕಾ ವೈದ್ಯರು ಸೇರಿದಂತೆ ಅನೇಕರು ಇದ್ದರು.

ಶಿಬಿರದಲ್ಲಿ 200 ಕ್ಕೂ ಹೆಚ್ಚು ಜನರು ಆರೋಗ್ಯ ತಪಾಸಣೆ ಮಾಡಿಸಿಕೊಂಡರು.

# ಎಚ್.ಐವಿ, ಏಡ್ಸ್ ಜಾಗೃತಿಗಾಗಿ ಮ್ಯಾರಾಥಾನ್ ಸ್ಪರ್ಧೆ ಸಂಗಮೇಶ ಹಳ್ಳಿ, ಮಹಾಲಕ್ಷ್ಮೀ ಬಸಕಾಳಿ ಪ್ರಥಮ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.20-ಎಚ್.ಐವಿ,ಏಡ್ಸ್ ಜಾಗೃತಿಗಾಗಿ ಕಾಲೇಜು ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ 5 ಕಿ.ಮೀ ಮ್ಯಾರಥಾನ್ ಸ್ಪರ್ಧೆಗೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ್ ಶನಿವಾರ ಚಾಲನೆ ನೀಡಿದರು. ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ರಾಜ್ಯ ಏಡ್ಸ್ ಪ್ರವೆನ್ ಷನ್ ಸೊಸೈಟಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಮ ಜಿಲ್ಲಾ ಏಡ್ಸ್ ಪ್ರತಿಬಂಧಕ ಹಾಗೂ ನಿಯಂತ್ರಣ ಘಟಕ ಹಾಗೂ ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಈ ಮ್ಯಾರಥಾನ್ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದ ಅವರು, ಎಚ್.ಐ.ವಿ ತಡೆಗಟ್ಟಲು ತೀವ್ರಗೊಳಿಸಿದ ಐಇಸಿ ಪ್ರಚಾರಾಂದೋಲನ-2025ರ ಅಂಗವಾಗಿ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಮುಖ್ಯವಾಗಿ ಎಚ್.ಐ.ವಿ, ಏಡ್ಸ್ ಬಗ್ಗೆ ಅರಿವು, ಸೇವಾ ಸೌಲಭ್ಯಗಳ ಮಾಹಿತಿ, ಕಳಂಕ ಮತ್ತು



ತಾರತಮ್ಯವನ್ನು ತಡೆಗಟ್ಟುವುದು, ಎಚ್.ಐ.ವಿ,ಏಡ್ಸ್ ತಡೆ ಕಾಯ್ದೆ-2017, ನ್ಯಾಕೋ ಏಡ್ಸ್ ಆಪ್, ಉಚಿತ ರಾಷ್ಟ್ರೀಯ ಸಹಾಯವಾಣಿ-1097 ಸೇರಿದಂತೆ ಇತರೆ ಮಾಹಿತಿಗಳ ಬಗ್ಗೆ ಕಾಲೇಜು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಉದ್ದೇಶವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಂಜುನಾಥ ಡಿ, ಜಿಲ್ಲಾ ಏಡ್ಸ್ ನಿಯಂತ್ರಣ ಅಧಿಕಾರಿ ಡಾ.ಸುವರ್ಣ ಕುಲಕರ್ಣಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಶಿಕಲಾ ಶಿನ್ನೂರ, ಜಿಲ್ಲಾ ಆರೋಗ್ಯ ಮೇಲ್ವಿಚಾರಕ ಡಿ.ಜಿ.ಹೊಸಳ್ಳಿ ಸೇರಿದಂತೆ ಏಡ್ಸ್ ನಿಯಂತ್ರಣ ಘಟಕ ಸಿಬ್ಬಂದಿ ವರ್ಗದವರು ಇದ್ದರು.

ಮ್ಯಾರಥಾನ್ ಸ್ಪರ್ಧೆ ಜಿಲ್ಲಾಡಳಿತ ಭವನದಿಂದ ಪ್ರಾರಂಭವಾಗಿ ಎ.ಪಿ.ಎಂ.ಸಿ, ಬಜಾಜ್ ಶೋರೂಮ್ ಮೂಲಕ ಮರಳಿ ಜಿಲ್ಲಾಡಳಿತ ಭವನಕ್ಕೆ ಮುಕ್ತಾಯಗೊಂಡಿತು. ಮ್ಯಾರಥಾನ್ ಸ್ಪರ್ಧೆಯಲ್ಲಿ 220ಕ್ಕೂ ಹೆಚ್ಚು ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪುರುಷರ ವಿಭಾಗದಲ್ಲಿ ಸಂಗಮೇಶ ಹಳ್ಳಿ ಪ್ರಥಮ, ದರ್ಶನ ಗೌಡರ ದ್ವಿತೀಯ, ಮಂಜುನಾಥ ಬೇಲೂರಪ್ಪನವರ ತೃತೀಯ ಸ್ಥಾನ ಪಡೆದುಕೊಂಡರೆ, ಮಹಿಳಾ ವಿಭಾಗದಲ್ಲಿ ಮಹಾಲಕ್ಷ್ಮೀ ಬಸಕಾಳಿ ಪ್ರಥಮ, ಮೀನಾಕ್ಷಿ ಚಲವನ್ನವರ ದ್ವಿತೀಯ, ದೀಪಾ ಸನದಿ ತೃತೀಯ ಸ್ಥಾನ ಪಡೆದುಕೊಂಡರು. ವಿಜೇತರಿಗೆ ತಲಾ ಪ್ರಥಮ 5 ಸಾವಿರ ರೂ, ದ್ವಿತೀಯ 3500 ರೂ, ತೃತೀಯ 2500 ರೂ.ಗಳ ನಗದು, ಪ್ರಶಸ್ತಿ ಪತ್ರ ಹಾಗೂ ಮೆಡಲ್ ನೀಡಲಾಯಿತು.

# ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.20-ಜಿಲ್ಲೆಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ 24 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವ ಸಿದ್ದತಾ ಸಭೆ ಜರುಗಲಿದೆ.

ಈ ಸಭೆಗೆ ಪರಿಶಿಷ್ಟ ಪಂಗಡದ ಎಲ್ಲ ಧುರೀಣರು, ಪದಾಧಿಕಾರಿಗಳು ಹಾಗೂ ಇತರೆ ಸಂಘ ಸಂಸ್ಥೆಗಳ ಪದಾಧಿಕಾರಿಗಳು

ಮತ್ತು ಸಾರ್ವಜನಿಕರು ಪಾಲ್ಗೊಂಡು ಸಲಹೆಗಳನ್ನು ನೀಡುವಂತೆ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ರಮೇಶ ಚವ್ಹಾಣ ಪ್ರಕಟಣೆಯಲ್ಲಿ ಕೋರಿದ್ದಾರೆ.

# ವೀರಶೈವ ಲಿಂಗಾಯತ ಪದ ಅವೈಜ್ಞಾನಿಕವಾದುದು, ಕೇವಲ ಲಿಂಗಾಯತ ಎಂದೆ ಬರೆಸಿ: ಬಸವರಾಜ ಧನ್ನೂರ

ಬೀದರ. ಸೆ. 20 : ವೀರಶೈವ ಲಿಂಗಾಯತ ಎಂಬುದು ಅವೈಜ್ಞಾನಿಕ ಪದವಾಗಿದೆ. ವೀರಶೈವ ಶಬ್ದವನ್ನು 2002ರ ನಂತರ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಸೇರ್ಪಡೆ ಮಾಡಿರುವಂಥದ್ದು. ವೀರಶೈವ ಎಂಬುದು ಲಿಂಗಾಯತ ಧರ್ಮದ ಒಳಪಂಗಡವಾಗಿದೆ ಎಂದು ಜಾಗತಿಕ ಲಿಂಗಾಯತ ಮಹಾಸಭೆಯ ಜಿಲ್ಲಾಧ್ಯಕ್ಷ ಬಸವರಾಜ ಧನ್ನೂರ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶನಿವಾರ ಕರೆದ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ವಚನ ಸಾಹಿತ್ಯದಲ್ಲಿ ವೀರಶೈವ ಪದ ಎಲ್ಲಿಯೂ ಬಳಕೆಯಾಗಿಲ್ಲ. ದೇಶದ ಹೆಸರು ಕೇಳಿದರೆ ಭಾರತ, ರಾಜ್ಯದ ಹೆಸರು ಕೇಳಿದರೆ ಕರ್ನಾಟಕ ಎಂದು ಹೇಳುವಂತೆ, ಧರ್ಮದ ಹೆಸರು ಲಿಂಗಾಯತ. ಬಳಿಕ ಜಾತಿಯ ಕಾಲಂನಲ್ಲಿ ಲಿಂಗಾಯತ ವಕ್ಕಲಿಗ, ಲಿಂಗಾಯತ ಬಣಜಿಗ, ಲಿಂಗಾಯತ ಹಡಪದ, ಲಿಂಗಾಯತ ಮಡಿವಾಳ ಎಂದು ಬರೆಸಬೇಕು. ಯಾವುದೇ ಕಾರಣಕ್ಕೂ ಧರ್ಮದ ಕಾಲಂನಲ್ಲಿ




ವೀರಶೈವ ಲಿಂಗಾಯತ ಎಂದು ಬರೆಸಕೂಡದು ಎಂದು ಧನ್ನೂರ ತಿಳಿಸಿದರು.

ಹಿಂದೂ ಧರ್ಮದ ಬಗ್ಗೆ ನಮಗೆ ಅಭಿಮಾನವಿದೆ. ಭೌಗೋಳಿಕವಾಗಿ ನಾವೆಲ್ಲ ಹಿಂದೂಗಳೆ. ಆದರೆ ಧಾರ್ಮಿಕವಾಗಿ ಲಿಂಗಾಯತರು. ಜೈನ, ಕ್ರೈಸ್ತ, ಸಿಖ್, ಬೌದ್ಧರಂತೆ ಲಿಂಗಾಯತ ಧರ್ಮ ಸ್ವತಂತ್ರ ಧರ್ಮ. ಇದರಲ್ಲಿ ಸ್ವತಂತ್ರ ಧರ್ಮದ ಎಲ್ಲಾ ಲಕ್ಷಣಗಳೂ ಇವೆ. ಇನ್ನೇನು ಮಾನ್ಯತೆ ಸಿಗಬೇಕಾಗಿದೆ. ಜಾಗತಿಕ ಲಿಂಗಾಯತ ಮಹಾಸಭೆ ವೀರಶೈವ ಲಿಂಗಾಯತ ವಿಷಯ ಕುರಿತಂತೆ ಕೋರ್ಟ್ ಮೆಟ್ಟಿಲೇರಿದೆ. ಇನ್ನೇನು ಕೆಲವೇ ದಿವಸಗಳಲ್ಲಿ ತೀರ್ಪು ಬರಲಿದೆ. ಆದ್ದರಿಂದ ಸೆ. 22 ರಿಂದ ಆರಂಭವಾಗಲಿರುವ ಜಾತಿ ಜನಗಣತಿಯಲ್ಲಿ ಲಿಂಗಾಯತರು ಧರ್ಮದ ಇತರೆ ಕಾಲಂನಲ್ಲಿ ಲಿಂಗಾಯತ ಎಂದು ಮಾತ್ರ ಬರೆಸಬೇಕು. 97 ಒಳಪಂಗಡದವರು ಜಾತಿಯ ಕಾಲಂನಲ್ಲಿ ತಮ್ಮ ತಮ್ಮ ಜಾತಿಗಳನ್ನು ನಮೂದಿಸಬೇಕೆಂದು ಧನ್ನೂರ ಹೇಳಿದರು.

ಯುವ ಮುಖಂಡರಾದ ಬಸವರಾಜ ಭತಮುರ್ಗೆ ಮಾತನಾಡಿ ನಮ್ಮ ಧರ್ಮದಲ್ಲಿಯೇ ಇರುವ ಒಡಕು, ಭಿನ್ನಾಭಿಪ್ರಾಯಗಳಿಂದ ಲಿಂಗಾಯತ ಧರ್ಮಕ್ಕೆ ಮಾನ್ಯತೆ ಸಿಗದಿರುವುದು ದುರ್ದೈವದ ಸಂಗತಿ. ಮಾನ್ಯತೆ ಇಲ್ಲದ ಕಾರಣ ನಮ್ಮ ಮಕ್ಕಳು ಹೆಚ್ಚು ಅಂಕ ಪಡೆದರೂ ಯಾವುದೇ ಸೀಟ್ ಸಿಗುತ್ತಿಲ್ಲ. ಇದು ಹೀಗೆ ಮುಂದುವರೆದರೆ ಮುಂದೆ ನಮ್ಮ ಮಕ್ಕಳ ಭವಿಷ್ಯಕ್ಕೆ ಸಮಸ್ಯೆಯಾಗಲಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಬಸವಕಲ್ಯಾಣ ಬಸವಮಹಾಮನೆಯ ಸಿದ್ಧರಾಮೇಶ್ವರ ಸ್ವಾಮೀಜಿ, ಚನ್ನಬಸವ ಪಟ್ಟದ್ದೇವರ ಪ್ರಸಾದ ನಿಲಯದ ಶಿವಾನಂದ ಸ್ವಾಮೀಜಿ, ಭಾಲ್ಕಿ ಹಿರೇಮಠ ಸಂಸ್ಥಾನದ ಮಹಾಲಿಂಗದೇವರು, ಜಾ.ಲಿಂ.ಮ. ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಉಷಾ ಮಿರ್ಚೆ, ಪ್ರಮುಖರಾದ ಸುವರ್ಣ ಧನ್ನೂರ, ವೀರಭದ್ರಪ್ಪ ಭುಯ್ಯಾ, ಯೋಗೇಂದ್ರ ಯದಲಾಪುರೆ ಹಾಜರಿದ್ದರು.

# ಸುಡಗಾಡು ಸಿದ್ದರ ಸಮಾಜದಿಂದ ಗಂಗಾಪೂಜೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.20-ತಾಲೂಕಿನ ಶಿರೂರ ಪಟ್ಟಣದ ಸುಡಗಾಡು ಸಿದ್ಧರ ಸಮಾಜದವರು ಶುಕ್ರವಾರ ಕೆರೆಯ ಬಳಿ ಗಂಗಾಪೂಜೆ ನೆರವೇರಿಸಿದರು.

ಸಮಾಜ ಬಾಂಧವರು ಮೂಲ ಸಂಪ್ರದಾಯದಂತೆ ಪೂಜೆ ನೆರವೇರಿಸಿ ಉತ್ತಮ ಮಳೆ, ಬೆಳೆ ಹಾಗೂ ಶಾಂತಿಗಾಗಿ ದೇವರಲ್ಲಿ ಪ್ರಾರ್ಥಿಸಿದರು. ಸಮುದಾಯದ ಪ್ರತಿ ಕುಟುಂಬದವರು ಬೆಳಿಗ್ಗೆ ಕೊಡ ಹಾಗೂ ತಂಬಿಗೆಯೊಂದಿಗೆ ಬಂದು ಕೆರೆಯ ದಡದಲ್ಲಿ ಸೇರಿದರು.

ಅಲ್ಲಿ ಆಗಲೇ ಸಮಾಜದ ಹಿರಿಯರು ಪೂಜೆಗೆ ಸಿದ್ಧತೆ ಮಾಡಿ, ಪಂಚ ದೇವತೆಯರ ಉಸುಕಿನ ಗದ್ದುಗೆ ಪ್ರತಿಷ್ಠಾಪಿಸಿದ್ದರು. ನಂತರ ಮಹಿಳೆಯರು, ಮಕ್ಕಳು ಕೆರೆಯ ನೀರು ತಂದು ಪಂಚ ದೇವತೆಯರಿಗೆ ಎರೆದು ಪಂಚಫಳಾರಗಳ ನೈವೇದ್ಯ ಸಮರ್ಪಿಸಿ ಪ್ರಾರ್ಥನೆ ಸಲ್ಲಿಸಿದರು.

ಪಟ್ಟಣದ ಸಮಸ್ತ ಜನತೆಗೆ ಒಳ್ಳೆಯದಾಗಲಿ, ಯಾವುದೇ ಮಾರಕ ರೋಗ ಒಕ್ಕರಿಸದಿರಲಿ, ಉತ್ತಮ ಮಳೆಯಾಗಿ ಶಾಂತಿ-ಸುಖ ನೆಲೆಸಲಿ, ಸಮೃದ್ಧ ಬೆಳೆ ಬಂದು ಎಲ್ಲರಿಗೂ ಶುಭವಾಗುಂತೆ ಮಾಡು ದೇವಿ ಎಂದು ಪ್ರಾರ್ಥಿಸಿದರು.

ದಸರಾ ಹಬ್ಬದ ಮೊದಲು ಬರುವ ಮಂಗಳವಾರ ಅಥವಾ ಶುಕ್ರವಾರ

ಈ ಹಬ್ಬ ಆಚರಿಸುವುದು ಸುಡಗಾಡು ಸಿದ್ಧರ ಸಮಾಜದ ವಾಡಿಕೆಯಾಗಿದೆ. ಗಂಗಾ ಪೂಜೆ-ಯ ಸಮಯದಲ್ಲಿ ಸಮಾಜದ ಹಿರಿಯರಾದ ಮಹಾದೇವಪ್ಪ ಪರಿಯವರ, ಭೀಮಣ್ಣ ಘಂಟಿ, ಶಾಂತಪ್ಪ ಶಂಖದ, ಗುರಪ್ಪ ಬಿತ್ತಾಳೆ, ಭೀಮಣ್ಣ ಹಾವಿನವರ, ಯಲ್ಲಪ್ಪ ಬಿತ್ತಾಳೆ, ಹುಲ್ಲಪ್ಪ ಶಂಖದ, ಸ್ವಾರೆಪ್ಪ ಘಂಟಿ ಹಾಗೂ ಮಹಿಳೆಯರು ಯುವಕರು, ಮಕ್ಕಳು ಪಾಲ್ಗೊಂಡಿದ್ದರು.

# ಪುಸ್ತಕ ಓದಿ ಮಸ್ತಕದ ಜ್ಞಾನ ಹೆಚ್ಚಿಸಿಕೊಳ್ಳಿರಿ: ಪ್ರೊ. ಪರಮೇಶ್ವರ ಟಿ. ನಾಯಕ

ಬೀದರ. ಸೆ. 20 : ಪುಸ್ತಕ ಸಂಸ್ಕೃತಿ ನಮ್ಮದಾಗಲಿ. ಓದಿದರೆ ಜ್ಞಾನ ಸಂಪಾದನೆ ಸಾಧ್ಯ. ಇಂದಿನ ಧಾವಂತ ಬದುಕಿನ ಭರಾಟೆಯಲ್ಲಿಯೂ ಬೀದರನಲ್ಲಿ ನಿರಂತರವಾಗಿ ಸಾಹಿತ್ಯಿಕ ಚಟುವಟಿಕೆಗಳಲ್ಲಿ ತೊಡಗಿಸಿ ಕೊಳ್ಳಲು ಸಂತಸವೆನಿಸುತ್ತದೆಂದು ಪ್ರೊ. ಪರಮೇಶ್ವರ ನಾಯಕ ಟಿ. ನುಡಿದರು.

ನೌಬಾದನ ನಿವೇದಿತಾ ಹೂಗಾರ ಟ್ರೇನರ್ಸ್ ಅಕಾಡೆಮಿ ರಾಘವೇಂದ್ರ ಬಡಾವಣೆಯಲ್ಲಿ ಕರ್ನಾಟಕ ವಿಕಾಸ ರಂಗ ನೂತನ ಸಂಘದ ಜಿಲ್ಲಾಘಟಕ ಹಾಗೂ ಅರೋಗ್ಯಂ ಧನ ಸಂಪದ: ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ಬೀದರ ವಿಶ್ವವಿದ್ಯಾನಿಲಯದ ಮೌಲ್ಯಮಾಪನ ಕುಲಸಚಿವರಾದ ಪ್ರೊ. ಪರಮೇಶ್ವರ ನಾಯಕ ಟಿ ಮುಂದುವರೆದು...

ಜ್ಞಾನ ಸುಪ್ತಾವಸ್ಥೆಯಲ್ಲಿದ್ದರೆ ಅದು ಯಾರಿಗೂ ಉಪಯೋಗವಿಲ್ಲ, ಆದರೆ ವ್ಯಕ್ತಿ ಜ್ಞಾನದ ಅರಿವಿನ ಪ್ರಜ್ಞೆಯಿಂದ ರಚಿಸಿದಾಗ ಸಮಾಜ ಸಮೃದ್ಧವಾಗಿ ಸುಸ್ಥಿರ ಸಮಾನ ನಿರ್ಮಾಣವಾಗಲೂ ಸಾಹಿತ್ಯ ಬಹಳ ದೊಡ್ಡ ಪರಿಣಾಮ ಬೀರಬಲ್ಲದಾಗಿದೆ.

ಶರಣರ ವಚನಗಳು ಜೀವನದ ಮೌಲ್ಯಗಳಾಗಿವೆ. ಅಂದು ಶರಣರು ಉಳ್ಳವರು ಶಿವಾಲಯ ಮಾಡುವರು ನಾನೇನ ಮಾಡಲಿ ಬಡವನಯ್ಯ ಎಂಬುದಕ್ಕೆ ನಾನು ಬಡವ ಆದರೆ ವಿದ್ಯಾವಂತನಾಗಿ ಶತತ ಪ್ರಯತ್ನ ಮಾಡಿ ಶ್ರೀಮಂತನಾಗುವೆ ಎಂಬ ಕನಸನ್ನು ಹೊತ್ತು ಮುನ್ನಡೆಯ ಬೇಕೆಂದು ಅನುಭವ ನೀಡಿದರು. ಸಂಘರ್ಷ/ಯುದ್ದ ಅವಶ್ಯಕ ಇಲ್ಲ. ಉನ್ನತ ಶಿಕ್ಷಣ ಪಡೆಯುದೇ ನಿಮ್ಮ ಧ್ಯೇ ಯವಾಗಿರಲಿ. ಅಸೂಯೆ/ ದುರಾಸೆ ಬೇಡ, ಉತ್ಸಾಹದ ಚಿಲುಮೆ ನಿಮ್ಮಲ್ಲಿ ಬರಲಿ, ಭಯ ಭಕ್ತಿ ಇರಲಿ. ನಿಷ್ಠೆ ಇದ್ದಾಗ ಎಲ್ಲವು ಸಾಧ್ಯ. ಬೇಡುವುದಾದರೆ ನಿನಗಾಗಿ ಬಿಟ್ಟು ಅನ್ಯರ ಒಳಿತಿಗಾಗಿ ಬೇಡುವ ಧರ್ಮ ನಿಮ್ಮದಾಗಲಿ. ಪುಸ್ತಕ ಒಳ್ಳೆಯ ಸಂಸ್ಕೃತಿ ಬೀದರ ವಿ ವಿ



ನಿಮ್ಮಲ್ಲಿಗೆ ಬಂದಿದೆ. ಅದನ್ನು ಉಳಿಸಿ ಬೆಳಿಸಿರಿ ವಿ ವಿ ಮಾದರಿಯಾಗಲು ಸಹಕರಿಸಿದರೆ ವಿದ್ಯೆ ಯುವಕರ ಭವಿಷ್ಯರೂಪಿಸುತ್ತದೆಂದು ನುಡಿದರು. ಕ.ಸಾ.ಪ.ಜಿಲ್ಲಾಧ್ಯಕ್ಷರಾದ ಸುರೇಶ ಚನ್ನಶೆಟ್ಟಿ ಆರೋಗ್ಯಂ ಧನ ಸಂಪದ ಲೋಕಾರ್ಪಣೆ ಮಾಡಿ.. ಕನ್ನಡದ ಸಾಧಕರಿಗೆ ಸ್ಮರಿಸಲು ಚೆನ್ನೆಗೌಡರು ಕ.ಸಾ.ಪ.ದಲ್ಲಿರುವಾಗ ಏಳು ಲಕ್ಷ ದತ್ತಿ ನಿಧಿ ಸಂಗ್ರಹಿಸಿ ಕನ್ನಡ ಬೆಳೆಸಿದ ಕನ್ನಡ ಕಟ್ಟಾಳು. ಮಥವರು ಇಂದು ಕರ್ನಾಟಕ ವಿಕಾಸ ರಂಗ ರಾಜ್ಯಾಧ್ಯಕ್ಷರಾಗಿದ್ದಾರೆ, ಜಿಲ್ಲೆಯಲ್ಲಿ ಕನ್ನಡ ಕೆಲಸವನ್ನು ಮಾಡಲು ಸಹೋದರ ಸಂಗಮೇಶ ಜಾಂತೆ ಅವರಿಗೆ ಜಿಲ್ಲಾಧ್ಯಕ್ಷರನ್ನಾಗಿ ಮಾಡಿದ್ದು ಕನ್ನಡ ಚಟುವಟಿಕೆ ಮಾಡಲು ಇದೊಂದು ಪ್ರೇರಣೆ ಎಂದರು.

ಬಳ್ಳಾರಿ ಯಿಂದ ಬೀದರಕ್ಕೆ ವಿದ್ಯಾಧಿಕಾರಿಗಳಾಗಿ ಬಂದು ಸಾಹಿತ್ಯಿಕ ಕ್ರಿಯಾಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಡಾ.ಶ್ರೇಯಾ ಮಹೀಂದ್ರ ವೈವಿಧ್ಯಮಯ ಸಂಸ್ಕೃತಿ ಅಳವಡಿಸಿ ಕೊಂಡಿ-ದ್ದಾರೆ. ಆಡುಮುಟ್ಟದ ಸೊಪ್ಪಿಲ್ಲ ವೈದ್ಯಕೀಯ ಕ್ಷೇತ್ರದಲ್ಲಿ ಡಾ ಶ್ರೇಯಾ ಬರೆಯದ ವಿಷಯವಿಲ್ಲ. ಅವರ ಮೊದಲ ಕೃತಿ ಚೈತನ್ಯದ ಚಿಗುರು ಬಿಡುಗೊಂಡು ಓದುಗರ ಮನ ಗೆದ್ದಿದೆ, ಇಂದು ವೃತ್ತಿ ಜೊತೆಗೆ ಪ್ರವೃತ್ತಿ ಗಂಟಿ ಹಾಕಿಕೊಂಡು ದ್ವಿತೀಯ ಕೃತಿ ರಚನೆ ಮಾಡಿದ್ದು ಅಭಿಮಾನದ ಸಂಗತಿ. ಕೆಲವೆ ಕೆಲವು ಮಹಿಳಾ ಸಾಹಿಗಳಲ್ಲಿ ಅತ್ಯಂತ ಗಟ್ಟಿ ಸಾಹಿತ್ಯ ರಚಿಸಿ ಸಾಹಿತ್ಯ ಬಳಗ-ಕ್ಕೆ ಸಮೀಪರಾಗಿದ್ದಾರೆ ಎಂದು ನುಡಿದರು.

ಪ್ರೊ. ಶಿವಕುಮಾರ ಕ-ಟ್ಟೆ ಸಾಹಿತಿಗಳು ಪುಸ್ತಕದ ಬಗ್ಗೆ ಮಾತನಾಡುತ್ತ ಇದು ಅತ್ಯಂತ ಉಪಯುಕ್ತ ಆರೋಗ್ಯ ಕೃತಿ. ಸೃಜನಶೀಲ ಬರಹಗಾರತಿವರು. ಇಲ್ಲಿ ಒಟ್ಟು 27 ಲೇಖನಗಳಿವೆ. ತಾವು ಪ್ರಜ್ಞಾವಂತ ಜನರಲ್ಲಿ ವಿನಂತಿ ಈ ಪುಸ್ತಕ ನಿಮ್ಮ ಮನೆಯ ಹಳೆಯ ಪುಸ್ತಕ ಸಾಲಿನಲ್ಲಿ ಸೇರಿಸಬೇಡಿ. ಇದು ಟೇಬಲ್ ಮೇಲಿಡಿರಿ, ಮೊಬೈಲ್ ಬೇಜಾರಾದಾಗ ಇದನ್ನು ಓದಿದರೆ ತಾಳ್ಮೆಗರಿಗೇರುತ್ತದೆ. ಇತಿ ಮಿತಿಗಳ ಮಧ್ಯೆ ಸಾಹಿತ್ಯ ರಚಿಸಿದ್ದಾರೆ. ವೈದ್ಯ ಸಾಹಿತ್ಯ ಪ್ರಥಮ ಗ್ರಂಥ ಇದಾಗಿದೆ, ಸ್ವಯಂ ವೇದ್ಯವಾಗಿದೆ. ಹೆಚ್ಚಿನ ವಿವರ ಬೇಕಿಲ್ಲ. ಪುಸ್ತಕ ನಿಮ್ಮನ್ನು ಓದಿ ಕೊಂಡು ಹೋಗುತ್ತದೆ. ಇಲ್ಲಿ ವೈದ್ಯ ಸಾಹಿತ್ಯ ಉದ್ದೇಶ ಕಾಳಜಿ ಇದೆ, ಜವಾಬ್ದಾರಿ ಏನಿದೆ ಎಂಬುದನ್ನು ಅರ್ಥೈಸಿಕೊಂಡು ಸಾಮಾಜಿಕ ಕಳಕಳಿ ನಿಭಾಯಿಸುವ ಗುಣ ಇವರದ್ದಾಗಿದೆ. ವೈದ್ಯ ಕ್ಷೇತ್ರದಲ್ಲಿ ಕರ್ನಾಟಕ ಸಾಹಿತ್ಯ ವೈದ್ಯ ಸಾಹಿತ್ಯ ಪರಿಗಣಿಸಿಲ್ಲ ವಿಷಾದನೀಯ. ಅನೇಕ ಕಡೆಗಳಲ್ಲಿ ವೈದ್ಯ, ಚಿತ್ರ ಗೋಷ್ಠಿಗಳಿರುವುದಿಲ್ಲ. ಇನ್ಮುಂದೆ ಎಲ್ಲೆಡೆ ಎಚ್ಚರಿಕೆ ಘಂಟೆ ಭಾರಿಸಬೇಕು. ಅಂದಿಗಿಂತ ಇಂದು ವೈದ್ಯ ಸಾಹಿತ್ಯ ಅಗತ್ಯತೆ ಇದೆ. ಪತ್ರಿಕೆ ಸಹ ಇದಕ್ಕೆ ಪೂರಕ ವಾತಾವರಣ ಬೆಳೆಸುತ್ತಿದ್ದು ಅನೇಕ ಸಮಸ್ಯೆ ಪರಿಹಾರ ಕಾಲಮ್ ಗಳು ಆರೋಗ್ಯ ಅಂಕಣ ಮೂಡಿ ಬರುತ್ತಿವೆ. ಇದರಿಂದ ವೈದ್ಯ ಸಾಹಿತ್ಯ ಕ್ಷೇತ್ರ ಬೆಳೆಯುತ್ತದೆ.

ಆರೋಗ್ಯ ರಕ್ಷಣೆ ಪಂಚಕರ್ಮ ವಿವರಣೆ ನೀಡಿದ್ದಾರೆ ಇದೆ. ಅಲೋಪತಿ ಸಹವಾಸ ಬೇಡಿರಿ ಎಂದಿದ್ದಾರೆ. ಗುಟ್ಟು ರುಟ್ಟು ಮುಟ್ಟು ಬರೆದಿರುವ ಲೇಖಕರು ರಕ್ತ ಕಡಿಮೆ, ಮಕ್ಕಳ ಆರೋಗ್ಯ ಹಾಗೂ ಖಿನ್ನತೆ ಒಳಗಾದವರಿಗೆ ಉಪಯುಕ್ತವಾದ ಮಾಹಿತಿ ನೀಡಿದ್ದಾರೆ. ನಮ್ಮಲ್ಲಿ 300 ಮಿಲಿಯನ್ ಜನ ಖಿನ್ನತೆ ಒಳಪಟ್ಟಿದ್ದಾರೆ. ಇಂಥವರು ಸಕರಾತ್ಮಕ ಸಾಹಿತ್ಯ ಓದಿದರೆ ಖಿನ್ನತೆಯಿಂದ ಪರಿಹಾರ ಇದೆ ಎಂದು ಹೇಳಿದ್ದಾರೆ. ಇಲ್ಲಿ ಅತೀ ಚಿಕ್ಕ ಚಿಕ್ಕ ಲೇಖನಗಳಿವೆ. ಮಧುಮೇಹ ಸಾಮಾನ್ಯ ರೋಗ ಇದರ ಬಗ್ಗೆ ಅತೀ ಸೂಕ್ಷ್ಮ ವಾಗಿ ವಿವರಣೆ ನೀಡಿದ್ದಾರೆ. ಹಸಿ ತರಕಾರಿ, ಉಪ್ಪು ಸಕ್ಕರೆ ಕಡಿಮೆ ತಿನ್ನಿರಿ ಎಂದಿದ್ದಾರೆ.

ಜಠರ ಎಸಿಡಿಟಿ ಹೇಳಿದ್ದಾರೆ ಊಟ ಏರೀಳಿತದ ಪ್ರಮಾಣ ಸರಿಯಾದರೆ ಇದು ಹತೋಟಿಗೆ ತರಬಹುದೆಂದಿದ್ದಾರೆ. ಇಂದಿನ ಮಕ್ಕಳ ಆಹಾರ ಪದ್ಧತಿ ಬದಲಾಗದ ಹೊರತು ಆರೋಗ್ಯ ಸುಧಾರಣೆ ಸಾಧ್ಯವಿಲ್ಲ ಎಂದಿದ್ದಾರೆ. ಪುಸ್ತಕದ ಅಂಗಡಿಗಳಿಗೆ ಬಾಗಿಲಿಲ್ಲ ಕಳ್ಳರು ಕದಿಯೋದಿಲ್ಲ, ಪುಸ್ತಕ ಓದುವರು ಕಳ್ಳರಾಗೋದಿಲ್ಲ ಎಂಬ ವಿಚಾರ ಹೇಳುತ್ತ ಇಂದು ಹೆಣ್ಣುಮಕ್ಕಳ ಹಾಲೂಣಿಸುವ ತಿರಸ್ಕಾರದಿಂದಾಗಿ ಸಮಸ್ಯೆ ಹಾಗೂ ಬಂಜೆತನ ಬಗ್ಗೆ ವಿವರ ವಿಶ್ಲೇಷಣೆ ಮಾಡಿದ್ದಾರೆ.

ಲಸಿಕೆ, ಡೆಂಗ್ಯೂ, ದೈಹಿಕ ಬೊಜ್ಜು ಕಡಿಮೆ ಮಾಡಿಕೊಳ್ಳಲು ಸಲಹೆ ನೀಡಿದ್ದಾರೆ, ಏಡ್ಸ್ ಸಾವಿನಡೆಗೆ ದಾರಿ, ಮಾಹಿತಿ ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಮಾರ್ನಿಂಗ ವಾಕ ಮಾಡಲು ಕವಿ ಹೃದಯಿಗಳ ಮನ ಮಿಡಿದಿದೆ. ಕರೋನಾದಲ್ಲಿ ಕವಿಯಾಗಿ ಹೊರಬಂದಿದ್ದಾರೆ.

ಇಂಥ ಸಾಹಿತ್ಯ ಮಕ್ಕಳಿಗೆ ತಲುಪಲು ಪಠ್ಯಪುಸ್ತಕ ದಲ್ಲಿ ಕಡ್ಡಾಯವಾಗಿ ಅಳವಡಿಸಿದರೆ ಒಳ್ಳೆಯ ಜನಾಂಗ ನಿರ್ಮಾಣ ವಾಗುತ್ತದೆಂದರು

ಸಿಂಡಿಕೇಟ್ ಸದಸ್ಯರಾದ ಕಮಠಾಣೆ ನಾಗಭೂಷಣ ಮಾತನಾಡಿ ನಮ್ಮ ಜಿಲ್ಲೆಯ ಎಲ್ಲ ಕವಿ, ಸಾಹಿತಿಗಳ, ಲೇಖಕರ ಪ್ರಕಟಿತ ಪುಸ್ತಕಗಳ ಅವಲೋಕನ ಮಾಡಿ ಅದನ್ನು ಯಾವ ರೀತಿ ವಿಶ್ವ ವಿದ್ಯಾಲಯದ ಅಂಗಳಕ್ಕೆ ಪಡೆಯುವ ವಿಚಾರವನ್ನು ಕೆಲವೆ ದಿವಸಗಳಲ್ಲಿ ಮಾನ್ಯ ಶ್ರೀ ಸುರೇಶ ಚನ್ನಶೆಟ್ಟಿ ಮಾರ್ಗದರ್ಶನ ದಲ್ಲಿ ಸಭೆ ಸೇರಿ ಕ್ರಮ ಜರುಗಿಸುವೆ ನಿಮ್ಮ ಸಹಕಾರ ಇರಲಿ ಎಂದರು.

ಎಲ್ಲರೂ ಬ್ರ್ಯಾಂಡ ಡ್ರೆಸ್ ಖರೀಸುತ್ತೀರಿ ಅದೇ ರೀತಿ ಬ್ರ್ಯಾಂಡ್ ಸಾಹಿತಿಗಳ ಪುಸ್ತಕ ತೆಗೆದು ಕೊಳ್ಳುವ ಮನಸ್ಸುಗಳು ತಯ್ಯಾರಾಗ ಬೇ-ಕೆಂದು ನುಡಿದರು.

ವೇದಿಕೆ ಮೇಲೆ ಶ್ರೀ ದೇವಿ ಹೂಗಾರ ಮಾಸ್ಟರ್ ಮೈಂಡ್ ಟ್ರೇನರ್, ಶಿವಶಂಕರ ಟೋಕರೆ, ಬಾಬು ದಾನಿ ,ಟಿ ಎಮ್ ಮಚ್ಚೆ ಮುಖ್ಯ ಅತಿಥಿಗಳಾಗಿ ಅಗಮಿಸಿದ್ದರು. ಅಮೂಕ್ತಾಮೌಲ್ಯ ಹೇಡೆ ಜಾನಪದ ನೃತ್ಯ ಹಾಗೂ ಶಂಭುಲಿಂಗ ವಾಲ್ದೊಡ್ಡಿ ಅವರ ಗಾಯನ ಎಲ್ಲರ ಗಮನ ಸೆಳೆಯಿತು. ಬ್ರಹ್ಮಕುಮಾರಿ ಈಶ್ವರೀ ವಿಶ್ವವಿದ್ಯಾಲಯ ಬೀದರಿನ ಪೂಜ್ಯ ರಾಕ ಯೋಗಿಣಿ ಬ್ರ.ಕು.ಜ್ಯೋತಿ ಬಹೇನಜಿ ಸಾನಿಧ್ಯವಹಿಸಿ ಆಶೀರ್ವಚನ ನೀಡಿದರೆ, ಗ್ರಂಥ ಕರ್ತರಾದ ಶ್ರೇಯಾ ಯಶಪಾಲ್ ಮಹೀಂದ್ರಕರ ಆಶಯ ನುಡಿ ಆಡಿದರೆ, ಅಧ್ಯಕ್ಷತೆಯನ್ನು ಜ್ಯಾಂತೆ ಸಂಗಮೇಶ ಜಿಲ್ಲಾಧ್ಯಕ್ಷ ಕರ್ನಾಟಕ ವಿಕಾಸ ರಂಗ ಬೀದರ ವಹಿಸಿದ್ದರು. ಸ್ವಾಗತವನ್ನು ಪ್ರಧಾನ ಕಾರ್ಯದರ್ಶಿ ಸಿದ್ಧಾರೂಢ ಭಾಲ್ಕೆ ಮಾಡಿದರೆ ನಿರೂಪಣೆ ಸ್ವರೂಪ ರಾಣಿ ನಿರ್ವಹಿಸಿದರೆ ಶಿಲ್ಪಾ ಮಜಗೆ ವಂದಿಸಿದ ಕಾರ್ಯಕ್ರಮದಲ್ಲಿ ಸುಮಾರು ಇಪ್ಪತ್ತೈದು ಆದರ್ಶ ಶಿಕ್ಷಕರಿಗೆ ಉತ್ತಮ ಪ್ರಶಸ್ತಿ ನೀಡಿ ಗೌರವಿಸಲಾಯಿತು.

# ಸಾತೋಳ್ಳಿ ಗ್ರಾಮದಲ್ಲಿ ಗ್ಯಾರಂಟಿ ಯೋಜನೆ ಬಗ್ಗೆ ಮನೆ ಮನೆಗೆ ಭೇಟಿ



ಬೀದರ. ಸೆ. 20 : ಗ್ಯಾರಂಟಿ ಯೋಜನೆ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮಾಜಿ ಶಾಸಕರಾದ ಸನ್ಮಾನ್ಯ ಶ್ರೀ ಅಶೋಕ ಖೇಣಿ ರವರ ಮಾರ್ಗದರ್ಶನದಲ್ಲಿ ಬೀದರ ತಾಲ್ಲೂಕಿನ ಪಂಚ್ ಗ್ಯಾರಂಟಿ ಸಮಿತಿಯ ಉಪಾಧ್ಯಕ್ಷರಾದ ಶ್ರೀ ರಾಜಕುಮಾರ ಮಡಕಿ ಹಾಗೂ ಸದಸ್ಯರ ನೇತೃತ್ವದಲ್ಲಿ ನಮ್ಮ ನಡೆ ಹಳ್ಳಿ ಕಡೆ ಕಾರ್ಯಕ್ರಮವನ್ನು ಬೀದರ ದಕ್ಷಿಣ ಕ್ಷೇತ್ರದ ನಾಗೋರಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಸಾತೋಳ್ಳಿ ಗ್ರಾಮದಲ್ಲಿ ಕರ್ನಾಟಕ ಸರ್ಕಾರದ ಪಂಚ್ ಗ್ಯಾರಂಟಿ ಯೋಜನೆಗಳಾದ,

'ಗೃಹ ಲಕ್ಷ್ಮಿ' ಗ್ಯಾರಂಟಿ ಯೋಜನೆ ರಾಜ್ಯದ ಲಕ್ಷಾಂತರ ಮಹಿಳೆಯರ ಬದುಕಿನಲ್ಲಿ ಬದಲಾವಣೆ ತಂದಿರುವುದೇ ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳ ಸಾರ್ಥಕತ!.

ಶಕ್ತಿ ಯೋಜನೆ ಈ ಒಂದು ಯೋಜನೆ ನಾಡಿನ ಮಹಿಳೆಯರಿಗೆ ತುಂಬಾ ಅನುಕೂಲವಾಗಿದೆ ಎಂದು ಮನೆಯ ಯಜಮಾನಿಯರು ತಿಳಿಸಿರುತ್ತಾರೆ.

ಮತ್ತು ಅನ್ನಭಾಗ್ಯ, ಗೃಹ ಜ್ಯೋತಿ, ಯುವನಿಧಿ,

ಯೋಜನಗಳ ಮಹತ್ವದ ಬಗ್ಗೆ ಮನೆ ಮನೆಗೆ ತೆರಳಿ ಜನರಲ್ಲಿ ತಿಳಿಸಲಾಯಿತು.

ಈ ಸಂದರ್ಭದಲ್ಲಿ ಕಮಿಟಿಯ ಸದಸ್ಯರಾದ ಉದಯಕುಮಾರ ಚಟನಳ್ಳಿ, ಶಿವಕುಮಾರ

ಕುತ್ತಾಬಬಾದ್, ಗ್ರಾಮ ಪಂಚಾಯತ್ ಸದಸ್ಯರಾದ ರಜಕ್, ಮುಖಂಡರಾದ ವೈಜಿನಾಥ್, ಸೇರಿ ಅನೇಕ ಗ್ರಾಮಸ್ಥರು ಪಾಲ್ಗೊಂಡಿದರು.

# ಮೌಂಟ್ ಅಬುದಲ್ಲಿ ಬೀದರ್ ಕಲಾವಿದರ ಪ್ರದರ್ಶನ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಸೆ. 20 : ಬೀದರನ ಕಲಾವಿದರು ರಾಜಸ್ತಾನದ ಮೌಂಟ್ ಅಬುದಲ್ಲಿ ನಡೆದ ಗರಿಷ್ಠ ಕಾರ್ಯಕ್ಷಮತೆಗಾಗಿ ಕೆಲಸದ ಜೀವನ ಸಮತೋಲನ ಕುರಿತ ಸಮ್ಮೇಳನ ಹಾಗೂ ಧ್ಯಾನ ಶಿಬಿರದಲ್ಲಿ ಆಕರ್ಷಕ ನೃತ್ಯ ಪ್ರದರ್ಶಿಸಿ ಗಮನ ಸೆಳೆದಿದ್ದಾರೆ.

ನಾಟ್ಯಶ್ರೀ ನೃತ್ಯಾಲಯದ ಕಲಾವಿದರು ನೃತ್ಯಾಲಯದ ಅಧ್ಯಕ್ಷೆ ರಾಣಿ ಸತ್ಯಮೂರ್ತಿ ಅವರ ನೇತೃತ್ವದಲ್ಲಿ ಭರತನಾಟ್ಯ ಪ್ರದರ್ಶನ ನೀಡಿದರು.

ಪುಷ್ಪಾಂಜಲಿ, ದಶಾವತಾರ, ಮಹಿಷ ಮರ್ಧಿನಿ, ದೇಶ ಭಕ್ತಿ ಗೀತೆ, ಕರ್ನಾಟಕ ಜಾನಪದ ನೃತ್ಯ, ಮರಾಠಿ ನೃತ್ಯ, ಬ್ರಹ್ಮಕುಮಾರಿ ಗೀತೆಯ ತಾಳಕ್ಕೆ ತಕ್ಕಂತೆ ಸುಂದರ ನೃತ್ಯ ಪ್ರದರ್ಶಿಸಿ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದರು.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಪ್ರಮುಖರು, ಗಣ್ಯರು, ನಾಟ್ಯಶ್ರೀ ನೃತ್ಯಾಲಯದ ನಿರ್ದೇಶಕ ಕೆ. ಸತ್ಯಮೂರ್ತಿ, ಶಿಕ್ಷಕ ದೇವಿದಾಸ ಜೋಶಿ ಇದ್ದರು.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಿಂದ ಸಮ್ಮೇಳನ ಸಂಘಟಿಸಲಾಗಿತ್ತು.

# ವಚನಾನುಭಾವಿ ಪುಸ್ತಕ ಬಿಡುಗಡೆ



ಮಲ್ಲಮ್ಮ ನುಡಿ ವಾರ್ತೆ ಬೀದರ. ಸೆ. 20 : ವ್ಯಕ್ತಿಯ ವ್ಯಕ್ತಿತ್ವವೇ ಆರ್ಥಿಕ ಪ್ರಗತಿ ಬೆನ್ನೆಲುಬು. ಪ್ರೊ. ಮೀಸೆ. ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಕಾರ್ಯಗಳಿಗಿಂತ ವ್ಯಕ್ತಿತ್ವ ಮುಖ್ಯ. ಇಂದಿನ ಜಾಗತಿಕ ಕರಿ ನೆರಳಿನಲ್ಲಿ ಅನೇಕರು ದುಡ್ಡುಗಳಿಸುವ ನೆಪದಲ್ಲಿ ಏನೆಲ್ಲಾ ಕಸರತ್ತು ಮಾಡುವಾಗ ಬದ್ಧತೆಯನ್ನು ಕಾಪಾಡಿದ ಕಲ್ಯಾಣ ಕರ್ನಾಟಕದ ತನು ಮನ ಒಂದಾಗಿಸಿಕೊಂಡು ಹದಿನೈದು ವರ್ಷಗಳಿಂದ ತಪ್ಪು ಹಾಗೂ ಅಪಾದನೆ ರಹಿತ ನಿಸ್ವಾರ್ಥ ಕೆಲಸ ಮಾಡುತ್ತಿರುವ ವ್ಯಕ್ತಿ ಅಲ್ಲಮಪ್ರಭು ನಾವದಗೇರೆ ಎಂದು ನಿವೃತ್ತ ಪ್ರಾಚಾರ್ಯರಾದ ಪ್ರೊ. ಜಗನ್ನಾಥ ಮೀಸೆ ನುಡಿದರು.

ಕಲಬುರಗಿಯ ಪ್ರಕಾಶ ಮಾಲ್‌ನಲ್ಲಿಯ ವಚನ ಸಮೂಹ ಸಂಸ್ಥೆಯ ಕಛೇರಿಯಲ್ಲಿ ವಾರದ ಸಭೆ ಹಾಗೂ ದುಬೈ ದೇಶದ ಪ್ರವಾಸ ಅವಲೋಕನ ಸಭೆಯಲ್ಲಿ ನಿವೃತ್ತ ಪ್ರಾಚಾರ್ಯರು, ಶರಣ ಸಾಹಿಗಳಾದ ಪ್ರೊ ಜಗನ್ನಾಥ ಮೀಸೆ ವಚನಾನುಭಾವಿ ಪುಸ್ತಕ ಲೋಕಾರ್ಪಣೆ ಮಾಡಿ ಅನುಭಾವ ನಿವೇದನೆ ಮಾಡುತ್ತ..

ಅಲ್ಲಮಪ್ರಭು ನಾವದಗೇರೆ ಅಸಾಮಾನ್ಯ ವ್ಯಕ್ತಿ, ಅಸಾಧಾರಣ ನಿಲುವು, ಸೇವಾ ಮನೋಭಾವನೆ, ಸಮಾಜದಲ್ಲಿ ಒಡನಾಟದಿಂದಾಗಿ ಮೇರು ವ್ಯಕ್ತಿತ್ವ ಬೆಳೆಸಿಕೊಂಡಿರುವುದು ಅಪರೂಪ. ಅಲ್ಲಮಪ್ರಭು ನಾವದಗೇರೆ ವಚನ ಸಮೂಹ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿ ಒಂದು ಸಮುದಾಯ ಕಟ್ಟುತ್ತಿದ್ದಾರೆ.

ಅವರಲ್ಲಿಯ ನಿರ್ಮೋಹ, ನಿರಹಂಕಾರ, ನಿರ್ಭಯ, ನಿರಪೇಕ್ಷೆ, ವಿಷಯದಲ್ಲಿ ಉದಾಸೀನ, ಭಾವದಲ್ಲಿ ದಿಗಂಬರರಾಗಿ ಜ್ಞಾನದಲ್ಲಿ ಪರಮಾನಂದರಾಗಿ ಅನೇಕ ಸಾಮಾಜಿಕ, ಶೈಕ್ಷಣಿಕ, ಪರಿಸರ ಕ್ಷೇತ್ರದಲ್ಲಿ ತೊಡಗಿಸಿ ಕೊಂಡು ನಮ್ಮ ಭಾಗದ 64 ಶರಣ/ಶರಣೆಯರನ್ನು ದುಬೈ ಪ್ರವಾಸಕ್ಕೆ ಕರೆದು ಕೊಂಡು ಹೋಗಿ ಅನೇಕರ ಮನಗಲ್ಲಿ ಶಾಶ್ವತವಾಗಿ ನೆಲೆಗೊಂಡವರಾಗಿದ್ದಾರೆ.

ಅವರ 44ನೇ ವರ್ಷದ ಹುಟ್ಟು ಹಬ್ಬ ಹಾಗೂ ಹದಿನೈದು ವರ್ಷಗಳ ನಡೆದು ಬಂದ ದಾರಿ ಪ್ರತೀಕವಾಗಿ ಪ್ರದೀಪ ವಿಸಾಜಿ ಸಂಪಾದಿತ ವಚನಾನುಭಾವಿ ಗ್ರಂಥ ತುಂಬಾ ಚೆನ್ನಾಗಿ ಮೂಡಿ ಬಂದಿದೆ.

ಇಲ್ಲಿ ಪ್ರೊ.ಸಿದ್ದು ಯಾಪಲಪರವಿ ವಿಚಾರ, ಕೌಶಲ್ಯತೆ ಕರಗತ ಮಾಡಿಕೊಂಡ ಶಿವಶಂಕರ ಟೋಕರೆ ಬರೆದ ವ್ಯಕ್ತಿ ಚಿತ್ರಣ ಕವನ, ಡಾ ಮಲ್ಲಿಕಾರ್ಜುನ ನಿಂಗದಳ್ಳಿ, ವೈಜಿನಾಥ ಸಜ್ಜನಶೆಟ್ಟಿ, ಲಿಂಗಾರತಿ ನಾವದಗೇರೆ, ಡಾ.ಶೀಲವಂತ ನಾವದಗೇರೆ ವಿಚಾಧಾರೆ ಮನ ಮಿಡಿದಿದೆ. ಓದುಗರಿಗೆ ವ್ಯಕ್ತಿಯ ಎಲೆಮರೆಯ ಕಾಯಿಯ ನಿಸ್ವಾರ್ಥ ಕಾರ್ಯ ಅರಿತು ಕೊಳ್ಳಲು ಸಾಹಿತ್ಯಿಕವಾಗಿ ಅತ್ಯಂತ ಉಪಯುಕ್ತ ಗ್ರಂಥ ಎಂಬುದರಲ್ಲಿ ಎರಡು ಮಾತಿಲ್ಲ ಎಂಬ ಅನುಭಾವ ನಿವೇದಿಸಿದರು.

ಜಾಗತಿಕ ಲಿಂಗಾಯತ ಮಹಾಸಭಾದ ಕಲಬುರಗಿಯ ಮಾಜಿ ಖಜಾಂಚಿಗಳಾದ ಬಸವರಾಜ ಮೊರಬದ ಅಧ್ಯಕ್ಷತೆ ವಹಿಸಿ.. ಅಲ್ಲಮ ಪ್ರಭು ಒಂದು ವ್ಯಕ್ತಿ ಅಲ್ಲ ಅದೊಂದು ಮಹಾನ್ ಶಕ್ತಿ. ನಮಗೆಲ್ಲರಿಗೆ ಒಂದು ವಾರ ಒಳ್ಳೆ ಪ್ರವಾಸ ಮಾಡಿಸಿ, ಊಟ ವಸತಿಯ ಸಮಸ್ಯೆಯಾಗದಂತೆ ಹಾಗೂ ಸ್ಥಳ ಪರಿವೀಕ್ಷಣೆ ಅತ್ಯಂತ ಅಚ್ಚುಕಟ್ಟಾಗಿ ಮಾಡಿರುವುದು ಸಂತಸ ತಂದಿದ್ದು, ಇಂಥ ಹತ್ತಾರು ವಿದೇಶ ಪ್ರವಾಸ ಮಾಡಲು ಮನಸ್ಸು ಉಲ್ಲಾಸಗೊಂಡಿದೆ ಎಂದರು. ವೇದಿಕೆ ಮೇಲೆ ಲಿಂಗಾರತಿ ನಾವದಗೇರೆ, ಪ್ರಕಾಶ ಗಂದಿಗುಡಿ, ಶಿವಶಂಕರ ಟೋಕರೆ ಸಹ ತಮ್ಮ ಅನುಭವ ಹಂಚಿಕೊಂಡರು, ವಚನ ಸಮೂಹ ಸಂಸ್ಥೆಯ ನಿರ್ದೇಶಕರಾದ ಅಂಬಾರಾಯ ಬಿರಾದಾರ ಪ್ರಾಸ್ತಾವಿಕ ವಾಗಿ ಮಾತನಾಡಿದರು, ಪತ್ರಕರ್ತರಾದ ಪ್ರದೀಪ ವಿಸಾಜಿ ಸರ್ವರನ್ನು ಸ್ವಾಗತಿಸಿದರು, ನಿರ್ದೇಶಕರಾದ ಬಾಬುರಾವ ಪಾಟೀಲ ನಿರೂಪಿಸಿದರೆ, ಹಣಮಂತ ತೀರ್ಥೆ ವಂದಿಸಿದರು. ಮೊದಲಿಗೆ ಶರಣ ಸಾಹಿತ್ಯ ಪರಿಷತ್ತ ಅಧ್ಯಕ್ಷರಾದ ವಡ್ಡನಕೇರಿ ಸರ್ ಸುಮಧುರ ಕಂಠದಿಂದ ವಚನ ಗೀತೆ ಹಾಡಿ ಸಭಿಕರ ಗಮನ ಸೆಳೆದರು.

# ನಾಳೆ ಕುಂಬಾರವಾಡಾ ಭವಾನಿ ಮಂದಿರದಲ್ಲಿ ನವರಾತ್ರಿ ಉತ್ಸವ



ಬೀದರ. ಸೆ. 20 : ಪ್ರತಿ ವರ್ಷದಂತೆ ಈ ವರ್ಷವು ನಗರದ ಕುಂಬಾರವಾಡಾ ಶ್ರೀ ಮಾತಾ ಕಾಳಿಕಾದೇವಿ ಭವಾನಿ ಮಂದಿರದಲ್ಲಿ ನವರಾತ್ರಿ ಉತ್ಸವವನ್ನು ಸೆಪ್ಟೆಂಬರ್ 22 ಸೋಮವಾರ ದಿಂದ ಅಕ್ಟೋಬರ್ 6 ಸೋಮವಾರ ದವರೆಗೆ ಸಡಗರ, ಸಂಭ್ರಮ ಹಾಗೂ ಭಕ್ತಿಭಾವದಿಂದ ಆಚರಿಸಲಾಗುತ್ತಿದೆ.

ಪ್ರತಿದಿನ ಮುಂಜಾನೆ 7 ಗಂಟೆಯಿಂದ 11 ಗಂಟೆಯವರೆಗೆ ಹಾಗೂ ರಾತ್ರಿ ಪೂಜಾ, ಅರ್ಚನಾ ಹಾಗೂ ಆರತಿ ಕಾರ್ಯಕ್ರಮ ನಡೆಯುತ್ತದೆ ಸದ್ಭಕ್ತರು ಮಾತೆ ದರ್ಶನ ಪಡೆಯಬಹುದು.

ಸೆಪ್ಟೆಂಬರ್ 27 ರಂದು ಶನಿವಾರ ಪುಣ್ಯಾವತಿಬಾಯಿ ಕೊಂಡಿ ಇವರ ಅಮೃತ ಹಸ್ತದಲ್ಲಿ ಘಟಸ್ಥಾಪನಾ ನಡೆಯಲಿದ್ದು, ಅಕ್ಟೋಬರ್ 1 ಬುಧವಾರ ರಾತ್ರಿ 12-00 ಗಂಟೆಯವರೆಗೆ ಇವರು ಅನುಷ್ಠಾನ ಕುಳಿತುಕೊಳ್ಳುವರು.

ಸೆ.29 ರಂದು ಸೋಮವಾರ ರಾಣಿ ಸತ್ಯಮೂರ್ತಿ ನೇತೃತ್ವದಲ್ಲಿ ರಾತ್ರಿ 6 ಗಂಟೆಗೆ ಭರತನಾಟ್ಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಕ್ಟೋಬರ್ 2 ರಂದು ಗುರುವಾರ ವಿಜಯದಶಮಿ (ದಸರಾ) ದಿನದಂದು ಶ್ರೀ ಮಾತಾ ಕಾಳಿಕಾದೇವಿ ಪಾಲಕಿ, ಮಧ್ಯಾಹ್ನ 2 ಗಂಟೆಗೆ ಕುಂಬಾರವಾಡಾ ಮಂದಿರದಿಂದ ಪ್ರಾರಂಭವಾಗಿ ಹೂಗೇರಿ ಕ್ಷೇತ್ರ ದಿಂದ ಎಸ್.ಪಿ. ಬಂಗಲಾ, ಹೈದ್ರಾಬಾದ ರೋಡ್, ಶ್ರೀ ಹನುಮಾನ ದೇವಾಲಯ ದರ್ಶನ ಪಡೆದು, ಪುನಃ ಲಾಲವಾಡಿ ಕ್ಷೇತ್ರದಿಂದ ಹಾಯುತ್ತ ರಾತ್ರಿ 10 ಗಂಟೆಗೆ ಕುಂಬಾರವಾಡ ಕ್ಷೇತ್ರಕ್ಕೆ ತಲುಪುತ್ತದೆ. ಈ ಮೆರವಣಿಗೆಯಲ್ಲಿ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿರುತ್ತದೆ.

ಅ. 6 ರಂದು ಸೋಮವಾರ ಕೋಜಗಿರಿ ಪೂರ್ಣಿಮಾ ದಿವಸ ಮುಂಜಾನೆ 5 ಗಂಟೆಯಿಂದ 11 ಗಂಟೆಯವರೆಗೆ ಹಾಲು, ಮೊಸರು, ಸಕ್ಕರೆ, ತುಪ್ಪ ಇವುಗಳಿಂದ ಶ್ರೀ ಮಾತಾ ಅಭಿಷೇಕ ನಡೆಯಲಿದ್ದು ಭಕ್ತಾದಿಗಳೂ ತಮ್ಮ ಅಮೃತ ಹಸ್ತದಿಂದ ಅಭೀಷೇಕ ಮಾಡಲು ಇದು ಒಂದೆ ದಿನ ತಮಗೆ ಗರ್ಭಗುಡಿಯಲ್ಲಿ ಅವಕಾಶ ಇರುತ್ತದೆ. ಸಮಸ್ತ ಸದ್ಭಕ್ತರು ಇದರಲ್ಲಿ ಭಾಗವಹಿಸಿ ಶ್ರೀ ಮಾತಾ ದರ್ಶನ ಪಡೆದು ಪುನಿತರಾಗಿರಿ. ಸಾಯಂಕಾಲ 5 ಗಂಟೆಯಿಂದ ರಾತ್ರಿ 11 ಗಂಟೆಯವರೆಗೆ ಮಹಾಪ್ರಸಾದ ವ್ಯವಸ್ಥೆ ಇರುತ್ತದೆ. ಇಡಿ ರಾತ್ರಿ ಭಜನ, ಸಂಗೀತ ದರ್ಬಾರ ನಡೆಯುತ್ತದೆ. ಸದ್ಭಕ್ತರು ಈ ನವರಾತ್ರಿ ಉತ್ಸವದ ಎಲ್ಲಾ ಕಾರ್ಯಕ್ರಮದಲ್ಲಿ ಭಾಗವಹಿಸಿ

ಮಾತೆಯ ದರ್ಶನ ಪಡೆದು ಪುನೀತರಾಗಬೇಕೆಂದು ಕುಂಬಾರವಾಡಾದ ಶ್ರೀ ಮಾತಾ ಕಾಳಿಕಾದೇವಿ ಸಮಸ್ತ ಮಂಡಳಿ ಅಧ್ಯಕ್ಷ ವಿಜಯಕುಮಾರ ವೀರಶೆಟ್ಟಿ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸನ್ ಪೆಟ್ರೋಲಿಯಂನಲ್ಲಿ ಎಎಚ್‌ಎ ಸಿಎನ್‌ಜಿ ಅಭಿಯಾನಕ್ಕೆ ಚಾಲನೆ



ಬೀದರ, ಸೆ.20 : ಸಂಕುಚಿತ ನೈಸರ್ಗಿಕ ಅನಿಲ (ಸಿಎನ್‌ಜಿ) ಸುರಕ್ಷಿತ, ವಿಶ್ವಾಸಾರ್ಹ ಮತ್ತು ಪರಿಸರ ಸ್ನೇಹಿ ಇಂಧನ ಪರ್ಯಾಯವಾಗಿ ಹೆಚ್ಚಿನ ಅರಿವು ಮತ್ತು ಸ್ವೀಕಾರವನ್ನು ಸೃಷ್ಟಿಸುವ ಉದ್ದೇಶದಿಂದ ಬಿಪಿಸಿಎಲ್ ಔರಾದ್ನ ಮೆ/ಸ್ ಸನ್ ಪೆಟ್ರೋಲಿಯಂನಲ್ಲಿ ಎಎಚ್‌ಎ ಸಿಎನ್‌ಜಿ ಅಭಿಯಾನವನ್ನು ಟಿಎಂ ಮತ್ತು ಬಿಪಿಸಿಎಲ್ ಪ್ರತಿನಿಧಿಗಳು ಸಂಜಿತ್ ಪಾಲ್, ಕೃಷ್ಣದಾಸ್ ವಿ ಅವರುಗಳಿಂದು ಔಪಚಾರಿಕವಾಗಿ ಉದ್ಘಾಟಿಸಿದರು

ನಂತರ ಮಾತಮಾಡಿ ಬೀದರ್ ಜಿಲ್ಲೆಯಲ್ಲಿ, ಬಿಪಿಸಿಎಲ್ ಗ್ಯಾಸ್ ವಿವಿಧ ಸ್ಥಳಗಳಲ್ಲಿ 22 ಸಿಎನ್‌ಜಿ ಕೇಂದ್ರಗಳನ್ನು ಸ್ಥಾಪಿಸಿದ್ದು, ಅವೆಲ್ಲವೂ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳು ಜಿಲ್ಲೆಯಾದ್ಯಂತ ಸಂಪೂರ್ಣ ವ್ಯಾಪ್ತಿಯನ್ನು ಖಚಿತಪಡಿಸುತ್ತವೆ, ತಡೆರಹಿತ ಸಂಪರ್ಕವನ್ನು ಒದಗಿಸುತ್ತವೆ ಮತ್ತು ಗ್ರಾಹಕರಿಗೆ 24/7 ಸಿಎನ್‌ಜಿ ಲಭ್ಯವಾಗುವಂತೆ ಮಾಡುತ್ತವೆಂದರು.

ವಾಹನ ಹೊರಸೂಸುವಿಕೆಯನ್ನು ಕಡಿಮೆ ಮಾಡುವಲ್ಲಿ, ಗಾಳಿಯ ಗುಣಮಟ್ಟವನ್ನು ಸುಧಾರಿಸುವಲ್ಲಿ ಮತ್ತು ಗ್ರಾಹಕರಿಗೆ ಸಾಂಪ್ರದಾಯಿಕ ಇಂಧನಗಳಿಗೆ ವೆಚ್ಚ-ಪರಿಣಾಮಕಾರಿ ಪರ್ಯಾಯವನ್ನು ನೀಡುವಲ್ಲಿ ಸಿಎನ್‌ಜಿ ಯ ಪಾತ್ರವನ್ನು ಈ ಅಭಿಯಾನವು ಒತ್ತಿಹೇಳುತ್ತದೆ. ದೈನಂದಿನ ಬಳಕೆಗಾಗಿ ಅಓಲು ಅನ್ನು ಅಳವಡಿಸಿಕೊಳ್ಳಲು ಗ್ರಾಹಕರನ್ನು ಪ್ರೋತ್ಸಾಹಿಸುವಾಗ ವೆಚ್ಚ ದಕ್ಷತೆ, ಕಡಿಮೆಯಾದ ಹೊರಸೂಸುವಿಕೆ ಮತ್ತು ಪರಿಸರ ಸುಸ್ಥಿರತೆಯಂತಹ ಅಓಲು ಯ ಅನುಕೂಲಗಳನ್ನು ಎತ್ತಿ ತೋರಿಸುವುದರ ಮೇಲೆ ಅಭಿಯಾನವು ಕೇಂದ್ರೀಕರಿಸುತ್ತದೆ ಎಂದು ತಿಳಿಸಿದರು.

ಈ ಅಭಿಯಾನದ ಪ್ರಮುಖ ಅಂಶವೆಂದರೆ ಹೊಸ ಸಿಎನ್‌ಜಿ ವಾಹನಗಳನ್ನು ಖರೀದಿಸುವ ಅಥವಾ ಸಿಎನ್‌ಜಿ ಪರಿವರ್ತನೆಯನ್ನು ಆಯ್ಕೆ ಮಾಡಿಕೊಳ್ಳುವ ಗ್ರಾಹಕರಿಗೆ ರೂ.6,000 ಮೌಲ್ಯದ ವೋಚರ್ ನೀಡುವುದು. ಈ ಸೀಮಿತ ಅವಧಿಯ ಕೊಡುಗೆಯು ಸೀಮಿತ ಸಂಖ್ಯೆಯ ವಾಹನಗಳಿಗೆ ಮೊದಲು ಬಂದವರಿಗೆ ಆದ್ಯತೆಯ ಆಧಾರದ ಮೇಲೆ ಲಭ್ಯವಿರುತ್ತದೆ. "ಮಾಲಿನ್ಯಕಾ ಸೊಲ್ಯೂಷನ್" ಎಂಬ ಟ್ಯಾಗ್ಲೈನ್ನೊಂದಿಗೆ, ಈ ಅಭಿಯಾನವು ಶುದ್ಧ ಶಕ್ತಿಯನ್ನು ಉತ್ತೇಜಿಸುವುದು, ಹೊರಸೂಸುವಿಕೆಯನ್ನು ಕಡಿಮೆ ಮಾಡುವುದು ಮತ್ತು ಹಸಿರು ಮತ್ತು ಹೆಚ್ಚು ಆರ್ಥಿಕ ಇಂಧನ ಆಯ್ಕೆಯನ್ನು ಆಯ್ಕೆ ಮಾಡುವಲ್ಲಿ ಗ್ರಾಹಕರಿಗೆ ಬೆಂಬಲ ನೀಡುವ ಬಿಪಿಸಿಎಲ್ ನ ಬದ್ಧತೆಯನ್ನು ಬಲಪಡಿಸುತ್ತದೆಂದರು. ಇದೇ ಸಂದರ್ಭದಲ್ಲಿ ಪ್ರಮುಖ ಓಇಎಂ ಗಳಾದ ಮಾರುತಿ, ಟಾಟಾ ಮೋಟಾರ್ಸ್, ನೆಕ್ಸಾನ್ ಮತ್ತು ಹುಂಡೈ ಮೋಟಾರ್ಸ್ ಭಾಗವಹಿಸಿ ತಮ್ಮ ಡೆಮೊ ವಾಹನಗಳನ್ನು ನಿಲ್ದಾಣದಲ್ಲಿ ಪ್ರದರ್ಶಿಸಿದವು. ಹೆಚ್ಚುವರಿಯಾಗಿ, ಮೆಸರ್ಸ್ ಸಾಯಿ ಬಾಬಾ ಮೋಟಾರ್ಸ್ (ರೆಟ್ರೋ ಫಿಟ್ಟಿಂಗ್ ಪಾರ್ಟ್ನರ್ಸ್) ಸಹ ಹಾಜರಿದ್ದರು ಮತ್ತು ಆಯಾ ಸ್ಥಳದಲ್ಲಿ ತಮ್ಮ ಡೆಮೊ ವಾಹನಗಳನ್ನು ಪ್ರದರ್ಶಿಸಿದರು.

ಈ ಸಂದರ್ಭದಲ್ಲಿ ಔಟ್ಲೆಟ್ನ ಡೀಲರ್ ಶಿವಕುಮಾರ್ ವೈಜಿನಾಥ್ ಬಿರಾದಾರ್ ಮತ್ತು ಅನುಪ್ ಕುಮಾರ್ ಸೋ/ಓ ಶಿವಕುಮಾರ್ ಬಿರಾದಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ವಿಭಾಗ ಮಟ್ಟಕ್ಕೆ ಆಯ್ಕೆಯಾದ ಗುರುಕುಲ ವಿದ್ಯಾರ್ಥಿ ಕೃಷ್ಣಾ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಸೆ.20:ತಾಲ್ಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ವಸತಿ ಪ್ರೌಢ ಶಾಲೆಯ 10ನೇ ವರ್ಗದ ವಿದ್ಯಾರ್ಥಿ ಕೃಷ್ಣಾ ಜ್ಞಾನೇಶ್ವರ ಜಿಲ್ಲಾ ಮಟ್ಟದ ವಿಜ್ಞಾನ ವಿಚಾರ ಗೋಷ್ಠಿಯಲ್ಲಿ ಪ್ರಥಮ ಸ್ಥಾನ ಪಡೆದು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ. ನೌಬಾದ್ ನ ಡಯಟ್ ಕಾಲೇಜಿನಲ್ಲಿ ಶನಿವಾರ ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಇಲಾಖೆ ಬೀದರ್, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಸಹಯೋಗದಲ್ಲಿ ಜಿಲ್ಲಾ ಮಟ್ಟದ ವಿಜ್ಞಾನ ವಿಚಾರ ಗೋಷ್ಠಿ ಹಮ್ಮಿಕೊಳ್ಳಲಾಗಿತ್ತು.

ವಿಜೇತ ವಿದ್ಯಾರ್ಥಿಗೆ ಏಳು ಸಾವಿರ ರೂಪಾಯಿ ಮತ್ತು ಪ್ರಮಾಣ ಪತ್ರ ವಿತರಿಸಲಾಯಿತು. ಡಯಟ್ ನೋಡಲ್ ಅಧಿಕಾರಿ ರಾಮಕೃಷ್ಣ, ಎಂ.ಡಿ.ತಾಜೋದ್ದಿನ್, ಮೋಹನ ಇದ್ದರು.

ವಿದ್ಯಾರ್ಥಿಯ ಸಾಧನೆಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು, ಹಿರೇಮಠದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಕಾರ್ಯದರ್ಶಿ ಮಹಾಲಿಂಗ ಸ್ವಾಮೀಜಿ, ಆಡಳಿತಾಧಿಕಾರಿ ಮೋಹನರೆಡ್ಡಿ, ಪ್ರಾಚಾರ್ಯ ಬಸವರಾಜ ಮೊಳಕೀರೆ, ಮುಖ್ಯಶಿಕ್ಷಕ ಮಹೇಶ ಮಹಾರಾಜ್, ಎಸ್ ಎಸ್ ಎಲ್ ಸಿ ಸಂಯೋಜಕ ಪ್ರವೀಣಕುಮಾರ ಖಂಡಾಳೆ ಹರ್ಷ ವ್ಯಕ್ತಪಡಿಸಿದ್ದಾರೆ.

# ರಾಣಾಕುಶನುರ: ಮಾದಕ ಮುಕ್ತ ಕರ್ನಾಟಕ ಅಭಿಯಾನ




ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಸೆ.20: ತಾಲೂಕಿನ ಠಾಣಾ ಕುಶನುರ ಗ್ರಾಮದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆಯಡಿ ಪರಿವರ್ತನೆ ಮಾದಕ ಮುಕ್ತ ಕರ್ನಾಟಕ ಅಭಿಯಾನ ಜಾಗೃತಿ ಕಾರ್ಯಕ್ರಮ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕಾರ್ಯಕ್ರಮ ಜರುಗಿತು.

ತಾಲೂಕಾ ಕಾರ್ಯಕ್ರಮ ವ್ಯವಸ್ಥಾಪಕರು ಕು ಕವಿತಾ ಬಿರಾದಾರ ರವರು ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಸೇವನೆಯಿಂದ ಆರೋಗ್ಯ ಕೆಟ್ಟ ಹೊಗುವುದರ ಜೋತೆಗೆ ಹಣ ಆಸ್ಪತ್ರೆಗೆ ಸುರಿಯಬೇಕಾಗುತ್ತದೆ ಎಷ್ಟು ಜನರು ಮಾದಕ ವಸ್ತುಗಳ ಸೇವನೆಯಿಂದ ಆಸ್ತಿ ಅಂತಸ್ತು ಕಳೆದು ಕೊಂಡು ಎಷ್ಟು ಕುಟುಂಬಗಳು ಹಾಳಾಗಿ ಹೊಗಿವೆ ಎಂದು ತಿಳಿಸಿದರು ನಿಮ್ಮ ಭವಿಷ್ಯ ಉಜ್ವಲವಾಗಬೇಕು ದೊಡ್ಡವರಾದ ಮೇಲೆ ಮಾದಕ ವಸ್ತುಗಳದಿಂದ ದುರವಿರುತ್ತೆವೆ ಎಂದು ವಿದ್ಯಾರ್ಥಿಗಳು ಪ್ರತಿಜ್ಞೆ ಮಾಡಿದರು.

ನಂತರ ಸ್ವ ಸಹಾಯ ಸಂಘದ ಮಹಿಳೆಯರು ಆಶಾ ಕಾರ್ಯಕತೆ-ರ್ಯಯರ ಅಂಗನವಾಡಿ

ಕಾರ್ಯಕರ್ತೆಯರು ಮತ್ತು ಕಾಲೆಜಿನ ಪ್ರಾಂಶುಪಾಲರಾದ ಶ್ರೀ ವಿಜಯಕುಮಾರ ಕಾರ್ಯಕ್ರಮನುದ್ದೆಶಿಸಿ ಮಾಹಿತಿ ನೀಡಿದರು ಎಮ್. ಬಿ. ಕೆ. ಲಲಿತಾ, ಆಶ್ವನಿ ಅಸ್ಮಿತಾ, ಪಾರ್ವತಿ ಭಾಗವಹಿಸಿದರು ಪೋಲಿಸ ಇಲಾಖೆಯ ಸಂಜಯ ಸ್ವಾಮಿ ಭಾಗವಹಿಸಿದರು

# ಧರ್ಮದಲ್ಲಿ ಹಿಂದು : ಜಾತಿಯಲ್ಲಿ ಗೊಂಡ ಎಂದು ನಮೂದಿಸಿ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಸೆ.20: ಸೆಪ್ಟೆಂಬರ್ 22 ರಿಂದ ಪ್ರಾರಂಭ ವಾಗುತ್ತಿರುವ ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕುರಿತು ಭಾಲ್ಕಿ ನಗರದ ಕನಕ ಭವನದಲ್ಲಿ ಗೊಂಡ ನೌಕರರ ಸಂಘದ ವತಿಯಿಂದ ಹಾಗೂ ಸಮಾಜದ ಮುಖಂಡರ ನೇತೃತ್ವದಲ್ಲಿ ಮಹತ್ವದ ಸಭೆ ಜರುಗಿತು.

ಸಭೆಯಲ್ಲಿ ಮಾಜಿ ಸಭಾಪತಿ ರಘುನಾಥರಾವ ಮಲಕಾಪುರೆ ಅವರು ಮಾತನಾಡಿ ಸಮಾಜದ ಏಕತೆ ಮತ್ತು ಹಕ್ಕುಗಳ ಭದ್ರತೆಗೆ ಮಹತ್ವದ ಹೆಜ್ಜೆಯಾಗಿದೆ. ಮುಂಬರುವ ಸಮೀಕ್ಷೆಯಲ್ಲಿ ಎಲ್ಲರೂ ಒಂದೇ ರೀತಿಯ ವಿವರ ನೀಡುವುದರ ಮೂಲಕ ಸಮಾಜದ ಹಕ್ಕು-ಅವಕಾಶಗಳನ್ನು ಬಲಪಡಿಸಲು ಒಗ್ಗಟ್ಟಿನಿಂದ ಬೀದರ್ ಜಿಲ್ಲೆಯ ಗೊಂಡ ಸಮಾಜದ ಪ್ರತಿಯೊಬ್ಬರೂ ಸಮೀಕ್ಷೆಯಲ್ಲಿ ಒಂದೇ ರೀತಿಯ ವಿವರ ನಮೂದಿಸಿ, ನಮ್ಮ ಹಕ್ಕು-ಅವಕಾಶಗಳನ್ನು ಬಲಪಡಿಸಲು ಸಹಕರಿಸಬೇಕು" ಎಂದರು.

ಹಿರಿಯ ಮುಖಂಡ ಅಮೃತರಾವ ಚಿಮಕೊಡೆ ಮಾತನಾಡಿ ನಾವೆಲ್ಲರೂ ಗೊಂಡ ಜಾತಿಯವರೇ ಆಗಿದ್ದೇವೆ. ಆದ್ದರಿಂದ ಯಾವುದೇ ಗೊಂದಲವಿಲ್ಲದೆ ಸಮಾಜದ ಪ್ರತಿಯೊಬ್ಬರೂ ಸಮೀಕ್ಷೆಯಲ್ಲಿ ಧರ್ಮದ ಕಾಲಂನಲ್ಲಿ ಹಿಂದೂ, ಜಾತಿಯ ಕಾಲಂನಲ್ಲಿ ಗೊಂಡ ಎಂದು ಸ್ಪಷ್ಟವಾಗಿ ನಮೂದಿಸಬೇಕು. ಆದ್ದರಿಂದ ಎಲ್ಲರೂ ಒಂದೇ ರೀತಿಯಲ್ಲಿ ಗೊಂಡ ಎಂದೇ ನಮೂದಿಸುವುದು ಅತ್ಯಂತ ಅಗತ್ಯ, ಎಂದು ಸಮಾಜಕ್ಕೆ ಸ್ಪಷ್ಟ ಸಂದೇಶ ನೀಡಿದರು.

ಪೂಜ್ಯ ಮಾಳಪ್ಪ ಮುತ್ಯಾ ಉಚ್ಚಾ, ಎಂ.ಎಸ್. ಕಟಗಿ, ನಿರಂಜಪ್ಪಾ ಪಾತ್ರೆ, ಕೆ. ಡಿ ಕಣೇಶ್, ಶಿವಾಜಿ ತೋರಣೆ, ಮಾಳಪ್ಪ ಅಡಸಾರೆ, ಬಾಲಾಜಿ ಖೇಡಕರ್, ಸೇರಿದಂತೆ ಇನಿತರರು ಮುಖಂಡರು ಮಾತನಾಡಿದರು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ವೆಂಕಟರಾವ ಬಿರಾದರ, ಭಾಲ್ಕೇಶ್ವರ ಹುಡುಗೆ, ಶಿವರಾಜ ಮಲ್ಲೇಶಿ, ಶಿವಶರಣಪ್ಪ ಛತ್ರೆ ತುಕಾರಾಮ ಕರಾಟೆ, ಅಶೋಕ ಬರ್ಮಾ, ರವೀಂದ್ರ ಕಣಜೆ, ತುಳಸಿರಾಮ ಉಚ್ಚಾ, ಶಿವಾಜಿ ಮೆತ್ರೆ, ಪದ್ಮಕರ ಮಲ್ಲೇಶಿ, ಶಿವರಾಜ ಬಿರಾದರ, ವೆಂಕಟರಾವ ಬಿರಾದರ,

ಶಿವಾಜಿ ತೋರಣೆ ಹಾಗೂ ಅನೇಕ ಹಿರಿಯ ಮುಖಂಡರು, ಯುವಕರು ಮತ್ತು ನೌಕರರು ಉಪಸ್ಥಿತರಿದ್ದರು. ವೆಂಕಟರಾವ ಮಲಗೊಂಡಾ ಸ್ವಾಗತಿಸಿದರು. ಹಣಮಶೆಟ್ಟಿ ಸಿದ್ದೇಶ್ವರೆ ವಂದಿಸಿದರು. ಚಂದ್ರಕಾಂತ ತಳವಾಡೆ ನಿರೂಪಿಸಿದರು.

# ಇರಕಲ್ಲಗಡದ ಈಶ್ವರ ಆಂಗ್ಲ ಮಾಧ್ಯಮ ಶಾಲೆಗೆ ಉತ್ತಮ ಶಾಲೆ ಪ್ರಶಸ್ತಿ ಪ್ರದಾನ

ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ :ಸೆ.20: ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಇರಕಲ್ಲಗಡ ಯಲಮಗೇರಿ ಗ್ರಾಮದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಈಶ್ವರ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಮತ್ತ ಪ್ರೌಢ ಶಾಲೆಯು 2025 ನೇ ಸಾಲಿನ ಉತ್ತಮ ಶಾಲೆ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ.

ಶ್ರೀ ಈಶ್ವರ ಆಂಗ್ಲ ಮಾಧ್ಯಮ ವಿದ್ಯಾ ಸಂಸ್ಥೆಯು ಗ್ರಾಮೀಣ ಮಕ್ಕಳಿಗೆ ಮೌಲ್ಯ ಶಿಕ್ಷಣ ನೀಡುತ್ತಾ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದೆ. ಶಾಲೆಯು ಸುಸಜ್ಜಿತ ಕಟ್ಟಡ,ವಿಶಾಲವಾದ ಆಟದ ಮೈದಾನದೊಂದಿಗೆ ಪರಿಸರ ಶಾಲೆ ಎಂದು ಖ್ಯಾತಿ ಪಡೆದು ಉತ್ತಮ ಫಲಿತಾಂಶ ನೀಡುವಲ್ಲಿ ಸಂಸ್ಥಾಪಕರಾದ ನಾಗರಾಜ ಗುಡಿ ಮತ್ತು ಶಿಕ್ಷಕರ ಬಳಗ ಶ್ರಮಿಸುತ್ತಿದೆ. 1ರಿಂದ 10 ನೇ ತರಗತಿಯವರೆಗೆ ಶಿಕ್ಷಣ ನೀಡುತ್ತಿದ್ದು ಜಿಲ್ಲೆಯ ಮಾದರಿ ಶಾಲೆಯಾಗಿ ಗುರುತಿಸಿಕೊಂಡಿದೆ.ಸುಮಾರು 15 ವರ್ಷಗಳಿಂದ ಸಾವಿರಾರು ವಿದ್ಯಾರ್ಥಿಗಳ ಬದುಕು ರೂಪಿಸಿದ್ದು ಮೊದಲು ಈ ಶಾಲೆಯು ತಟ್ಟಿ ಶಾಲೆ ಎಂದು ಪ್ರಸಿದ್ಧಿಯಾಗಿತ್ತು.ಈ ವಿದ್ಯಾ ಸಂಸ್ಥೆಯ ಅಂಗಳದಲ್ಲಿ ನವೋದಯ ಮತ್ತು ಮೊರಾರ್ಜಿಗಳಂತಹ ಪರೀಕ್ಷೆಗಳಿಗೂ ತರಬೇತಿ ನೀಡಲಾಗುತ್ತದೆ.ಗ್ರಾಮೀಣ ಮಕ್ಕಳಿಗೆ ಬಸ್ಸ ಸಂಚಾರ ವ್ಯವಸ್ಥೆ ಕಲ್ಪಿಸಲಾಗಿದ್ದು,ಮಕ್ಕಳ ವೈಯಕ್ತಿಕ ಕಾಳಜಿ, ಕ್ರೀಡೆ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಹೆಚ್ಚು ಒತ್ತು ನೀಡಿ ಮಕ್ಕಳಿಗೆ ಮೌಲ್ಯ ಶಿಕ್ಷಣ ನೀಡುವಲ್ಲಿ ಈ ಸಂಸ್ಥೆಯು




ಶ್ರಮಿಸುತ್ತಿದೆ.ಈಶ್ವರ ಆಂಗ್ಲ ಮಾಧ್ಯಮ ವಿದ್ಯಾ ಸಂಸ್ಥೆಯ ಶೈಕ್ಷಣಿಕ ಸೇವೆ ಹಾಗೂ ಕಾರ್ಯ ವೈಖರಿಯನ್ನು ಗುರುತಿಸಿ ರಾಯಚೂರಿನ ಕಲಾ ಸಂಕುಲ ಸಂಸ್ಥೆಯು 2025 ನೇ ಸಾಲಿನ ಉತ್ತಮ ಶಾಲೆ ಪ್ರಶಸ್ತಿಯನ್ನು ಪಂಡಿತ ಸಿದ್ದರಾಮ ಜಂಬಲದಿನ್ನಿ ಕಲಾ ಭವನದಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.ಪ್ರಶಸ್ತಿಯನ್ನು ಸಂಸ್ಥೆಯ ಸಂಸ್ಥಾಪಕರಾದ ನಾಗರಾಜ ಗುಡಿಯವರು ಗಣ್ಯರೊಂದಿಗೆ ಸ್ವೀಕರಿಸಿದ್ದಾರೆ.ಕಾರ್ಯಕ್ರಮದಲ್ಲಿ ಖ್ಯಾತ ಬರಹಗಾರರಾದ ನಾಡೋಜ ಕುಂ.ವಿರಭದ್ರಪ್ಪನವರು, ನಟಿ ಮತ್ತು ಸಾಹಿತಿ ರಂಜಿನಿ ರಘುವನ್, ವಿಧಾನ ಸಭಾ ಪರಿಷತ್ತು ಸದಸ್ಯರು ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಎ.ವಸಂತ ಕುಮಾರ, ಕಲಾ ಸಂಕುಲ ಸಂಸ್ಥೆಯ ಅಧ್ಯಕ್ಷ ರೇಖಾ ಬಡಿಗೇರ್, ಕೆಪಿಸಿಸಿ ಕಾರ್ಯದರ್ಶಿ ಅಸ್ಲಂ ಪಾಷಾ, ಕೆಪಿಸಿಸಿ ಮಹಿಳಾ ಉಪಾಧ್ಯಕ್ಷ ಶ್ರೀದೇವಿ ಆರ್.ಎ ನಾಯಕ, ಜೆಡಿಎಸ್ ಕಾರ್ಯಧ್ಯಕ್ಷ ಶಿವ ಶಂಕರ ವಕೀಲ, ಒಪೆಕ್ ಆಸ್ಪತ್ರೆ ಡೀನ್ ಡಾ. ರಮೇಶ್ ಸಾಗರ, ಸಿದ್ದಗ0ಗಾ ಕಾಲೇಜಿನ ನಿರ್ದೇಶಕ ಡಾ.ಜಯಂತ ಡಿ.ಎಸ್, ಅಯ್ಯಣ್ಣ ಎಡವಟ್ಟಿ, ಶಿವಾನಂದ ದಳವಾಯಿ, ಮಂಜುನಾಥ, ಭೀಮಣ್ಣ ಮೂಲಿ, ಶರಣಬಸಪ್ಪ ಹಾಗೂ ಅನೇಕ ಗಣ್ಯರು ಉಪಸ್ಥಿತರಿದ್ದರು.

ಉತ್ತಮ ಶಾಲೆ ಪ್ರಶಸ್ತಿಗೆ ಆಯ್ಕೆಯಾದ ಹಿನ್ನಲೆಯಲ್ಲಿ ಶಾಲಾ ಆಡಳಿತ ಮಂಡಳಿ,ಶಿಕ್ಷಕರ ಬಳಗ ಹಾಗೂ ಗ್ರಾಮಸ್ಥರು, ಪಾಲಕರು ಮತ್ತು ಮುದ್ದು ಮಕ್ಕಳು ಸಿಹಿ ಹಂಚಿ ಸಂಭ್ರಮಿಸಿದ್ದಾರೆ.

# ಕೂಲಿಕಾರರಿಗೆ ಇ-ಕೆವೈಸಿ ಮಾಡಿಸಲು ಚೆನ್ನದಾಸರ ಕರೆ




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:ಸೆ.20: ಮಹಾತ್ಮಗಾಂಧಿ ನರೇಗಾ ಯೋಜನೆ ಗ್ರಾಮೀಣ ಪ್ರದೇಶದ ಕೂಲಿಕಾರರಿಗೆ ಒಂದು ವರದಾನ, ಯಾರ ಹಂಗು ಇಲ್ಲದೆ ತಮ್ಮ ಸ್ವಂತ ಗ್ರಾಮದಲ್ಲಿ ಇದ್ದು, ವರ್ಷದಲ್ಲಿ 100 ದಿನಗಳ ಕೂಲಿ ಕೆಲಸ ವನ್ನು ಪಡೆಯಬಹುದು. ಈ ಯೋಜನೆಯಲ್ಲಿ ಕೂಲಿಕಾರರಿಗೆ ಅನೂಲವಾಗು ಬದಲಾದ ತಂತ್ರಿಕತೆಯಲ್ಲಿ ಪ್ರತೀಯೊಬ್ಬ ಕೂಲಿಕಾರರು ಕಡ್ಡಾಯವಾಗಿ ಇ-ಕೆವೈಸಿ ಮಾಡಿಸುವುದು ಅವಶ್ಯಕವಾಗಿದೆ ಅದಕ್ಕಾಗಿ ನೆಲಜೇರಿ ಮತ್ತು ವಟಪರ್ವಿ ಗ್ರಾಮದ ಕೂಲಿಕಾರರು , ಮೇಟ್ ಗಳು ಗ್ರಾಮ ಪಂಚಾಯತಿಗೆ ಬಂದು ಇ-ಕೆವೈಸಿ ಮಾಡಿಸಲು ಮನವಿ ಮಾಡಿದರು.

ಸ್ಥಳದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಪರಶುರಾಮ್ ನಾಯಕ್, ಸದಸ್ಯರಾದ ರಾಜಪ್ಪ ಈರಪ್ಪ ಹರಿಜನ್, ತಾಲೂಕ

ಐ.ಇ.ಸಿ ಸಂಯೋಜಕ ಲಕ್ಷ್ಮಣ ಕೆರಳ್ಳಿ, ಕಾರ್ಯದರ್ಶಿ ಗಳಾದ ಫಕೀರಪ್ಪ ಮೂಲಿಮನಿ, ಬಿಲ್ ಕಲೆಕ್ಟರ್ ಯಮನೂರಪ್ಪ ವಾಲ್ಮಿಕಿ, ಗ್ರಾಮ ಕಾಯಕ ಮಿತ್ರರಾದ ಲಲಿತಾ ಹೋಸೂರ, ಕಂಪ್ಯೂಟರ್ ಅಪರೇಟರ್ ಮಂಜುಳಾ ಉಸಗಲಿ, ಕೂಲಿಕಾರರು ಗ್ರಾಮಸ್ಥರು ಹಾಜರಿದ್ದರು.

# ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸಿ: ಶಾಸಕ ಪ್ರಭು ಚವ್ಹಾಣ

ಔರಾದ(ಬಿ):ಸೆ.20:ಔರಾದ(ಬಿ)ನಲ್ಲಿ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ನಿರಂತರ ಶ್ರಮಿಸುತ್ತಿದ್ದು, ಇದಕ್ಕೆ ಅನುದಾನ ರಹಿತ ಖಾಸಗಿ ಶಾಲೆಗಳು ಸೇರಿದಂತೆ ಎಲ್ಲರ ಸಹಕಾರದ ಅವಶ್ಯಕತೆಯಿದೆ ಎಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ತಿಳಿಸಿದರು.

ಕಲ್ಯಾಣ ಕರ್ನಾಟಕ ಅನುದಾನ ರಹಿತ ಖಾಸಗಿ ಆಡಳಿತ ಮಂಡಳಿ ಸಂಘ ಔರಾದ(ಬಿ) ಮತ್ತು ಕಮಲನಗರ ವತಿಯಿಂದ ಸೆ.20ರಂದು ಪಟ್ಟಣದ ಡಾ.ಗುರುಪಾದಪ್ಪ ನಾಗಮಾರಪಳ್ಳಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ 2025-26ನೇ ಸಾಲಿನ ಒಂದು ದಿನದ ಶಿಕ್ಷಕರ ಕಾರ್ಯಾಗಾರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸಮಾಜದಲ್ಲಿ ಶಿಕ್ಷಕರಿಗೆ ಅತ್ಯಂತ ಹೆಚ್ಚಿನ ಗೌರವವಿದೆ. ಅದಕ್ಕೆಂದೇ ಗುರುವನ್ನು ಬ್ರಹ್ಮ, ವಿಷ್ಣು, ಮಹೇಶ್ವರರ ಜೊತೆಗೆ ಹೋಲಿಕೆ ಮಾಡಲಾಗಿದೆ. ಶಿಕ್ಷಕರು ಅದಕ್ಕೆ ತಕ್ಕಂತೆ ತಮ್ಮ ಜವಾಬ್ದಾರಿಗಳನ್ನು ಅರಿತು ಕೆಲಸ ಮಾಡಬೇಕು. ಕುಂಬಾರ ಮಣ್ಣಿಗೆ ಮಡಿಕೆ, ಕುಡಿಗಳ ಆಕಾರ ನೀಡುವ ರೀತಿಯಲ್ಲಿ ಮಕ್ಕಳ ಭವಿಷ್ಯಕ್ಕೆ ಒಳ್ಳೆಯ ಆಕಾರ ನೀಡಬೇಕು ಎಂದರು.

ಮಹಾಜನತೆಯ ಆಶೀರ್ವಾದದಿಂದ ಜನಸೇವೆ ಮಾಡುವ ಅವಕಾಶ ದೊರೆತಿದ್ದು, ಅವರ ನಿರೀಕ್ಷೆಗೆ



ತಕ್ಕಂತೆ ಕೆಲಸ ಮಾಡುತ್ತಿದ್ದೇನೆ. ಸರ್ಕಾರದ ಯೋಜನೆಗಳನ್ನು ಜನತೆಯ ಬಳಿಗೆ ಕೊಂಡೊಯ್ಯಲು ಪ್ರಮಾಣಿಕವಾಗಿ ಪ್ರಯತ್ನಿಸುತ್ತಿದ್ದೇನೆ. ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಒತ್ತು ಕೊಟ್ಟಿದ್ದು, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಮನೋಬಲ ವೃದ್ಧಿಸಿ ಫಲಿತಾಂಶ ಸುಧಾರಿಸಲು ಪ್ರತಿ ವರ್ಷ ಸನ್ಮಾನಿಸುತ್ತಾ ಬಂದಿದ್ದೇನೆ. ಶಿಕ್ಷಣದ ಅಭಿವೃದ್ಧಿಗೆ ಎಲ್ಲರ ಸಹಕಾರದ ಅವಶ್ಯಕತೆಯಿದೆ ಎಂದು ಹೇಳಿದರು.

ಖಾಸಗಿ ಶಾಲೆಗಳಲ್ಲಿಯೂ ಸಾಕಷ್ಟು ಸಮಸ್ಯೆಗಳಿವೆ. ಅವುಗಳ ಬಗ್ಗೆ ನನ್ನ ಗಮನಕ್ಕಿದೆ. ಸರಿಪಡಿಸಲು ಪ್ರಯತ್ನಿಸುತ್ತಿದ್ದೇನೆ. ಕಾನೂನು ಚೌಕಟ್ಟಿನಲ್ಲಿ ಅಗತ್ಯ ಸಹಕಾರ ನೀಡುತ್ತೇನೆ. ಶಿಕ್ಷಕರಿಗೆ ಯಾವುದೇ ಸಮಸ್ಯೆ ಎದುರಾಗಲಿ. ನೇರವಾಗಿ ಬಂದು ತಿಳಿಸಿ ನಾನು ನಿಮ್ಮ ಜೊತೆಗಿದ್ದೇನೆ. ನಿರಾತಂಕವಾಗಿ ಕೆಲಸ ಮಾಡಿ ಎಂದು ಹೇಳಿದರು. ಬಸವರಾಜ ಸೇಡಂ ಅವರು ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಣದ ಅಭಿವೃದ್ಧಿಗೆ ನಿರಂತರ ಶ್ರಮಿಸುತ್ತಿದ್ದಾರೆ. ಬಸವಕಲ್ಯಾಣದಲ್ಲಿ ನೂತನ ಅನುಭವ ಮಂಟಪ ನಿರ್ಮಾಣಕ್ಕೆ ಅವರ ಪಾತ್ರವೂ ಬಹಳಷ್ಟಿದೆ. ಅವರ ಸಹಕಾರ-ಮಾರ್ಗದರ್ಶನದಂತೆ ಹಿಂದಿನ ಮುಖ್ಯಮಂತ್ರಿಗಳಾದ ಬಿ.ಎಸ್ ಯಡಿಯೂರಪ್ಪ ಅವರು ಅನುದಾನ ಘೋಷಣೆ ಮಾಡಿದ್ದರು. ಅವರನ್ನು ಮಾದರಿಯಾಗಿಟ್ಟುಕೊಂಡು ಕೆಲಸ ಮಾಡಬೇಕು ಎಂದು ಹೇಳಿದರು.

ಮಾಜಿ ಸಂಸದರಾದ ಬಸವರಾಜ ಪಾಟೀಲ ಸೇಡಂ ಮಾತನಾಡಿ, ಸಮಾಜದಲ್ಲಿ ಶಿಕ್ಷಕರ ಪಾತ್ರ ಬಹುಮುಖ್ಯವಾಗಿದ್ದು, ಮಕ್ಕಳನ್ನು ತಿದ್ದಿ-ತೀಡಿ ಉತ್ತಮ ನಾಗರಿಕರನ್ನಾಗಿಸುವ ಜವಾಬ್ದಾರಿ ತಮ್ಮ ಮೇಲಿದೆ. ಸಂದರ್ಭಕ್ಕೆ ತಕ್ಕಂತೆ ಕಾರ್ಯಕೌಶಲ್ಯಗಳನ್ನು ವೃದ್ಧಿಸಿಕೊಂಡು ಮಕ್ಕಳಿಗೆ ಪಾಠ ಮಾಡಬೇಕು ಎಂದು ಹೇಳಿದರು.

ಭಾರತದಲ್ಲಿ ಶಿಕ್ಷಣ ಕ್ಷೇತ್ರದ ಬೆಳವಣಿಗೆಗೆ ಡಾ.ಸರ್ವೇಪಲ್ಲಿ ರಾಧಾಕೃಷ್ಣನ್ ಹಾಗೂ ಸಾವಿತ್ರಿಬಾಯಿ ಫುಲೆ ಅವರ ಕೊಡುಗೆ ಅನನ್ಯ. ಎಲ್ಲ ಶಿಕ್ಷಕರು ಅವರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯಬೇಕು. ಅವರನ್ನು ಮಾದರಿಯಾಗಿಟ್ಟುಕೊಂಡು ತಮ್ಮ ಸೇವೆ ಮುಂದುವರೆಸಬೇಕು ಎಂದು ತಿಳಿಸಿದರು.

ಮೈಸೂರು ಮೂಲದ ಸಂಪನ್ಮೂಲ ವ್ಯಕ್ತಿ ಚೇತನರಾಮ್ ಅವರು ವಿಶೇಷ ಉಪನ್ಯಾಸ ನೀಡಿದರು. ಮಾಜಿ ಶಾಸಕರಾದ ಗುಂಡಪ್ಪ ಬಿರಾದಾರ, ಕೆಎಎಸ್ ಅಧಿಕಾರಿ ಖಾಜಾ ಖಲೀಲುಲ್ಲಾ, ಆರಕ್ಷಕ ವೃತ್ತ ನಿರೀಕ್ಷಕ ರಘುವೀರಸಿಂಗ್ ಠಾಕೂರ್, ಅನುದಾನ ರಹಿತ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ರೇವಣಸಿದ್ದಪ್ಪ ಜಲಾದೆ, ಕಾರ್ಯದರ್ಶಿ ಗುರುನಾಥ ರೆಡ್ಡಿ, ಜಿಲ್ಲಾಧ್ಯಕ್ಷ ರಾಜಶೇಖರ ಮಣಿಗೇರೆ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಪಂಢರಿ ಆಡೆ, ಕಸಾಪ ಅಧ್ಯಕ್ಷ ಬಾಲಾಜಿ ಅಮರವಾಡಿ, ತಾಲ್ಲೂಕು ಅಧ್ಯಕ್ಷ ಸಂಜು ಶೆಟಕಾರ, ಮುಖಂಡ ಸಚಿನ ರಾಠೋಡ, ರಾಜಕುಮಾರ ಹಮೀಲಪೂರೆ, ಸಂಜುಕುಮಾರ ಮುಧೋಳ, ಸೂರ್ಯಕಾಂತ ಬಿರಾದಾರ, ಅನೀಲ ದೇಶಮುಖ, ರತಿಕಾಂತ ಅತಿವಾಳೆ, ಗುರುನಾಥ ದೇಶಮುಖ, ಕೃಷ್ಣಾ ಪಾಟೀಲ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕಟ್ಟಡದ ಗುಣಮಟ್ಟಕ್ಕೆ ಮೊದಲ ಆಯ್ಕೆ ಅಲ್ಟ್ರಾಟೆಕ್: ಮಹೇಶರೆಡ್ಡಿ ಮುದ್ನಾಳ



ಯಾದಗಿರಿ:ಸೆ.20: ಗುಣಮಟ್ಟಕ್ಕೆ ಬೆಲೆ ಕೊಡುವ ಇಂಜಿನಿಯರ್‌ಗಳು ಮತ್ತು ಪ್ರೊಫೆಸನಲ್‌ಗಳ ಮೊತ್ತ ಮೊದಲ ಆಯ್ಕೆ ಅಲ್ಟ್ರಾಟೆಕ್ ಆಗಿದೆ. ಭಾರತದಾದ್ಯಂತ ಎಲ್ಲೆಡೆಯೂ ಬಳಕೆಯಾಗುತ್ತಿರುವ ಜೊತೆ-ಗೆ, ಅಲ್ಟ್ರಾಟೆಕ್ ದೇಶದ ಕೆಲವು ಪ್ರಮುಖ ಹೆಸರಾಂತ ಮತ್ತು ಹೆಮ್ಮೆಯ ಪ್ರಾಜೆಕ್ಟ್‌ಗಳ ಒಂದು ಭಾಗವಾಗಿದೆ ಎಂದು ಬಿಜೆಪಿ ಯುವ ನಾಯಕ ಮಹೇಶರಡ್ಡಿ ಮುದ್ನಾಳ ತಿಳಿಸಿದರು.ನಗರದ ಬಾಲಾಜಿ ಕಲ್ಯಾಣ ಮಂಟಪದಲ್ಲಿ ಶನಿವಾರ ಆಯೋಜಿಸಿದ್ದ ಅಲ್ಟ್ರಾಟೆಕ್ ಶುಭಾರಂಭ ಮೇಳ ಉದ್ಘಾಟಿಸಿ ಮಾತನಾಡಿ, ಅಲ್ಟ್ರಾಟೆಕ್ ಸಿಮೆಂಟ್ ಎಲ್ಲಾ ಬಗೆ-ಯ ನಿರ್ಮಾಣ ಉತ್ಪನ್ನಗಳಿಗಾಗಿ ಅತ್ಯುತ್ತಮ ಆಯ್ಕೆಯಾಗಿದೆ - ಗ್ರೇ ಸಿಮೆಂಟ್‌ನಿಂದ ಹಿಡಿದು ವೈಟ್ ಸಿಮೆಂಟ್, ನಿರ್ಮಾಣ ಪರಿಹಾರಗಳು, ಮತ್ತು ವಿವಿಧ ಬಗೆಯ ರೆಡಿ-ಮಿಕ್ಸ್ ಕಾಂಕ್ರೀಟ್‌ವರೆಗೆ ವಿವಿಧ ಬಗೆಯ ಅಗತ್ಯತೆಗಳಲ್ಲಿ ಬಳಸಲಾಗುತ್ತದೆ ಎಂದು ತಮ್ಮ ಅನುಭವದ ನುಡಿಗಳಾಡಿದರು.

ಈ ವೇಳೆ ಹಬ್ಬದ ವಾತಾವರಣವನ್ನು ಹೆಚ್ಚಿಸಲು ಮಕ್ಕಳ ಆಟಗಳು, ರಂಗೋಲಿ ಸ್ಪರ್ಧೆಗಳು, ಮೆಹಂದಿ ಕಾರ್ಯಕ್ರಮಗಳು ನಡೆದವು. ವಿಜೇತರಿಗೆ ಆಕರ್ಷಕ ಬಹುಮಾನಗಳನ್ನು ನೀಡಲಾಯಿತು. ಲಕ್ಕಿ ಡ್ರಾ ಕೂಡ ಅನೇಕ ಮಂದಿಗೆ ಹರ್ಷವನ್ನು ನೀಡಿತು.

ಪ್ರಮುಖರಾದ ಅಶೋಕರೆಡ್ಡಿ, ಬಸ್ಸುಗೌಡ ನಾಯ್ಕಲ್, ಯುವರಾಜ್ ಕೋಟೆ, ರಾಂಶೆಟ್ಟಿ ಖನಾಪುರ ಹಾಗೂ ಯಾದಗಿರಿ ಜಿಲ್ಲೆಯ ಎಲ್ಲಾ ಡೀಲರ್‌ಗಳು ಉಪಸ್ಥಿತರಿದ್ದರು.

# ಕ್ರೀಡೆಯಿಂದ ದೈಹಿಕ, ಮಾನಸಿಕ ಬೆಳವಣಿಗೆ: ಶಾಸಕ ಪ್ರಭು ಚವ್ಹಾಣ

ಔರಾಧ:ಸೆ.20:ಕ್ರೀಡೆಯಿಂದ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯಾಗುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಓದಿನೊಂದಿಗೆ ಕ್ರೀಡೆಗೂ ಮಹತ್ವ ಕೊಡಬೇಕೆಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ತಿಳಿಸಿದರು.

ತಾಲ್ಲೂಕು ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಿಂದ ಸೆ.20ರಂದು ಔರಾದ(ಬಿ) ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ 2025-26ನೇ ಸಾಲಿನ ತಾಲ್ಲೂಕು ಮಟ್ಟದ ಪ್ರಾಥಮಿಕ ಮತ್ತು ಪ್ರೌಢ ವಿದ್ಯಾರ್ಥಿಗಳ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ದುಶ್ಚಟಗಳಿಗೆ ಬಲಿಯಾದವರು ಆಯಸ್ಸನ್ನು ಕಳೆದುಕೊಳ್ಳುತ್ತಾರೆ. ಹಾಗಾಗಿ ವಿದ್ಯಾರ್ಥಿಗಳು ಯಾವುದೇ ದುಶ್ಚಟಗಳಿಗೆ ಬಲಿಯಾಗದೇ ಆಟ-ಪಾಠಗಳಲ್ಲಿ ತೊಡಗಿಸಿಕೊಳ್ಳಬೇಕು. ಯೋಗಾಭ್ಯಾಸ ರೂಢಿಸಿಕೊಳ್ಳಬೇಕು. ವಿದ್ಯಾಭ್ಯಾಸ ಮುಗಿಯುವ ವರೆಗೆ ಸರ್ವಗುಣ ಸಂಪನ್ನರಾಗಿ ಹೊರಬರಬೇಕು. ಈ ದಿಶೆಯಲ್ಲಿ ಶಿಕ್ಷಕರ ಪಾತ್ರ ಸಾಕಷ್ಟಿದೆ ಎಂದರು. ಇತ್ತೀಚಿಗೆ ವಿದ್ಯಾರ್ಥಿಗಳು



ಕೇವಲ ಕ್ರಿಕೆಟ್‌ಗೆ ಹೆಚ್ಚಿನ ಮಹತ್ವ ಕೊಡುತ್ತಿದ್ದಾರೆ. ಇದರ ಬದಲಿಗೆ ಕಬ್ಬಡ್ಡಿ, ಖೋಖೋ, ಹಾಕಿ, ವಾಲಿಬಾಲ್‌ನಂತಹ ಎಲ್ಲ ಆಟಗಳನ್ನು ಆಡಬೇಕು. ನಮ್ಮ ವಿದ್ಯಾರ್ಥಿಗಳು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಗೆಲುವು ಸಾಧಿಸಬೇಕೆಂಬ ಹಂಬಲವಿದೆ. ಅದರಂತೆ ತಾವೆಲ್ಲರೂ ನಾನು ಗೆದ್ದೇ ಗೆಲ್ಲುತ್ತೇನೆ ಎಂಬ ಸಂಕಲ್ಪದೊಂದಿಗೆ ಆಟವಾಡಬೇಕು. ಎಲ್ಲ ಸ್ಪರ್ಧೆಗಳಲ್ಲಿ ಜಯಿಸಿ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಲು ಯತ್ನಿಸಬೇಕು. ಇದರಿಂದ ತಾಲ್ಲೂಕಿನ ಕೀರ್ತಿ ವೃದ್ಧಿಸುವ ಜೊತೆಗೆ ತಾವು ಬೆಳವಣಿಗೆ ಹೊಂದಬಹುದು ಎಂದು ಹೇಳಿದರು.

ಕ್ಷೇತ್ರದಲ್ಲಿ ಶಿಕ್ಷಣದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದ್ದು, ಕ್ರೀಡಾ ಕ್ಷೇತ್ರದ ಬೆಳವಣಿಗೆಗೆ ಪೂರಕವಾದ ವಾತಾವರಣ ನಿರ್ಮಿಸಿದ್ದೇನೆ. ವಿದ್ಯಾರ್ಥಿಗಳು ಸರಿಯಾಗಿ ಆಟವಾಗಿ ತಮ್ಮ ಭವಿಷ್ಯವನ್ನು ಸುಧಾರಿಸಿಕೊಳ್ಳಬೇಕು. ಜಿಲ್ಲಾ ಮಟ್ಟದಲ್ಲಿ ಗೆಲುವು ಸಾಧಿಸಿ ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಲಾಗುತ್ತದೆ ಎಂದು ಶಾಸಕರು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಸಮನ್ವಯಾಧಿಕಾರಿ ಪ್ರಕಾಶ ರಾಠೋಡ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪಂಢರಿ ಆಡೆ, ದೈಹಿಕ ಶಿಕ್ಷಣ ಪರಿವೀಕ್ಷಕ ಯಶವಂತ ಡೊಂಬಾಳೆ, ಶಿವಕುಮಾರ, ಸಂಜು ಮೇತ್ರೆ, ಮುಖಂಡರಾದ ಸಚಿನ ರಾಠೋಡ, ಕೇರಬಾ ಪವಾರ, ವಸಂತ ರಾಠೋಡ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಸನ್ಮಾನ: ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿರುವ ಸಾಧಕ ವಿದ್ಯಾರ್ಥಿಗಳಿಗೆ ಶಾಸಕರು ಶಾಲು ಹೊದಿಸಿ, ಹೂಗುಚ್ಛ ನೀಡುವ ಮೂಲಕ ಅಭಿನಂದನೆ ಸಲ್ಲಿಸಿದರು. ಮುಂದಿನ ಸ್ಪರ್ಧೆಗಳಲ್ಲಿ ಜಯಶಾಲಿಯಾಗಿ ಬನ್ನಿ ಎಂದು ಹಾರೈಸಿದರು.

# ಬಿಎಂಸಿಆರ್‌ಸಿ: 'ಫಾರ್ಮಕೋವಿಜಿಲನ್ಸ್' ವಾರಾಚರಣೆ ಅಂಗವಾಗಿ ಜಾಥ

ಬಳ್ಳಾರಿ,ಸೆ.20:ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದ ಔಷಧಶಾಸ್ತ್ರ ವಿಭಾಗದಿಂದ 'ಫಾರ್ಮಕೋವಿಜಿಲನ್ಸ್' ವಾರಾಚರಣೆ ಅಂಗವಾಗಿ ಶನಿವಾರ ಬಿಎಂಸಿಆರ್‌ಸಿ ಆವರಣದಲ್ಲಿ ಜಾಥ ನಡೆಯಿತು.

ಜಾಥಾಗೆ ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಗಂಗಾಧರ ಗೌಡ ಅವರು ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಔಷದೋಪಚಾರದಿಂದ ಉಂಟಾಗುವ ಅಡ್ಡಪರಿಣಾಮಗಳ ಕುರಿತು ಸಹ ಸಾರ್ವಜನಿಕರು ಸೂಕ್ತ ಮಾರ್ಗದರ್ಶನ ಹೊಂದಬೇಕು ಎಂದು ಹೇಳಿದರು.

ಔಷಧಗಳು ದೇಹದೊಂದಿಗೆ ಹೇಗೆ ಸಂವಹನ ನಡೆಸುತ್ತವೆ, ಹೇಗೆ ಕಾರ್ಯನಿರ್ವಹಿಸುತ್ತವೆ ಮತ್ತು ಅವುಗಳ ಯಾವ ರೀತಿಯ ಪರಿಣಾಮ ಬೀರುತ್ತವೆ ಎನ್ನುವುದರ ಕುರಿತು ಸಂಶೋಧನಾರ್ಥಿಗಳು ಅಧ್ಯಯನ ಮಾಡಬೇಕು.ಔಷಧಶಾಸ್ತ್ರದ ಶಾಖೆಯಾದ ಫಾರ್ಮಕೊಡೈನಾಮಿಕ್ಸ್ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲು, ಔಷಧದ ಕ್ರಿಯೆಯನ್ನು ನಿಯಂತ್ರಿಸುವ ಮೂಲಭೂತ ತತ್ವಗಳನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ ಎಂದು ತಿಳಿಸಿದರು.

ಇದೇ ವೇಳೆ ಔಷಧಶಾಸ್ತ್ರ ವಿಭಾಗದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಸ್ನಾತಕೋತ್ತರ ವಿದ್ಯಾರ್ಥಿಗಳು, ವೈದ್ಯಕೀಯ, ನರ್ಸಿಂಗ್ ಮತ್ತು ಅರೆವೈದ್ಯಕೀಯ ವಿದ್ಯಾರ್ಥಿಗಳು ಜನರಲ್ಲಿ ಅರಿವು ಮೂಡಿಸುವ ಮತ್ತು ಅದರ ನೋಂದಣಿಯ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವ ಮೂಲಕ ಜಾಗೃತಿ ಮೂಡಿಸಿದರು.

ಈ ಸಂದರ್ಭದಲ್ಲಿ ಬಿಎಂಸಿಆರ್‌ಸಿಯ ಪ್ರಭಾರಿ ವೈದ್ಯಕೀಯ ಅಧೀಕ್ಷಕ ಡಾ.ಚಿದಂಬರ ಮೂರ್ತಿ, ಔಷಧಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ವೈ.ವಿಶ್ವನಾಥ್, ಡಾ.ಮುರುಗೇಶ್ ಜೆ.ವಿ., ಡಾ.ವಿಶ್ವನಾಥ್.ಎಂ., ಡಾ.ಶಕುಂತಲಾ.ಬಿ., ಡಾ.ಜ್ಯೋತಿ ಡಿ.ಬಿ., ಡಾ.ಬಾಣಾಪೂರ್ ಅಂಬಿಕ, ಡಾ.ರಾಕೇಶ್ ಕುಮಾರ್.ಪಿ.ಕೆ ಸೇರಿದಂತೆ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳಾದ ಡಾ.ಅನಿಸುರ್ ರೆಹಮಾನ್.ಎಂ., ಡಾ.ಅಜಯ್ ಕುಮಾರ್ ರಾಥೋಡ್, ಡಾ.ದೀಪಕ್. ಎಸ್., ಡಾ.ಚೇತನ್ ಕುಲಕರ್ಣಿ, ಡಾ.ಲಿಲ್ಲಿ ನಿತ್ಯಾ ಪ್ರಿಯದರ್ಶಿನಿ ಹಾಗೂ ಇತರರು ಭಾಗವಹಿಸಿದ್ದರು.

# ಮಾಜಿ ದೇವದಾಸಿ ಮಹಿಳೆಯರ ಮರುಸಮೀಕ್ಷೆ: ಮೂರು ನಮೂನೆಯ ಮಾಹಿತಿ ಸಂಗ್ರಹ

ಬಳ್ಳಾರಿ,ಸೆ.20:

ಜಿಲ್ಲೆಯಲ್ಲಿ ಮಾಜಿ ದೇವದಾಸಿ ಮಹಿಳೆಯರ ಮರು ಸಮೀಕ್ಷೆ ಕೈಗೊಳ್ಳಲಾಗಿದ್ದು, ಸಮೀಕ್ಷೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶದನ್ವಯ ಮೂರು ವಿವಿಧ ರೀತಿಯ ಅರ್ಜಿ ನಮೂನೆಗಳಲ್ಲಿ ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂದು ಮಾಜಿ ದೇವದಾಸಿ ಮಹಿಳೆಯರ ಮರು ಸಮೀಕ್ಷೆಯ ಜಿಲ್ಲಾ ಮಟ್ಟದ ಸಮಿತಿಯ ಸದಸ್ಯ ಕಾರ್ಯದರ್ಶಿಯೂ ಆದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ನಮೂನೆ-1: ಈಗಾಗಲೇ ಸರ್ಕಾರದಿಂದ 1993-94 ಮತ್ತು 2007-08ನೇ ಸಾಲಿನಲ್ಲಿ ನಡೆಸಲಾದ ಸಮೀಕ್ಷೆಯಲ್ಲಿ ಹೆಸರು ನೋಂದಣಿಯಾಗಿದ್ದು, ಮರಣ ಹೊಂದಿರುವ ಮಹಿಳೆಯ ಕುಟುಂಬದ ಅಧೀಕೃತ ಸದಸ್ಯರು ಮಾಹಿತಿ ಭರ್ತಿ ಮಾಡಿ ಕೊಡಬೇಕಾದ ಅರ್ಜಿ ನಮೂನೆ-1 ರಲ್ಲಿ ಸಲ್ಲಿಸಬೇಕು.

ನಮೂನೆ-2: ಈ ಹಿಂದೆ 1993-94 ಮತ್ತು 2007-08ನೇ ಸಾಲಿನಲ್ಲಿ ನಡೆಸಲಾದ ಸಮೀಕ್ಷೆಯಲ್ಲಿ ಹೆಸರು ನೋಂದಣಿಯಾಗದೇ ಹೊರಗುಳಿದ, ಹಾಲಿ ಜೀವಂತವಿರುವ ಹೊಸದಾಗಿ ದೇವದಾಸಿ ಪಟ್ಟಿಗೆ ಸೇರ್ಪಡೆಗೊಳ್ಳ ಬಯಸುವ ಮಾಜಿ ದೇವದಾಸಿ ಮಹಿಳೆಯರು ಮಾಹಿತಿ ಭರ್ತಿ ಮಾಡಿ ಕೊಡಬೇಕಾದ ಅರ್ಜಿ ನಮೂನೆ-2ರಲ್ಲಿ ಸಲ್ಲಿಸಬೇಕು.

ನಮೂನೆ-3: ಈ ಹಿಂದೆ 1993-94 ಮತ್ತು 2007-08ನೇ ಸಾಲಿನಲ್ಲಿ ನಡೆಸಲಾದ ಸಮೀಕ್ಷೆಯಲ್ಲಿ ಹೆಸರು ನೊಂದಣಿಯಾಗದೇ ಹೊರಗುಳಿದ ಮತ್ತು ಪ್ರಸ್ತುತ ಮರಣ ಹೊಂದಿರುವ ಮಹಿಳೆಯರ ಕುಟುಂಬದ ಅಧೀಕೃತ ಸದಸ್ಯರು ಮಾಹಿತಿ ಭರ್ತಿ ಮಾಡಿ ಕೊಡಬೇಕಾದ ಅರ್ಜಿ ನಮೂನೆ-3 ರಲ್ಲಿ ಸಲ್ಲಿಸಬೇಕು.

ಈ ಮೇಲ್ಕಂಡ ಅರ್ಜಿಗಳನ್ನು ಭರ್ತಿ ಮಾಡಿ ಅಗತ್ಯ ದಾಖಲೆಗಳಾದ ಮಹಿಳೆಯ ಆಧಾರ್ ಕಾರ್ಡ್ (ಮೊಬೈಲ್ ನಂಬರ್ ಲಿಂಕ್ ಇರುವ ಆಧಾರ್ ಕಾರ್ಡ್ ಸಂಖ್ಯೆ), ಮಹಿಳೆಯ ಮರಣ ಪ್ರಮಾಣ ಪತ್ರ, ವಂಶವೃಕ್ಷ, ಕುಟುಂಬದ ಅಧೀಕೃತ ಸದಸ್ಯರ ಆಧಾರ್ ಕಾರ್ಡ್, ಹೊಸ ಸೇರ್ಪಡೆ ಬಯಸುವ ಮಹಿಳೆಯರ ವಯಸ್ಸಿನ ದೃಢೀಕರಣ, ವೈದ್ಯಕೀಯ ದೃಢೀಕರಣ ಪತ್ರ, ಶಾಲಾ ದಾಖಲಾತಿ ಪತ್ರ, ಬ್ಯಾಂಕ್ ಪಾಸ್ ಪುಸ್ತಕ, ಪಡಿತರ ಚೀಟಿ, ಜಾತಿ ಆದಾಯ ಪ್ರಮಾಣ ಪತ್ರ, ವಾಸಸ್ಥಳ ಪ್ರಮಾಣ ಪತ್ರಗಳೊಂದಿಗೆ ಅರ್ಜಿಗಳನ್ನು ಸಂಬಂಧಿಸಿದ ಆಯಾ ತಾಲ್ಲೂಕುಗಳ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗಳಿಗೆ ಅಕ್ಟೋಬರ್ 04ರೊಳಗೆ ಅರ್ಜಿ ಸಲ್ಲಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಳ್ಳಾರಿ: ಲಿಂಗತ್ವ ಅಲ್ಪಸಂಖ್ಯಾತರು ಸಮೀಕ್ಷೆಯಲ್ಲಿ ಪಾಲ್ಗೊಳ್ಳಿ

ಬಳ್ಳಾರಿ,ಸೆ.20:

ಜಿಲ್ಲೆಯಲ್ಲಿ ಈಗಾಗಲೇ ಆರಂಭಗೊಂಡಿರುವ ಲಿಂಗತ್ವ ಅಲ್ಪಸಂಖ್ಯಾತರ ಮೂಲಹಂತದ ಸಮೀಕ್ಷೆಯಲ್ಲಿ ಲಿಂಗತ್ವ ಅಲ್ಪಸಂಖ್ಯಾತರ ಫಲಾನುಭವಿಗಳು ತಪ್ಪದೇ ಪಾಲ್ಗೊಳ್ಳಬೇಕು ಎಂದು ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ನಾಯಕ ಅವರು ತಿಳಿಸಿದ್ದಾರೆ.

ಸಮೀಕ್ಷೆಯು ಈಗಾಗಲೇ ಜಿಲ್ಲಾ ಮತ್ತು ತಾಲ್ಲೂಕು ಸರ್ಕಾರಿ ಆಸ್ಪತ್ರೆಗಳಲ್ಲಿ ನಡೆಯುತ್ತಿದ್ದು, ಸಮೀಕ್ಷೆಯಲ್ಲಿ ಪಾಲ್ಗೊಳ್ಳಲು ಲಿಂಗತ್ವ ಅಲ್ಪಸಂಖ್ಯಾತರು ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ತಮ್ಮ ಹೆಸರು ಹಾಗೂ ವಿವರಗಳನ್ನು ನೋಂದಾಯಿಸಿಕೊಳ್ಳಬೇಕು.

ರಾಜ್ಯ ಸರ್ಕಾರವು ಲಿಂಗತ್ವ ಅಲ್ಪಸಂಖ್ಯಾತರಿಗೆ ಪುನರ್ವಸತಿ ಕಲ್ಪಿಸುವ ನಿಟ್ಟಿನಲ್ಲಿ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿ ಕುರಿತಂತೆ ನಿಖರ ಮಾಹಿತಿ ಸಂಗ್ರಹಿಸಲು ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಮತ್ತು ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ವತಿಯಿಂದ ಮೊದಲ ಬಾರಿಗೆ ರಾಜ್ಯಾದ್ಯಂತ ಲಿಂಗತ್ವ ಅಲ್ಪಸಂಖ್ಯಾತರ ಮೂಲಹಂತದ ಸಮೀಕ್ಷೆ ನಡೆಸಲಾಗುತ್ತಿದೆ.ಸಮೀಕ್ಷೆ ಕುರಿತಂತೆ ಯಾವುದೇ ಸಹಾಯ, ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 18005992025 ಗೆ ಕರೆಮಾಡಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಯಚೂರು ಸಿಟಿಯ ಹೋಟೆಲಗಳು, ರೆಸ್ಟೋರೆಂಟಗಳು, ಬಾರಗಳಲ್ಲಿ ಅಶುಚಿತ್ವ ದೂರು: ಅಧಿಕಾರಿಗಳಿಂದ ದಿಢೀರ್ ದಾಳಿ; ದಂಡವಿಧಿಸಿ ಎಚ್ಚರಿಕೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಸೆ 20: ಜಿಲ್ಲಾಡಳಿತ ಹಾಗೂ ರಾಯಚೂರು ಮಹಾನಗರ ಪಾಲಿಕೆಯಿಂದ ಸೆ.19ರಂದು ಸಂಜೆ ವೇಳೆ ದಿಢೀರ್ ದಾಳಿ ನಡೆಸಿ ವಿವಿಧ ಹೊಟೆಲ್‌ಗಳು, ಚಹಾ ಅಂಗಡಿಗಳು, ರೆಸ್ಟೊರೆಂಟಗಳು ಮತ್ತು ಬಾರಗಳಲ್ಲಿನ ವ್ಯವಸ್ಥೆಯನ್ನು ಪರಿಶೀಲಿಸಲಾಯಿತು.



ರಾಯಚೂರು ಸಹಾಯಕ ಆಯುಕ್ತರು ಮತ್ತು ತಹಸೀಲ್ದಾರ ನೇತೃತ್ವದಲ್ಲಿ ಜಿಲ್ಲಾ ಅಂಕಿತ ಅಧಿಕಾರಿಗಳು ಹಾಗೂ ಆಹಾರ ಸುರಕ್ಷತಾ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನೊಳಗೊಂಡ ಒಂದು ತಂಡವು ರೈಲ್ವೆ ನಿಲಾಣದ ಸುತ್ತಲಿನ 10ಕ್ಕೂ ಹೆಚ್ಚು ವಿವಿಧ ಹೊಟೆಲ್‌ಗಳು, ಚಹಾ ಅಂಗಡಿಗಳು ಮತ್ತು ರೆಸ್ಟೊರೆಂಟಗಳ ಮೇಲೆ ದಾಳಿ ನಡೆಸಿ 30 ಸಾವಿರ ರೂ. ವರೆಗೆ ದಂಡ ವಿದಿಸಿತು.

ಪಾಲಿಕೆಯ ಕಂದಾಯ ವಲಯ ಆಯುಕ್ತರು ಹಾಗೂ ಪರಿಸರ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ನೇತೃತ್ವದ ಮತ್ತೊಂದು ತಂಡವು ಸಹ ಸುಮಾರು 10 ಕ್ಕೂ ಹೆಚ್ಚು ಬಾರ್ ಹಾಗೂ ರೆಸ್ಟೋರೆಂಟೆಗಳು ಮತ್ತು ವಿವಿಧ ಹೋಟೆಲ್‌ಗಳ ಮೇಲೆ ದಾಳಿ ನಡೆಸಿ ಅಲ್ಲಿನ ಸಾಮಗ್ರಿಗಳು, ಶುಚಿತ್ವದ ಬಗ್ಗೆ ಪರಿಶೀಲಿಸಿ 50 ಸಾವಿರ ರೂ.ಗಳರೆಗೆ ದಂಡ ವಿಧಿಸಿ ಬಿಸಿಮುಟ್ಟಿಸಿದರು.

ಸಹಾಯಕ ಆಯುಕ್ತರು ಮತ್ತು ತಹಸೀಲ್ದಾರ ನೇತೃತ್ವದ ತಂಡವು ರೈಲ್ವೆನಿಲ್ದಾಣದ ಸುತ್ತಲಿನ ಸಸ್ಯಹಾರಿ ಮತ್ತು ಮೌಂಸಾಹಾರಿ ಹೊಟೆಲ್‌ಗಳಿಗೆ ಪ್ರವೇಶಿಸಿ ಅವರು ಅಡುಗೆಗೆ ಬಳಸುವ ನಾನಾ ಸಾಮಗ್ರಿಗಳ ಗುಣಮಟ್ಟ ಪರಿಶೀಲಿಸಿತು. ಕೆಲ ಹೊಟೆಲಗಳಲ್ಲಿ ನಿಷೇಧಿತ ಉಪ್ಪನ್ನು ಮತ್ತು ನಿಷೇಧಿತ ಬಣ್ಣದ ರಸಾಯನವನ್ನು ಬಳಸುವುದರ ಬಗ್ಗೆ ಪತ್ತೆ ಹಚ್ಚಿ ದಂಡ ವಿಧಿಸಿದರು. ಇನ್ಮುಂದೆ ಬಳಸಕೂಡದು ಎಂದು ಎಚ್ಚರಿಕೆ ನೀಡಲಾಯಿತು. ಕೆಲ ಹೊಟೆಲಗಳಲ್ಲಿ ಅಶುಚಿತ್ವ ಕಂಡು ಬಂದಿತು.

ನೊಟೀಸ್ ಜಾರಿ: ಕೆಲಸ ಮಾಡುವವರು ವೈದ್ಯರಿಂದ ವೈದ್ಯಕೀಯ ಪ್ರಮಾಣ ಪತ್ರ ಪಡೆದಿರುವುದಿಲ್ಲ. ಹೊಟೆಲ್‌ನ ಆವರಣದ ಹೊರಗೆ ಮತ್ತು ಒಳಗೆ ಸ್ವಚ್ಛತೆ ಕಾಪಾಡಲು ವಿಫಲರಾಗಿದ್ದಾರೆ ಮತ್ತು ದುರ್ನಾತ ಬರುತ್ತಿದೆ. ಅಡುಗೆಗೆ ಬಣ್ಣವನ್ನು ಕಾನೂನಿನ ಪ್ರಕಾರ 100 ಪಿಪಿಎಂಗಿಂತ ಅಧಿಕ ಬಳಸುತ್ತಿದ್ದಾರೆ ಎಂದು ಕೆಲ ಹೊಟೆಲಗಳಿಗೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟದ ಪ್ರಾಧಿಕಾರದಿಂದ ಸುಧಾರಣಾ ನೊಟೀಸ್ ಜಾರಿ ಮಾಡಲಾಯಿತು.

ಪ್ರಯೋಗಾಲಕ್ಕೆ ಕಳುಹಿಸಲು ನೀರು ಸಂಗ್ರಹ: ಭೇಟಿ ಸಂದರ್ಭದಲ್ಲಿ ಕೆಲ ಹೊಟೆಲಗಳಲ್ಲಿನ ನೀರಿನ ತೊಟ್ಟಿಗಳು ಮತ್ತು ಟ್ಯಾಂಕಗಳನ್ನು ಪರಿಶೀಲಿಸಲಾಯಿತು. ನೀರಿನ ತೊಟ್ಟಿಯು ಜಂಗು ಹತ್ತಿದಂತೆ ಮತ್ತು ಅಶುಚಿತ್ವ ಕಂಡು ಬಂದ ಹಿನ್ನೆಲೆಯಲ್ಲಿ ಪ್ರಯೋಗಾಲಯಕ್ಕೆ ಕಳುಹಿಸಲು ಬಾಟಲಗಳಲ್ಲಿ ನೀರು ಸಂಗ್ರಹಿಸಲಾಯಿತು. ಪ್ರತಿ ದಿನ ನೀರಿನ ತೊಟ್ಟಿ, ಟ್ಯಾಂಕಗಳನ್ನು ಸ್ವಚ್ಛ ಮಾಡುವಂತೆ ಮಾಲೀಕರಿಗೆ ಎಚ್ಚರಿಕೆ ನೀಡಲಾಯಿತು.

ಪ್ಲಾಸ್ಟಿಕ್ ಬಳಕೆಗೆ ದಂಡ: ಪಾಲಿಕೆಯ ಕಂದಾಯ ವಲಯ ಆಯುಕ್ತರು ಹಾಗೂ ಪರಿಸರ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ನೇತೃತ್ವದ ತಂಡವು ಬಾರ್‌ಗಳಲ್ಲಿ ಸ್ವಚ್ಛತೆ ಹಾಗೂ ನಿಷೇಧಿತ ಪ್ಲಾಸ್ಟಿಕ್ ಬಳಕೆಯ ಬಗ್ಗೆ ಪರಿಶೀಲಿಸಿತು. ಕೆಲ ಕಡೆಗಳಲ್ಲಿ ನಿಷೇಧಿತ ಪ್ಲಾಸ್ಟಿಕ್, ನೀರಿನ ಪೌಚ್‌ಗಳ ಬಳಸುವುದನ್ನು ಅಧಿಕಾರಿಗಳು ಪತ್ತೆ ಹಚ್ಚಿ ದಂಡ ವಿಧಿಸಿ ಎಚ್ಚರಿಕೆ ನೀಡಿದರು.

ರಸಾಯನಿಕ ಬಳಸದಂತೆ ಎಚ್ಚರಿಕೆ: ಹೋಟೆಲ್ ಮತ್ತು ರೆಸ್ಟೋರೆಂಟಗಳ ಪ್ರವೇಶ ವೇಳೆಯಲ್ಲಿ ಅಲ್ಲಿ ಬಳಸುತ್ತಿದ್ದ ಅಡುಗೆ ಸಾಮಗ್ರಿ, ದವಸ ದಾನ್ಯಗಳ ಗುಣಮಟ್ಟ, ಅಡುಗೆಗೆ ಬಳಸುವ ನೀರಿನ ಗುಣಮಟ್ಟದ ಬಗ್ಗೆ ಪರಿಶೀಲಿಸಿದರು. ಸಾರ್ವಜನಿಕರಿಗೆ ನೀಡುವ ಯಾವುದೇ ಪದಾರ್ಥಗಳಿಗೆ ರಾಸಾಯನಿಕ ಬಳಸಬಾರದು. ಆಹಾರದ ಸ್ವಚ್ಛತೆ ಮತ್ತು ಗುಣಮಟ್ಟದ ಬಗ್ಗೆ ವಿಶೇಷ ನಿಗಾವಹಿಸಬೇಕು. ಹೋಟೆಲ್ ಮತ್ತು ರೆಸ್ಟೋರೆಂಟಗಳಲ್ಲಿನ ಸಿಬ್ಬಂದಿಯು ವೈಯಕ್ತಿಕವಾಗಿ ಸ್ವಚ್ಛತೆಯಿಂದಿರಬೇಕು. ಆರೋಗ್ಯವಂತರಾಗಿರಬೇಕು. ಅಡುಗೆ ಮಾಡುವ ಎಲ್ಲ ಸಿಬ್ಬಂದಿಯ ಆರೋಗ್ಯ ಬಗ್ಗೆ ಕಾಲಕಾಲಕ್ಕೆ ಕಡ್ಡಾಯ ತಪಾಸಣೆ ಮಾಡಿಸಬೇಕೆಂದು ಮಾಲೀಕರಿಗೆ ಇದೆ ವೇಳೆ ಎಚ್ಚರಿಕೆ ನೀಡಲಾಯಿತು.

ಸ್ವಚ್ಛತಾ ನಿಯಮಗಳ ಬಗ್ಗೆ ನಿರ್ಲಕ್ಷ್ಯತೆ ವಹಿಸಿ ಉಲ್ಲಂಘನೆ ಮಾಡಿದರೆ ಅಂತಹ ಹೋಟೆಲ್ ಹಾಗೂ ಅಂಗಡಿಗಳ ಮೇಲೆ ದಂಡ ವಿಧಿಸಿ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗುವುದು, ಅಗತ್ಯವಿದ್ದಲ್ಲಿ ಅಂಗಡಿಯನ್ನು ಮುಟ್ಟುಗೋಲ ಅಥವಾ ವಶಪಡಿಸಕೊಳ್ಳಲಾಗುವುದು ಎಚ್ಚರಿಕೆ ನೀಡಲಾಯಿತು.

ನಾನಾ ಅಂಶಗಳ ಪರಿಶೀಲನೆ: ಆಹಾರ ಪರವಾನಿಗೆ, ನೋಂದಣಿ ನವೀಕರಣ, ಪಡೆದಿರುವ ಆಹಾರದ ಪರವಾನಿಗೆ ನೋಂದಣಿ ಪತ್ರದ ಪ್ರದರ್ಶನ ಇದೆಯೇ?, ಶುದ್ಧ ಕುಡಿಯುವ ನೀರು ನೀಡಲು ಉಪಕರಣ ಅಳವಡಿಸಿರುವುದಿಲ್ಲ. ತಿಂಡಿ ತಿನಿಸು, ಪಾನೀಯಗಳು ತೆರೆದ ಪಾತ್ರೆಯಲ್ಲಿವೆಯೇ? ತಟ್ಟೆ, ಚಮಚೆ, ಲೋಟ ಇತ್ಯಾದಿಯನ್ನು ಕುದಿಯುವ ನೀರಿನಿಂದ ಸ್ವಚ್ಚಗೊಳಿಸಿಲ್ಲ. ಆಹಾರ ತಯಾರು ಮಾಡುವ ಕೊಠಡಿ ಸಂಗ್ರಹ ಮತ್ತು ಮಾರಾಟ ಮಾಡುವ ಸ್ಥಳದಲ್ಲಿ ಸ್ವಚ್ಛತೆ ಕಾಪಾಡಿಲ್ಲ. ನೆಲ ಮೇಜುಗಳನ್ನು ನೊಣ ಹಾಗೂ ಇತರೆ ಕ್ರಿಮಿಕೀಟಗಳಿಂದ ಮುಕ್ತವಾಗಿರಿಸಲು ಕ್ರಿಮಿನಿನಾಶಕಗಳಿಂದ ಸ್ವಚ್ಛಗೊಳಿಸಿಲ್ಲ. ಒಡೆದ ಮೊಟ್ಟೆ, ಕಳಪೆ ಮೊಟ್ಟೆ ಬಳಸುತ್ತಿರುವುದು, ಹೊಟೆಲ್‌ನಲ್ಲಿ ಅಡುಗೆ ಮಾಡುವ, ಸರಬರಾಜು ಸಿಬ್ಬಂದಿ ತಲೆಗೆ ಟೋಪಿ, ಕೈಗೆ ಗ್ಲೌಸ್, ಮುಖಕ್ಕೆ ಮಾಸ್ಕ ಹಾಕಿದ್ದಾರಾ? ಐಎಸ್‌ಐ ಪ್ರಾಮಾಣಿಕರೀಸಿದ ಬಣ್ಣಗಳನ್ನು ಸಿಹಿ ತಿಂಡಿಗಳ ತಯಾರಿಕೆಯಲ್ಲಿ ಬಳಸುತ್ತಿಲ್ಲ. ಪಾತ್ರೆ ಪರಿಕರ ತೊಳೆಯುವ ಜಾಗದಲ್ಲಿ ನೀರು ನಿಲ್ಲದಂತೆ ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿಲ್ಲ. ಅಡುಗೆ ಕೋಣೆಯಲ್ಲಿ ಸೂಚಿತ ಫ್ಯಾನ್ ಅಳವಡಿಸಿಲ್ಲ. ಕೀಟನಾಶಕ ಪ್ರಮಾಣ ಪತ್ರ ಇಟ್ಟಿರುವುದಿಲ್ಲ ಎನ್ನುವಂತಹ ನಾನಾ ಅಂಶಗಳ ಬಗ್ಗೆ ಭೇಟಿ ವೇಳೆ ಪರಿಶೀಲಿಸಲಾಯಿತು. ಲೋಪ ಕಂಡು ಬಂದ ಕಡೆಗಳಲ್ಲಿ ದಂಡವಿಧಿಸಲಾಯಿತು.

# ಮನ್ಸಲಾಪೂರು ಗ್ರಾ.ಪಂಗೆ ಸಿಇಒ ಭೇಟಿ: ಕಾಮಗಾರಿ ಪರಿಶೀಲನೆ

ರಾಯಚೂರು ಸೆ. 20 : ತಾಲೂಕಿನ ಮನ್ಸಲಾಪೂರು ಗ್ರಾಮ ಪಂಚಾಯತಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ್ ಕುಮಾರ್ ಕಾಂದೂ ಅವರು ಶುಕ್ರವಾರ ಭೇಟಿ ನೀಡಿ ವಿವಿಧ ಕಾಮಗಾರಿಗಳನ್ನು ಪರಿಶೀಲನೆ ಮಾಡಿದರು. ಮೊದಲಿಗೆ ಗ್ರಾಮ ಪಂಚಾಯತಿಗೆ ಬೇಟಿ ನೀಡಿ, ಹೊಸದಾಗಿ ಕಟ್ಟಿರುವ ಗ್ರಾಮ ಪಂಚಾಯತಿ ಕಟ್ಟಡವನ್ನು ವೀಕ್ಷಿಸುತ್ತಾ ಎಲ್ಲಾ ಕೊಠಡಿಗಳಿಗೆ ತೆರಳಿ ಪರಿಶೀಲನೆ ಮಾಡಿದರು. ನಂತರ ಗ್ರಾಮ ಪಂಚಾಯತಿಯಲ್ಲಿ ಇರುವ ಸಿಬ್ಬಂದಿಗಳ ಹಾಜರಾತಿ ಪುಸ್ತಕ ಮತ್ತು ಪಂಚತಂತ್ರ 2 ನಲ್ಲಿ ಹಾಜರಾತಿ ಹಾಕಿದ ಬಗ್ಗೆ ಪರಿಶೀಲನೆ ಮಾಡಿದರು. ವಿವಿಧ ಯೋಜನೆಗಳಾದ ಸ್ವಚ್ಛ ಭಾರತ ಮೀಷನ್, ನರೇಗಾ ಯೋಜನೆ, 15ನೇ ಹಣಕಾಸು, ವಸತಿ ಯೋಜನೆ, ಕರ ವಸೂಲಿಯ ಪ್ರಗತಿಯ ಮಾಹಿತಿಯನ್ನು ಪಡೆದರು.



ನರೇಗಾ ಯೋಜನೆಯಡಿ ಗುರಿಗೆ ಅನುಗುಣವಾಗಿ ಮಾನವ ದಿನಗಳು ಸೃಜನೆ ಮಾಡಲು ಪಿಡಿಒ ಅವರಿಗೆ ಸೂಚನೆ ನೀಡಿದರು. ಗ್ರಾಮ ಪಂಚಾಯತಿಯ ವ್ಯಾಪ್ತಿಯ ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರು, ಅಂಗನವಾಡಿ ಕೇಂದ್ರಗಳು ಹಾಗೂ ಕೂಸಿನ ಮನೆ ಕೇಂದ್ರ ಚಾಲ್ತಿಯಲ್ಲಿರುವ ಬಗ್ಗೆ ಮಾಹಿತಿ ಪಡೆದು, ನಂತರ ಕಸ ವಿಲೇವಾರಿ ಘಟಕ ನಿರ್ಮಾಣ ಮಾಡಲು ತಕ್ಷಣ ಸ್ಥಳ ಗುರುತಿಸುವವುದು, ಅಲ್ಲಿಯವರೆಗೆ ತಾತ್ಕಾಲಿಕವಾಗಿ ಎಸ್‌ಡ್ಲೂಎಮ್ ಶೇಡ್ ನಿರ್ಮಾಣ ಮಾಡಲು ಕೂಡಲೇ ಕ್ರಮ ವಹಿಸಬೇಕೆಂದು ಪಿಡಿಒ ಅವರಿಗೆ ಸೂಚನೆ ನೀಡಿದರು. ಸ್ವಚ್ಚತಾ ಹೀ ಸೇವಾದಡಿ ಪ್ರತಿ ತಿಂಗಳು ಒಂದನೇ ಹಾಗೂ ಮೂರನೇ ಶನಿವಾರದಂದು ಕಡ್ಡಾಯವಾಗಿ ಗ್ರಾಮಗಳಲ್ಲಿ ಅಂಗನವಾಡಿ ಕಾರ್ಯಕರ್ತರು ಅಶಾ ಕಾರ್ಯಕರ್ತರು, ಸ್ವ-ಸಹಾಯ ಸಂಘದ ಮಹಿಳೆಯರು, ಸಂಘ ಸಂಸ್ಥೆಯವರು ಹಾಗೂ ಸಾರ್ವಜನಿಕರೊಂದಿಗೆ ಯಶಸ್ವಿಯಾಗಿ ಸ್ವಚ್ಚತಾ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಂಡು ಗ್ರಾಮಗಳನ್ನು ಸ್ವಚ್ಚವಾಗಿಡಲು ಪಿಡಿಒ ಅವರಿಗೆ ಸೂಚನೆ ನೀಡಿದರು.

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಐತಿಹಾಸಿಕ ವೀರ ಗಲ್ಲುಗಳು ಇದ್ದರೆ, ಅವುಗಳೆನ್ನೆಲ್ಲಾ ಸಂಗ್ರಹಿಸಿ, ಒಂದು ಕಡೆ ಶೆಡ್ ನಿರ್ಮಾಣ ಮಾಡಿ. ವೀರಗಲ್ಲುಗಳ ಬಗ್ಗೆ ಇತಿಹಾಸ, ಪರಂಪರೆ ಸಂಸ್ಕೃತಿ ಕುರಿತು ಸಂಕ್ಷಿಪ್ತವಾಗಿ ಬರೆದು ಇಟ್ಟರೇ ಸಾರ್ವಜನಿಕರು ಮತ್ತು ಶಾಲಾ ಮಕ್ಕಳು ಅವುಗಳನ್ನು ನೋಡಲು ಮತ್ತು ತಿಳಿದುಕೊಳ್ಳಲು ಆಸಕ್ತಿಯಾಗುತ್ತದೆ. ಮತ್ತು ಅವರ ಜೀವನ ಚರಿತ್ರೆ ಮತ್ತು ಸಾಧನೆಗಳ ಬಗ್ಗೆ ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಈ ರೀತಿಯಾಗಿ ಮಾಡಿ ಎಂದು ತಿಳಿಸಿ ನಂತರ ಗ್ರಾಮ ಪಂಚಾಯತಿ ಸಭಾಂಗಣಕ್ಕೆ ತೆರಳಿ ವೀಕ್ಷಣೆ ಮಾಡಿ ಕಟ್ಟಡ ವಿಸ್ತೀರ್ಣದ ಬಗ್ಗೆ ಮಾಹಿತಿ ಪಡೆದರು. ನಂತರ ಗ್ರಾಮ ಪಂಚಾಯತಿ ಪಕ್ಕದಲ್ಲಿರುವ ಗ್ರಂಥಾಲಯ ಕೇಂದ್ರಕ್ಕೆ ತೆರಳಿ ವೀಕ್ಷಿಸಿ, ಈ ವೇಳೆ ಮಕ್ಕಳು ಅರಿವು ಕೇಂದ್ರದಲ್ಲಿ ಹಾಜರಿರುವುದನ್ನು ನೋಡಿ ಸಂತಸವಾದರು. ಗ್ರಂಥಪಾಲಕರಿಗೆ ಎಷ್ಟು ಗಣಕಯಂತ್ರಗಳು ಇವೆ. ಹಾಗೂ ಎಷ್ಟು ಕಾರ್ಯನಿರ್ವಹಿಸುತ್ತವೆ ಎಂದು ಮಾಹಿತಿ ಪಡೆದು, ಅರಿವು ಕೇಂದ್ರದಲ್ಲಿ ಭಾರತ ದೇಶದ ಹಾಗೂ ಕರ್ನಾಟಕ ರಾಜ್ಯದ ನಕ್ಷೆಗಳನ್ನು ಉತ್ತಮವಾಗಿ ಬಿಡಿಸಿ

ಇರಿಸಬೇಕೆಂದು ಗ್ರಂಥಪಾಲಕರಿಗೆ ಹೇಳಿದರು. ಅರಿವು ಕೇಂದ್ರದಲ್ಲಿ ಕಡ್ಡಾಯವಾಗಿ ಇಂಟರ್ನೆಟ್ ವ್ಯವಸ್ಥೆ ಕೂಡಲೇ ಒದಗಿಸಬೇಕೆಂದು ಗ್ರಾಮ ಪಂಚಾಯತಿಯ ಅಧಿಕಾರಿ ಹಾಗೂ ಸಿಬ್ಬದಿಗಳಿಗೆ ಸಿಇಒ ಅವರು ಸೂಚಿಸಿದರು. ಇದೇ ಸಂದರ್ಭದಲ್ಲಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ಪವಾರ್, ಸಹಾಯಕ ನಿರ್ದೇಶಕರು ಹನುಮಂತ, ಪಿಡಿಒ ಶಿವಪ್ಪ ಸೇರಿದಂತೆ ಕಾರ್ಯದರ್ಶಿ, ಐಇಸಿ ಸಂಯೋಜಕ ಹಾಗೂ ಗ್ರಾ.ಪಂ ಸಿಬ್ಬಂದಿಯವರು ಇದ್ದರು.

# ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ



ಕಲಬುರಗಿ: ಸೆ.20:ನಗರದ ಕಲ್ಯಾಣಿ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕ (ಕಲಬುರಗಿ ಉತ್ತರ) ಆಯೋಜಿಸಿದ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ, ವಿದ್ಯಾರ್ಥಿಗಳಿಗೆ ಪ್ರತಿಭಾಪುರಸ್ಕಾರ ಹಾಗೂ ನಿವೃತ್ತ ಶಿಕ್ಷಕರಿಗೆ ವಿಶೇಷ ಸನ್ಮಾನ ಸಮಾರಂಭವನ್ನು ಗಣ್ಯರು ಉದ್ಘಾಟಿಸಿದರು.

ಈ ವೇದಿಕೆಯಲ್ಲಿ ತೊನಸನಹಳ್ಳಿ ಅಲ್ಲಮಪ್ರಭು ಸಂಸ್ಥಾನಮಠದ ಡಾ.ಮಲ್ಲಣ್ಣಪ್ಪ ಮಹಾಸ್ವಾಮಿಗಳು, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಸೂರ್ಯಕಾಂತ ಮದಾನೆ, ಸಹಾಯಕ ನಿರ್ದೇಶಕ ಚಂದ್ರಕಾಂತ ಕಿಣಗಿ, ಸಂಘದ ಗೌರವ ಅಧ್ಯಕ್ಷ ಅಂಬಾದಾಸ ಪಾಟೀಲ, ತಾಲೂಕ ಅಧ್ಯಕ್ಷ ಶಿವಾನಂದ ಪಾಸೋಡಿ, ಡಾ.ಶಾಂತಾಬಾಯಿ ಬಿರಾದಾರ, ಚಂದ್ರಶೇಖರ ಮಡಿವಾಳ, ಡಾ.ಪ್ರೇಮಸಿಂಗ್ ಚವ್ಹಾಣ, ಡಾ.ನಾಗಭೂಷಣ ವಿ.ಮಹಾಂತಿನ ಮಠ, ರೇವಣಸಿದ್ದಯ್ಯ ವೈದ್ಯ, ಅಶೋಕ ನಾವಿ, ಸೈಯದ್ ಅಹ್ಮದ್ ಅಲಿ, ಶೇಖ ಮುಜಿಬ್, ಎ.ಡಿ.ಭಾಷಾ, ಇಸಾಮುದ್ದಿನ್ ಖಾಜಿ, ಪ್ರಭುಲಿಂಗ ಮೂಲಗೆ, ಕೃಷ್ಣಪ್ಪ ನಾಯಕ ಜಾಹಗೀರದಾರ, ಮಹಾನಂದ ಹುಲಿ, ನಾಗಪ್ಪಾ ಸಾಸಟ್ಟಿ, ಹೇಮಂತಕುಮಾರ ಸರ್ದಾರ, ಶ್ರೀಶೈಲ ಬೆಳಗುಂಪಿ, ಮುತ್ತಣ್ಣ ಕುಂಬಾರ, ಜೀವನಕುಮಾರ ರಾಠೋಡ, ಸಾಬಿರ ಅಹ್ಮದ್, ದೇವಿಂದ್ರ ಚವ್ಹಾಣ, ಎಮ್.ಡಿ ಶರೀಫ್, ಮಾನಪ್ಪ ನಾಯಕ, ಹಾಜಿ ಶಾ, ನಾದಿರಾ ಬೇಗಂ, ಶಾಂತಾಬಾಯಿ ಮಸೂತಿ ಸೇರಿದಂತೆ ಕಲಬುರಗಿ ಉತ್ತರ ತಾಲೂಕಿನ ಎಲ್ಲಾ ಅನುದಾನಿತ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳು ಹಾಗೂ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

# ಮಕ್ಕಳ ಸಹಾಯವಾಣಿ ಸಂಖ್ಯೆ 1098

ಕಲಬುರಗಿ: ಸೆ.20: ರಾಜ್ಯದ ಎಲ್ಲಾ ಸರ್ಕಾರಿ, ಅರೆ ಸರ್ಕಾರಿ / ಸೇವಾ ಸಂಸ್ಥೆಗಳ ಕಟ್ಟಡಗಳ ಮೇಲೆ ಮಕ್ಕಳ ಸಹಾಯವಾಣಿ ಸಂಖ್ಯೆ 1098 ನ್ನು ಕಡ್ಡಾಯವಾಗಿ ಬರೆಸಲು ಮುಖ್ಯ ಕಾರ್ಯದರ್ಶಿಗಳು ಸೂಚನೆ ನೀಡಿದ್ದಾರೆ. ಮಕ್ಕಳ ಹಕ್ಕುಗಳ ರಕ್ಷಣೆ ಇಂದಿನ ತುರ್ತು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಅನುಷ್ಠಾನಗೊಂಡಿರುವ ಮಿಷನ್ ವಾತ್ಸಲ್ಯ ಯೋಜನೆಯು ಮಕ್ಕಳ ಅಭಿವೃದ್ಧಿ ಮತ್ತು ರಕ್ಷಣೆಯ ಆದ್ಯತೆಯನ್ನು ಸಾಧಿಸುವ ಒಂದು ಮಾರ್ಗವಾಗಿದೆ. ಸಂಕಷ್ಟದಲ್ಲಿನ ಹಾಗೂ ಸವಾಲಿನಲ್ಲಿರುವ ಮಕ್ಕಳ ಹಿತರಕ್ಷಣೆಗೆ ಹೆಚ್ಚು ಒತ್ತು ನೀಡುತ್ತಿದೆ. ಇಂತಹ ಮಕ್ಕಳ ಗುರುತಿಸುವಿಕೆ, ಸಂಕಷ್ಟ ಸ್ಥಿತಿಯಲ್ಲಿ ಮಾಹಿತಿ ಹಂಚಿಕೊಳ್ಳಲು ಹಾಗೂ ಪುನರ್ ವಸತಿ ಸೇವೆ ಕಲ್ಪಿಸುವಲ್ಲಿ ಮಕ್ಕಳ ಸಹಾಯವಾಣಿ 1098 ಮಹತ್ವದ ಪಾತ್ರವಹಿಸುತ್ತದೆ. ಈ ಸಂಖ್ಯೆಯನ್ನು ವ್ಯಾಪಕವಾಗಿ ಪ್ರಚಾರ ಮಾಡಿದಲ್ಲಿ ಬಾಲ್ಯವಿವಾಹ, ಬಾಲಕಾರ್ಮಿಕತೆ ಸಂಕಷ್ಟದಲ್ಲಿನ ಮಕ್ಕಳ ರಕ್ಷಣೆ ಸೇರಿದಂತೆ ವಿವಿಧ ರೀತಿಯ ಮಕ್ಕಳ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಲು ಸಾಧ್ಯವಾಗಲಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಎಲ್ಲಾ ಸರ್ಕಾರಿ, ಅರೆ ಸರ್ಕಾರಿ, ಶೈಕ್ಷಣಿಕ ಸಂಸ್ಥೆಗಳು, ಖಾಸಗಿ ಸೇವಾ ಸಂಸ್ಥೆಗಳು ಸೇರಿದಂತೆ ಎಲ್ಲಾ ಕಟ್ಟಡಗಳ ಮೇಲೆ ಮಕ್ಕಳ ಸಹಾಯವಾಣಿ ಸಂಖ್ಯೆ 1098 ನ್ನು ಕಡ್ಡಾಯವಾಗಿ

ಶಾಶ್ವತ ಫಲಕದಲ್ಲಿ ಪ್ರದರ್ಶಿಸಲು ಮುಖ್ಯ ಕಾರ್ಯದರ್ಶಿಗಳು ಸೂಚನೆ ನೀಡಿದ್ದಾರೆ. ಈಗಾಗಲೇ ಕೆಲವು ಇಲಾಖೆಗಳು ಈ ಕುರಿತು ಕ್ರಮವಹಿಸಿವೆ. ಕೆಲವು ಇಲಾಖೆಗಳಲ್ಲಿ ಈ ಬಗ್ಗೆ ನಿರ್ದೇಶನವಿಲ್ಲ ಎಂಬ ಗೊಂದಲಗಳಿಂದ ಶಾಶ್ವತ ಫಲಕಗಳಲ್ಲಿ ಪ್ರದರ್ಶಿಸದೇ ಇರುವುದು ತಿಳಿದು ಬಂದಿದ್ದು, ಮಕ್ಕಳ ಸಹಾಯವಾಣಿ ಸಂಖ್ಯೆಯನ್ನು ಶಾಶ್ವತ ಫಲಕದಲ್ಲಿ ಪ್ರದರ್ಶಿಸದೆ ಇರುವ ಇಲಾಖೆಗಳು ಯಾವುದೇ ಗೊಂದಲಗಳಿಗೆ ಆಸ್ಪದ ಕೊಡದೇ ತಕ್ಷಣ ಕ್ರಮಕೈಗೊಂಡು ಮಕ್ಕಳ ಸಹಾಯವಾಣಿ ಸಂಖ್ಯೆ 1098 ನ್ನು ತಮ್ಮ ಇಲಾಖೆಯ ಶಾಶ್ವತ ಫಲಕದಲ್ಲಿ ಪ್ರದರ್ಶಿಸುವಂತೆ ಮುಖ್ಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

# ಮಹಾನವಮಿ/ದಸರಾ ಹಬ್ಬದ ಪ್ರಯುಕ್ತ ವಿಶೇಷ ಬಸ್‌ಗಳ ವ್ಯವಸ್ಥೆ

ಕಲಬುರಗಿ:ಸೆ,20–ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕಲಬುರಗಿ ವಿಭಾಗ–2ರ ವತಿಯಿಂದ ಇದೇ ಸೆಪ್ಟೆಂಬರ್ 19 ರಿಂದ ಅಕ್ಟೋಬರ್ 9 ರವರೆಗೆ ಮಹಾನವಮಿ/ದಸರಾ ಹಬ್ಬದ ಪ್ರಯುಕ್ತ ತುಳಜಾಪೂರ ಅಂಬಾಭವಾನಿ ದರ್ಶನಕ್ಕೆ ಹೋಗುವ ಭಕ್ತಾದಿಗಳ ಅನುಕೂಲಕ್ಕಾಗಿ ಈ ಕೆಳಕಂಡ ಬಸ್‌ನಿಲ್ದಾಣ/ಘಟಕಗಳಿಂದ ವಿಶೇಷ (ಹೆಚ್ಚಿನ) ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ ಎಂದು ಕಲಬುರಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ವಿಭಾಗ–2ರ ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ಸಂಚಾರ ಅಧಿಕಾರಿ ರವೀಂದ್ರಕುಮಾರ–7760984086, ನಿಲ್ದಾಣ ಅಧಿಕಾರಿ ಮಲ್ಲಿಕಾರ್ಜುನ ಜೋಗೂರ–9686976451, ವಿಭಾಗೀಯ ಕಚೇರಿಯ ಸಹಾಯಕ ಸಂಚಾರ ಅಧೀಕ್ಷಕ–7760993920, ಕಲಬುರಗಿ ಕೇಂದ್ರ ಬಸ್‌ನಿಲ್ದಾಣದ ಸಂಚಾರ ನಿರೀಕ್ಷಕ ಸೂರ್ಯಕಾಂತ ಸಿಂಗೆ–8618637395, ಆಳಂದ ಬಸ್ ನಿಲ್ದಾಣ ಘಟಕ ವ್ಯವಸ್ಥಾಪಕ–(ಪ್ರ) ಯೋಗಿನಾಥ ಸರಸಂಬಿ–7760992116, ಜೇವರ್ಗಿ ಬಸ್‌ನಿಲ್ದಾಣದ ಘಟಕ ವ್ಯವಸ್ಥಾಪಕ ಜೆ.ಡಿ. ದೊಡಮನಿ–7760992118 ಹಾಗೂ ಅಫಜಲಪುರ ಬಸ್ ನಿಲ್ದಾಣದ ಘಟಕ ವ್ಯವಸ್ಥಾಪಕ ಅಮೀನಪ್ಪ ಬೋವಿ–7760992121 ಇವರನ್ನು ಸಂಪರ್ಕಿಸಬೇಕು.

# ವೀರಣ್ಣ ತುಪ್ಪದ್‌ರಿಗೆ ಪರಿಸರೋತ್ಸವ ಪ್ರಶಸ್ತಿ ಪ್ರದಾನ



ಹುಮ್ನಾಬಾದ್:ಸೆ.20:ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಮಾದರಿಯ ಪ್ರಥಮ ದರ್ಜೆ ಕಾಲೇಜು ಮಾಡಲು ಹಗಲಿರುಳು ಶ್ರಮಿಸುತ್ತಿರುವ ಕಾಲೇಜಿನ ಪ್ರಾಂಶುಪಾಲರಾದ ವೀರಣ್ಣ ತುಪ್ಪದವರಿಗೆ ಈ ವರ್ಷದ 2025 26 ನೇ ಸಾಲಿನ ಪರಿಸರೋತ್ಸವ ಪ್ರಶಸ್ತಿ ಅಂಗವಾಗಿ ಇವರಿಗೆ ಅತ್ಯುತ್ತಮ ಪ್ರಾಂಶುಪಾಲರು ಪ್ರಶಸ್ತಿ ನೀಡಿ ಪರಿಸರವಾದಿ ಶೈಲೇಂದ್ರ ಕಾವಡಿ ಸನ್ಮಾನಿಸಿ ಗೌರವಿಸಿದರು. ಪಟ್ಟದ ಡಿಗ್ರಿ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಿಗೆ ಸನ್ಮಾನಿಸಿ ಗೌರವಿಸಿದರು. ಅರ್ಪಣಾ ಶೆಟ್ಟಿ ಸತೀಶ್ ಡೊಂಗ್ರೆ, ರಾಜಾಬಾಯಿ, ಅರುಣ್ ಕುಮಾರ್ ಚಂದನ, ಅಶ್ವಿನಿ ,ಶಿವಾಜಿ ರಾಥೋಡ್, ಅಮರ್ ಗಿರಿ ಉಪಸ್ಥಿತರಿದ್ದರು



ಕಲಬುರಗಿ: ನಗರದ ಕಣ್ಣಿ ಮಾರ್ಕೆಟ್ ಬಿಲ್ಡಿಂಗ್‌ನ ಕನ್ನಡ ನಾಮಫಲಕವನ್ನು ತೆರವುಗೊಳಿಸಿದ ಸಂಬಂಧಪಟ್ಟ ಅಧಿಕಾರಿಯನ್ನು ಸೇವೆಯಿಂದ ವಜಾಗೊಳಿಸಿ, ಕೂಡಲೇ ನಾಮಫಲಕದಲ್ಲಿ ಕನ್ನಡ ಭಾಷೆ ಪದಬಳಕೆ ಮಾಡುವಂತೆ ಕಲ್ಯಾಣ ಕರ್ನಾಟಕ ಕನ್ನಡಪರ ಸಂಘಟನೆ ಓಕ್ಕೂಟದ ವತಿಯಿಂದ ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಓಕ್ಕೂಟದ ಗೌರವಾಧ್ಯಕ್ಷ ಜಗನ್ನಾಥ ಸೂರ್ಯವಂಶಿ, ಜಿಲ್ಲಾಧ್ಯಕ್ಷ ಸಚೀನ್ ಫರಹಾಬಾದ, ಡಾ.ದತ್ತು ಭಾಸಗಿ, ರವಿ ದೇಗಾವಿ, ಮನೋಹರ ಬಿರನೂರ, ಶರಣು ಹೊಸಮನಿ, ಆನಂದ, ಸುನೀಲ, ಸುರೇಶ ಹನಗಡಿ ಇದ್ದರು.



ಕಲಬುರಗಿ: ನಗರದ ಪತ್ರಿಕಾ ಭವನದಲ್ಲಿ ಪ್ರಜಾ ಸಿದ್ದಿ ಕನ್ನಡ ದಿನ ಪತ್ರಿಕೆಯ 15ನೇ ಸಂಭ್ರಮದ ನಿಮಿತ್ತ ಕಲ್ಯಾಣ ಕರ್ನಾಟಕ ಪ್ರಥಮ ಪತ್ರಕರ್ತರ ಸಮ್ಮೇಳನಕ್ಕೆ ಶಾಸಕರಾದ ಅಲ್ಲಮಪ್ರಭು ಪಾಟೀಲ ಅವರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸಮೇಳನಾಧ್ಯಕ್ಷರಾದ ಡಾ.ನಿರಂಜನ್ ಸತ್ಯಂಪೇಟೆ, ಪತ್ರಿಕೆ ಸಂಪಾದಕರಾದ ಶರಣಬಸಪ್ಪ ಸೂಗೂರ, ಹಿರಿಯ ಪರ್ತಕರ್ತರಾದ ಪ್ರಭಾಕರ ಜೋಶಿ, ಮಹಿಪಾಲ ರೆಡ್ಡಿ ಮುನ್ನೂರ, ಸುರೇಶ ಬಡಿಗೇರ, ಬಾಬುರಾವ ಕೋಬಾಳ, ಕ.ಕ.ಸ.ಸಂಘದ ಅಧ್ಯಕ್ಷ ಗುರುರಾಜ ಕುಲಕರ್ಣಿ, ದ.ಸಂ.ಸ. ರಾಜ್ಯ ಸಂಘಟನಾ ಸಂಚಾಲಕ ಮರಿಯಪ್ಪ ಹಳ್ಳಿ, ಹಣಮಂತ ಹಳ್ಳಿಕೇರಿ, ವಿಜಯಕುಮಾರ ತೇಗಲತಿಪ್ಪಿ, ಗವಿಸಿದ್ದಪ್ಪ ಪಾಟೀಲ, ಡಾ.ಚಿದಾನಂದ ಕುಡ್ಡನ, ಡಾ.ರಾಜಕುಮಾರ ಮಾಳಗೆ, ಡಾ.ಸಿದ್ದಪ್ಪ ಹೋಸಮನಿ ಸೇರಿದಂತೆ ಇನ್ನಿತರರಿದ್ದರು.



ಕಲಬುರಗಿ: ನಗರದ ರೋಟರಿ ಕ್ಲಬ್ ಸಭಾಂಗಣದಲ್ಲಿ ಶ್ರೀ ಶರಣ ಶಬರೀಶ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ 17ನೇ ಸಾಮಾನ್ಯ ಸಭೆಯನ್ನು ಶ್ರೀ ಶರಣ ಶಬರೀಶ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ಅಧ್ಯಕ್ಷರಾದ ಬಸವರಾಜ ಮಾಲಿಪಾಟೀಲ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ಸಂತೋಷಕುಮಾರ ಬಿ.ಶಟ್ಟಿ, ನಿರ್ದೇಶಕರಾದ ರವಿ ಅವಟಿ, ಸಂಗಮೇಶ ನರಶೆಟ್ಟಿ, ಅಮರೇಶ ಪಾಟೀಲ, ಪ್ರವೀಣ್ ಬಿ.ಆರ್, ಹಾಗೂ ಸಿ.ಇ.ಓ ವಿನೋದಕುಮಾರ್ ಅಷ್ಠಗಿಕರ್ ಇದ್ದರು.



ಕಲಬುರಗಿ: ಉತ್ತರ ಮತಕ್ಷೇತ್ರದ ಮಹಾದೇವ ನಗರದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಜನ್ಮದಿನ ನಿಮಿತ್ತ ಭಾರತೀಯ ಜನತಾ ಪಾರ್ಟಿ ಉತ್ತರ ಮಂಡಲ ವತಿಯಿಂದ ಸೇವಾ ಪಾಕ್ಷಿಕ ಅಭಿಯಾನ ಅಡಿಯಲ್ಲಿ ರಕ್ತದಾನ ಶಿಬಿರ ಹಮ್ಮಿಕೋಳ್ಳಲಾಯಿತು. ಈ ಸಂದರ್ಬದಲ್ಲಿ ಉಮೇಶ ಪಾಟೀಲ್, ಸಚಿನ್ ಕಡಗಂಚಿ, ಮಲ್ಲಿಕಾರ್ಜುನ ಖೆಮಜಿ, ವಿಜಯಕುಮಾರ ಬಂಗಾರಿ, ಮಹೇಶ ಪಟ್ಟಣ, ಅಶೋಕ್ ಮಾನಕರ, ಸಂಗಮೇಶ ಮುನ್ನಳ್ಳಿ, ಶಾಂತಕುಮಾರ ದುಧನಿ, ಅಂಬಾದಾಸ ಕುಲಕರ್ಣಿ, ಚನ್ನು ಲಿಂನವಾಡಿ, ಗಂಗಾಧರ ಬಿಲಗುಂದಿ, ಶರಣು ಸೀಗಿ, ವಿಜಯಕುಮಾರ್ ಬಿ ಕೆ, ಶಿವಕುಮಾರ್ ಜಾಬ್‌ಶೆಟ್ಟಿ, ಮಹೇಶ ಚವ್ಹಾಣ, ವಿಕಾಸ್ ಕಾರ್ಣಿಕ, ಪ್ರಶಾಂತ ಗೋಡಕೆ, ಮಾರುತಿ ಕಮ್ಮಾರ ಹಾಗೂ ಬಸವೇಶ್ವರ ಆಸ್ಪತ್ರೆಯ ಸಿಬ್ಬಂದಿಗಳಾದ ಪರಮೇಶ, ಮಹಾಂತ ಸ್ವಾಮಿ, ವಿಜಯಕುಮಾರ, ಅಂಬರೀಶ ಹೌದಾ ಇದ್ದರು.

